

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 23 ಶುಕ್ರವಾರ 2022

ಸಂಪುಟ: 43 | ಸಂಚಿಕೆ: 158 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ದಸರಾ ಉದ್ಘಾಟನೆಗೆ ರಾಷ್ಟ್ರಪತಿ ದ್ರೌಪದಿ ಮುರ್ಮುಗೆ ಆಹ್ವಾನ

ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರ ನಿಯೋಗ ಭೇಟಿ



ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಮೈಸೂರು ದಸರಾಗೆ ಆಹ್ವಾನ ನೀಡಲಾಯಿತು. ಚಿತ್ರದಲ್ಲಿ ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಸಚಿವೆ ಶಶಿಕಲಾ ಜೊಲ್ಲೆ ಇನ್ನಿತರರಿದ್ದಾರೆ.

ಮೈಸೂರು, ಸೆ. 22(ಆರ್‌ಕೆ)– ಈ ಸಾಲಿನ ಮೈಸೂರು ದಸರಾ ಮಹೋತ್ಸವ ಉದ್ಘಾಟಿಸಲಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ನೇತೃತ್ವದಲ್ಲಿ ಗುರುವಾರ ನವದೆಹಲಿಯ ರಾಷ್ಟ್ರಪತಿ ಭವನದಲ್ಲಿ ಪುಷ್ಪಗುಚ್ಛ, ಫಲತಾಂಬೂಲದೊಂದಿಗೆ ಅಭಿನಂದಿಸಿ, ಆಹ್ವಾನಿಸಲಾಯಿತು.

ಬುಧವಾರ ಬೆಳಗ್ಗೆ ವಿಮಾನದಲ್ಲಿ ಮುಜರಾಯಿ ಸಚಿವೆ ಶಶಿಕಲಾ ಜೊಲ್ಲೆ, ಪತಿ ಚಿಕ್ಕೋಡಿ ಸಂಸದ ಅಣ್ಣಾ ಸಾಹೇಬ್ ಶಂಕರ ಜೊಲ್ಲೆ, ಮೈಸೂರು ಮೇಯರ್ ಶಿವಕುಮಾರ್, ಸಂಸದ ಪ್ರತಾಪ್ ಸಿಂಹ ಅವರೊಂದಿಗೆ ದೆಹಲಿಗೆ ತೆರಳಿದ ಉಸ್ತುವಾರಿ ಸಚಿವರು, ಪೂರ್ವನಿಗದಿಯಂತೆ ಮಧ್ಯಾಹ್ನ 12.15 ಗಂಟೆ ವೇಳೆಗೆ ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಿದರು.

ಸೆಪ್ಟೆಂಬರ್ 26ರಿಂದ ಆರಂಭವಾಗುವ ವಿಶ್ವಪ್ರಸಿದ್ಧ ನಾಡ ಹಬ್ಬ ದಸರಾ ಮಹೋತ್ಸವ ಉದ್ಘಾಟಿಸುವಂತೆ ಸಚಿವ ಸೋಮಶೇಖರ್, ಸಂಸದ ಪ್ರತಾಪ್ ಸಿಂಹ ಮನವಿ ಮಾಡಿ, ಈ ಬಾರಿಯ ದಸರಾವನ್ನು ಅದ್ಧೂರಿಯಾಗಿ ಆಚರಿಸುತ್ತಿದ್ದು, ಸರ್ಕಾರ ಹಾಗೂ ಮೈಸೂರು ಜಿಲ್ಲಾಡಳಿತದಿಂದ ಹತ್ತು ಹಲವು ವಿಭಿನ್ನ ಕಾರ್ಯಕ್ರಮಗಳನ್ನು ಆಯೋಜಿಸಿರುವುದಾಗಿ ವಿವರಿಸಿದರು.

ಆಹ್ವಾನ ಸ್ವೀಕರಿಸಿದ ದ್ರೌಪದಿ ಮುರ್ಮು ಅವರು, ದಸರಾ ಉದ್ಘಾಟನೆಗೆ ಸಮ್ಮತಿಸಿ, ಅಧಿದೇವತೆ ತಾಯಿ ಚಾಮುಂಡೇಶ್ವರಿ ದೇವಿ ನಾಡಿನ ಜನತೆಗೆ ಒಳಿತನ್ನು ಮಾಡಲಿ ಎಂದು ಶುಭ ಹಾರೈಸಿದರು ಎಂದು ನಿಯೋಗ ತಿಳಿಸಿದೆ. ರಾಷ್ಟ್ರಪತಿಗಳಿಂದ ಈ ಬಾರಿಯ ದಸರಾ ಉದ್ಘಾಟನೆ ನೆರವೇರಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸೆಪ್ಟೆಂಬರ್ 10ರಂದು ಘೋಷಿಸಿದ್ದರು. ▶ 9ನೇ ಪುಟಕ್ಕೆ

ಕರ್ನಾಟಕವೂ ಸೇರಿದಂತೆ ದೇಶದ 15 ರಾಜ್ಯಗಳ 93 ಸ್ಥಳಗಳಲ್ಲಿ ಎನ್‌ಐಎ ದಾಳಿ

ಭಯೋತ್ಪಾದನೆಗೆ ಬೆಂಬಲ ಆರೋಪದಡಿ ಪಿಎಫ್‌ಐನ 45 ಮಂದಿ ಬಂಧನ

ಬೆಂಗಳೂರು, ಸೆ.22– ಭಯೋತ್ಪಾದನೆಗೆ ಬೆಂಬಲ ಆರೋಪದ ಮೇರೆಗೆ ದೇಶದಲ್ಲಿ ದಾಖಲಾಗಿದ್ದ 5 ಪ್ರಕರಣಗಳಿಗೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯ (ಇಡಿ), ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ಹಾಗೂ ರಾಜ್ಯ ಪೊಲೀಸ್ ತಂಡಗಳು ಗುರುವಾರ ಕರ್ನಾಟಕವೂ ಸೇರಿದಂತೆ ದೇಶದ 15 ರಾಜ್ಯಗಳ 93 ಸ್ಥಳಗಳಲ್ಲಿ ಜಂಟಿ ದಾಳಿ ನಡೆಸಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾದ (ಪಿಎಫ್‌ಐ) 45 ಮಂದಿಯನ್ನು ಬಂಧಿಸಲಾಗಿದೆ.

ಕರ್ನಾಟಕದಲ್ಲಿ 7 ಮಂದಿಯನ್ನು ಬಂಧಿಸಿರುವ ಎನ್‌ಐಎ ಅಧಿಕಾರಿಗಳು ಅತೀ ಹೆಚ್ಚು ಅಂದರೆ ಕೇರಳದಲ್ಲಿ 2 ಪ್ರಕರಣಗಳಲ್ಲಿ ಒಟ್ಟು 19 ಮಂದಿ, ತಮಿಳುನಾಡಿನಲ್ಲಿ 2 ಪ್ರಕರಣಗಳಲ್ಲಿ ಒಟ್ಟು 11 ಮಂದಿ, ಆಂಧ್ರಪ್ರದೇಶದಲ್ಲಿ ನಾಲ್ವರು, ರಾಜಸ್ಥಾನದಲ್ಲಿ ಇಬ್ಬರು, ಉತ್ತರಪ್ರದೇಶ ಮತ್ತು ತೆಲಂಗಾಣದಲ್ಲಿ ತಲಾ ಒಬ್ಬರನ್ನು ಬಂಧಿಸಲಾಗಿದೆ ಎಂದು ಎನ್‌ಐಎ ಅಧಿಕೃತ ಪ್ರಕಟಣೆ ತಿಳಿಸಿದೆ.

ಕರ್ನಾಟಕದಲ್ಲಿ ಪಿಎಫ್‌ಐ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಅನಿಶ್ ಅಹಮದ್, ಕಾರ್ಯದರ್ಶಿ ಮೊಹಮ್ಮದ್ ಶಕೀಬ್ ಅಲಿಯಾಸ್ ಶಕೀಫ್, ಮೊಹಮ್ಮದ್ ಫಾರೂಕ್ ಉರ್ ರೆಹಮಾನ್, ರಾಷ್ಟ್ರೀಯ ಕಾರ್ಯಕಾರಿ ಸದಸ್ಯರಾದ ಅಫ್ಸರ್ ಪಾಷ, ಅಬ್ದುಲ್ ವಾಹೀದ್ ಸೇಠ್, ರಾಜ್ಯ ಕಾರ್ಯಕಾರಿ ಸದಸ್ಯರಾದ ಶಾಹೀದ್ ನಾಸೀರ್, ಯಾಸೀರ್ ಅರಾಫತ್ ಹಸನ್ ಬಂಧನಕ್ಕೆ ಒಳಗಾದವರು.

ಕೇರಳದಲ್ಲಿ ಓಎಂಎ ಸಲಾಂ ಅಲಿಯಾಸ್ ಓಎಂ ಅಬ್ದುಲ್ ಸಲಾಂ, ಕೆ.ಪಿ.ಜಷೀರ್, ವಿ.ಪಿ.ನಜಾರುದ್ದೀನ್ ಎಳಮರಮ್ ಅಲಿಯಾಸ್ ನಜಾರುದ್ದೀನ್ ಎಳಮರಮ್, ಮೊಹಮ್ಮದ್ ಬಷೀರ್, ಕೆ.ಪಿ.ಷಫೀರ್, ಈ ಅಬುಬಕರ್, ಪ್ರೊ ಪಿ.ಕೋಯಾ ಅಲಿಯಾಸ್ ಖಲೀಂ ಕೋಯಾ, ಇ.ಎಂ. ಅಬ್ದುಲ್ ರೆಹಿಮಾನ್ ಅಲಿಯಾಸ್ ಇ.ಎಂ. ಹಾಗೂ ಮತ್ತೊಂದು ಪ್ರಕರಣದಲ್ಲಿ ನಿಜಾಮುದ್ದೀನ್ ಸನ್ ಆಫ್ ಮುಹಮ್ಮದ್, ಟಿ.ಎಸ್.ಸೈನುದ್ದೀನ್, ಯಹೀಯಾ ಕೋಯಾ ತಂಗಳ್, ಕೆ.ಮುಹಮ್ಮದ್ ಅಲಿ ಅಲಿಯಾಸ್ ಕುನ್ಹಾಪ್ಪೋ, ಸಿ.ಟಿ.ಸುಲೈಮಾನ್, ಪಿ.ಕೆ.ಬುಸ್ಮಾನ್ ಅಲಿಯಾಸ್ ಪಳ್ಳಿಕರಂಜಳಿಲ್, ಕುಂಜಿಪ್ಪು ಉಸ್ಮಾನ್ ಅಲಿಯಾಸ್ ಉಸ್ಮಾನ್ ▶ 9ನೇ ಪುಟಕ್ಕೆ



ಪಿಎಫ್‌ಐ, ಎಸ್‌ಡಿಪಿಐ ಪ್ರತಿಭಟನೆ

ಬೆಂಗಳೂರು: ಪಿಎಫ್‌ಐ ನಾಯಕರು ಹಾಗೂ ಸದಸ್ಯರ ಮನೆ ಹಾಗೂ ಕಚೇರಿಗಳ ಮೇಲೆ ದೇಶಾದ್ಯಂತ ಎನ್‌ಐಎ ದಾಳಿ ನಡೆಸಿದ್ದನ್ನು ಖಂಡಿಸಿ ದೇಶದ ಹಲವೆಡೆ ಪಿಎಫ್‌ಐ ಮತ್ತು ಎಸ್‌ಡಿಪಿಐ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು. ಕರ್ನಾಟಕದ ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಕಲಬುರ್ಗಿ ಸೇರಿದಂತೆ ಹಲವೆಡೆ ಪ್ರತಿಭಟನೆಗಳು ನಡೆಯಿತು. ಕೆಲವೆಡೆ ಗುಂಪನ್ನು ಚದುರಿಸಲು ಪೊಲೀಸರು ಲಾಠಿ ಪ್ರಹಾರವನ್ನೂ ಮಾಡಬೇಕಾಯಿತು. ಅಲ್ಲದೇ ಪ್ರತಿಭಟನಾ ವೇಳೆ ನೂರಾರು ಮಂದಿಯನ್ನು ಪೊಲೀಸರು ವಶಕ್ಕೆ ಪಡೆದು, ನಂತರ ಬಿಡುಗಡೆ ಮಾಡಿದರು.

ಮೈಸೂರಲ್ಲೂ ಪಿಎಫ್‌ಐ ಮಾಜಿ ಜಿಲ್ಲಾಧ್ಯಕ್ಷ ವಶಕ್ಕೆ

ಬೆಂಬಲಿಗರಿಂದ ಸಿಸಿಬಿ ಕಚೇರಿಗೆ ಮುತ್ತಿಗೆ, ತೀವ್ರ ಆಕ್ರೋಶ



ಮೈಸೂರು, ಸೆ.22 (ಆರ್‌ಕೆ)–ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ), ಜಾರಿ ನಿರ್ದೇಶನಾಲಯ (ಇಡಿ) ಹಾಗೂ ಪೊಲೀಸ್ ಅಧಿಕಾರಿಗಳು ಬುಧವಾರ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ನಾಯಕರು ಹಾಗೂ ಸದಸ್ಯರ ಮನೆ ಹಾಗೂ ಕಚೇರಿಗಳ ಮೇಲೆ ರಾಷ್ಟ್ರವ್ಯಾಪಿ ಕೆಲ ರಾಜ್ಯಗಳಲ್ಲಿ ಏಕ ಕಾಲಕ್ಕೆ ದಾಳಿ ನಡೆಸಿ, 45 ಮಂದಿಯನ್ನು ಬಂಧಿಸಿದೆ.

ಮೈಸೂರಿನ ಶಾಂತಿನಗರ 10ನೇ ಕ್ರಾಸ್‌ನಲ್ಲಿ ವಾಸವಾಗಿದ್ದ ಮಹಮದ್ ಖಲೀಂವುಲ್ಲಾ ಖಾನ್ (57) ಎಂಬುವರನ್ನು ಸಿಸಿಬಿ ಪೊಲೀಸರು ಬುಧವಾರ ಮುಂಜಾನೆ ವಶಕ್ಕೆ ತೆಗೆದುಕೊಂಡು ಎನ್‌ಐಎ ಅಧಿಕಾರಿಗಳ ವಶಕ್ಕೆ ಒಪ್ಪಿಸಿದರು. ಶಾಂತಿನಗರ 7ನೇ ಕ್ರಾಸ್‌ನಲ್ಲಿರುವ ಅಮ್ಮರ್ ಮಸೀದಿ ಅಧ್ಯಕ್ಷರಾಗಿರುವ ಖಲೀಂವುಲ್ಲಾ ಖಾನ್ ಅವರು ಪಿಎಫ್‌ಐನ ಮಾಜಿ ಜಿಲ್ಲಾಧ್ಯಕ್ಷರು ಎಂದು ಪೊಲೀಸರು ತಿಳಿಸಿದ್ದಾರೆ. ವಿಷಯ ತಿಳಿಯುತ್ತಿದ್ದಂತೆಯೇ ಸಿಸಿಬಿ ಕಚೇರಿ ಬಳಿ ಜಮಾಯಿಸಿದ ಖಲೀಂವುಲ್ಲಾ ಖಾನ್ ಬೆಂಬಲಿಗರು ಹಾಗೂ ಪಿಎಫ್‌ಐ ಸಂಘಟನೆ ಸದಸ್ಯರು, ಕಚೇರಿಗೆ ಮುತ್ತಿಗೆ ▶ 9ನೇ ಪುಟಕ್ಕೆ

ಚೀತಾ ಪ್ರಾಜೆಕ್ಟ್‌ನ ಮುಖ್ಯ ತಂಡದಲ್ಲಿ ಕೊಡಗಿನ ವನ್ಯಜೀವಿ ಜೀವಶಾಸ್ತ್ರಜ್ಞ ಪುಟ–8

22 ಕ್ಯಾರೆಟ್ ಚಿನ್ನದ ದರ @ ತೊಳಸಿ
ತೊಳಸಿ ಜ್ಯುವೆಲ್ಸ್ THOLASI JEWELS Fine Jewellery Since Generations
₹ 4600/- ಇಂದಿನ ದಿನದ ಬೆಲೆ
ಅಶೋಕ ರಸ್ತೆ, ಮೈಸೂರು. ಫೋ: 0821–2521926, ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221–200926

S.M GOLD
ಗಿರವಿ ಚಿನ್ನಾಭರಣ ಖರೀದಿ
ಒಂದು ಗ್ರಾಂ ಚಿನ್ನಕ್ಕೆ 5100
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನ ಆಭರಣಗಳನ್ನು ನಾವೇ ಬಿಡಿಸಿ ಇಂದಿನ ಬೆಲೆಗೆ ತೆಗೆದುಕೊಳ್ಳುತ್ತೇವೆ
ಕೂಡಲೇ ಸಂಪರ್ಕಿಸಿ – (T&C)
9964522225

SDJ GOLD
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಹಣಕೊಟ್ಟು ಬಿಡಿಸಿ ಉಳಿದ ಹಣ ತಕ್ಷಣ ಕೊಡುತ್ತೇವೆ.
ಒಂದು ಗ್ರಾಂ ಚಿನ್ನಕ್ಕೆ 5200
8884304444

ಮಹಾತ್ಮ ಗಾಂಧಿ ನಗರ ವಿಕಾಸ ಯೋಜನೆಯಡಿ

ಮೈಸೂರು ಅಭಿವೃದ್ಧಿಗೆ 150 ಕೋಟಿ ಮಂಜೂರು

- ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಮಾಹಿತಿ
- ಮೋದಿ ಯುಗ ಉತ್ಸವದಲ್ಲಿ ಅಭಿವೃದ್ಧಿ ಯೋಜನೆಗೆ ಚಾಲನೆ, ವಿವಿಧ ಸವಲತ್ತು ವಿತರಣೆ ಬಗ್ಗೆ ಪ್ರಶಂಸೆ
- ಮೈಸೂರಲ್ಲಿ ಹೊಸ ಬೆಳಕು, ಸಮರ್ಪಕ ಕುಡಿಯುವ ನೀರು ಪೂರೈಕೆ



ಮೈಸೂರಿನ ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ಪಾರ್ಕ್‌ನಲ್ಲಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ನಡೆಯುತ್ತಿರುವ ಮೋದಿ ಯುಗ ಉತ್ಸವ ಕಾರ್ಯಕ್ರಮದಲ್ಲಿ ಶ್ವಾನಗಳ ಚಿಕಿತ್ಸೆ ಮತ್ತು ಪುನರ್ವಸತಿ ಕೇಂದ್ರಕ್ಕೆ ಸಚಿವ ಭೈರತಿ ಬಸವರಾಜ್ ಗುರುವಾರ ಶಿಲಾನ್ಯಾಸ ನೆರವೇರಿಸಿದರು.

ಮೈಸೂರು,ಸೆ.22(ಎಂಟಿವೈ)–ಸಾಂಸ್ಕೃತಿಕ ಹಾಗೂ ಪಾರಂಪರಿಕ ನಗರವೂ ಆಗಿರುವ ಮೈಸೂರಿನ ಪ್ರತಿಷ್ಠೆಗೆ ಧಕ್ಕೆಯಾಗದಂತೆ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಮೈಸೂರು ಮಹಾನಗರ ಪಾಲಿಕೆಗೆ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆಯಡಿ 150 ಕೋಟಿ ರೂ. ಮಂಜೂರು ಮಾಡಿರುವುದಾಗಿ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜು ಇಂದಿಲ್ಲಿ ತಿಳಿಸಿದ್ದಾರೆ.

ಮೈಸೂರಿನ ವಿದ್ಯಾರಣ್ಯಪುರಂನ ರಾಮಲಿಂಗೇಶ್ವರ ಪಾರ್ಕ್‌ನಲ್ಲಿ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ನಡೆಯುತ್ತಿರುವ ಮೋದಿ ಯುಗ ಉತ್ಸವ ಕಾರ್ಯಕ್ರಮದಲ್ಲಿ ಗುರುವಾರ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸೌಲಭ್ಯ ವಿತರಿಸಿ ಮಾತನಾಡಿದ ಅವರು, ಮೈಸೂರು ನಗರಕ್ಕೆ ತನ್ನದೇ ಆದ ಪರಂಪರೆ ಇದೆ. ಸಾಂಸ್ಕೃತಿಕ ಹಾಗೂ ಅರಮನೆಗಳ ನಗರಿಯೂ ಆಗಿದೆ. ತನ್ನದೇ ಇತಿಹಾಸ ಹೊಂದಿರುವ ಮೈಸೂರು ನಗರದ ಮಹತ್ವಕ್ಕೆ ಧಕ್ಕೆ ಆಗದಂತೆ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಮೈಸೂರು ಮಹಾನಗರ ಪಾಲಿಕೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಹಾತ್ಮಗಾಂಧೀಜಿ ನಗರ ವಿಕಾಸ ಯೋಜನೆಯಡಿ 150 ಕೋಟಿ ರೂ. ಬಿಡುಗಡೆ ಮಾಡಲಾಗಿದೆ. ಅದರಲ್ಲಿ, ಕೃಷ್ಣರಾಜ ಕ್ಷೇತ್ರಕ್ಕೆ 25 ಕೋಟಿ ರೂ. ನೀಡಿದ್ದೇವೆ. ಎಸ್‌ಹೆಚ್‌ಪಿ ಯೋಜನೆಯಡಿ 50 ಕೋಟಿ ▶ 10ನೇ ಪುಟಕ್ಕೆ

ಕಾಂಗ್ರೆಸ್‌ನ 'ಪೇಸಿಎಂ' ಪೋಸ್ಟರ್‌ಗೆ ಪ್ರತಿಯಾಗಿ

ಬಿಜೆಪಿಯಿಂದ ಸ್ಕ್ಯಾಮ್ ರಾಮಯ್ಯ!

ಸಿದ್ದರಾಮಯ್ಯ ಕಾಲದ ಹಗರಣ ಆರೋಪದ 28 ಪುಟಗಳ ಪುಸ್ತಕ



ಬೆಂಗಳೂರು, ಸೆ.22(ಕೆಎಂಶಿ)– ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿರುದ್ಧ 'ಪೇಸಿಎಂ' ಪೋಸ್ಟರ್ ಬಿಡುಗಡೆ ಮಾಡಿದ್ದ ಬೆನ್ನಲ್ಲೇ ರಾಜ್ಯ ಬಿಜೆಪಿ ಸಿದ್ದರಾಮಯ್ಯ ಅವರ ಆಡಳಿತದಲ್ಲಿ ನಡೆದಿರುವ ಹಗರಣಕ್ಕೆ ಸಂಬಂಧಿಸಿದಂತೆ 28 ಪುಟಗಳ 'ಸ್ಕ್ಯಾಮ್ ರಾಮಯ್ಯ' ಪುಸ್ತಕವನ್ನು ಬಿಡುಗಡೆ ಮಾಡಿದೆ.

ಜಾಣ ಕುರುಡುತನ, ಜಾಣ ಕಿವುಡುತನ, ಹಗರಣಗಳ ಸರದಾರ ಸಿದ್ದರಾಮಯ್ಯ ಎಂಬ ಈ ಪುಸ್ತಕದಲ್ಲಿ ಅವರ ಆಡಳಿತದಲ್ಲಿ ನಡೆದಿದೆ ಎನ್ನಲಾದ ಭ್ರಷ್ಟಾಚಾರಗಳನ್ನು ಬಿಜೆಪಿ ಜನರ ಮುಂದಿಟ್ಟಿದೆ. ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್, ಸ್ಕ್ಯಾಮ್ ರಾಮಯ್ಯ ಪುಸ್ತಕವನ್ನು ಸುದ್ದಿಗೋಷ್ಠಿಯಲ್ಲಿ ಬಿಡುಗಡೆ ಮಾಡಿದರು.

ಅರ್ಕಾವತಿ ಬಡಾವಣೆಯ ರಿಡೂ, ಅರ್ಜಿ ಹಾಕದೇ ಇದ್ದವರಿಗೂ ನೌಕರಿ, ಕಾಮಗಾರಿ ಇಲ್ಲದೆ ಬಿಲ್ ಪಾವತಿ, ಸಿದ್ದು ಆಪ್ತನ ಮಗ ಮರಳು ಲೂಟಿ, ಅಹಿಂದ ವರ್ಗಕ್ಕೆ ಮಾಡಿದ ಮಹಾಮೋಸ, ಕೋಳಗೇರಿ ಮಂಡಳಿಯಲ್ಲಿ 2500 ಕೋಟಿ ರೂ. ಲೂಟಿ, ಕಸ ವಿಲೇವಾರಿಯಲ್ಲಿ ಸಿದ್ದರಾಮಯ್ಯ ತಮ್ಮ ನಾಲಿಗೆಯನ್ನು ಚಾಚಿರುವುದು, ಪಡಿತರ ಅಕ್ಕಿ, ಗೋಧಿ ಖರೀದಿಯಲ್ಲಿ 2000 ಕೋಟಿ ರೂ. ಭ್ರಷ್ಟಾಚಾರ. ಹಾಸಿಗೆ ದಿಂಬು ಖರೀದಿಯಲ್ಲೂ ▶ 9ನೇ ಪುಟಕ್ಕೆ

ಸೆ.27ರಿಂದ 7 ದಿನ ದಸರಾದ ಮಸ್ತ್ ಮನರಂಜನೆ ಯುವ ದಸರಾ

ಸೆ.28ರಂದು ಅಪ್ಪು ನಮನ



ಮೆಗಾ ಗಾಯಕರಿಂದ ರಸದೌತಣ; ಚಿತ್ರತಾರೆಯರ ಜಾತ್ರೆ



ಮಂಗ್ಲಿ



ರಘು ದೀಕ್ಷಿತ್



ಕನ್ನಿಕಾ ಕಪೂರ್



ಡಾ.ಶಮಿತಾ ಮಲ್ನಾಡ್



ಅಮಿತ್ ತ್ರಿವೇದಿ



ಸುನಿದಿ ಚೌಹಾನ್

ಮೆಗಾ ಇವೆಂಟ್‌ಗಳು

ಸೆ.27	ಮಂಗ್ಲಿ/ ರಘು ದೀಕ್ಷಿತ್
ಸೆ.28	'ಅಪ್ಪು ನಮನ'
ಸೆ.29	ಕನ್ನಿಕಾ ಕಪೂರ್
ಸೆ.30	ಸ್ಯಾಂಡಲ್‌ವುಡ್ ನೈಟ್
ಅ.1	ಡಾ.ಶಮಿತಾ ಮಲ್ನಾಡ್
ಅ.2	ಅಮಿತ್ ತ್ರಿವೇದಿ
ಅ.3	ಸುನಿದಿ ಚೌಹಾನ್

ಮೈಸೂರು,ಸೆ.22(ಎಸ್‌ಬಿಡಿ)–ಮೈಸೂರು ದಸರಾ ಮಹೋತ್ಸವದಲ್ಲಿ ಮನರಂಜನೆಯ ರಸದೌತಣ ನೀಡುವ 'ಯುವ ದಸರಾ' ಸೆ.27ರಿಂದ ಆರಂಭವಾಗಲಿದೆ. ನಗರದ ಮಹಾರಾಜ ಕಾಲೇಜು ಮೈದಾನದಲ್ಲಿ ಅಂದಿನಿಂದ ಅ.3ರವರೆಗೆ ಒಟ್ಟು 7 ದಿನ ಸಂಜೆ 6ರಿಂದ ರಾತ್ರಿ 10ರವರೆಗೆ ನಡೆಯಲಿರುವ 'ಯುವ ದಸರಾ'ಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಲಿದ್ದು, ಚಿತ್ರನಟ ಕಿಚ್ಚ ಸುದೀಪ್ ವಿಶೇಷ ಆಹ್ವಾನಿತರಾಗಿ ಪಾಲ್ಗೊಳ್ಳಲಿದ್ದಾರೆ. ಶಾಸಕ ಎಲ್. ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಸ್ಥಳೀಯ ಜನಪ್ರತಿನಿಧಿಗಳು ಭಾಗಿಯಾಗಲಿದ್ದಾರೆ. ಈ ಬಾರಿಯೂ ಪ್ರಸಿದ್ಧ ಗಾಯಕರು, ಚಿತ್ರ ತಾರೆಯರು 'ಯುವ ದಸರಾ'ವನ್ನು ರಂಗುಗೊಳಿಸಲಿದ್ದಾರೆ.

ಮಂಗ್ಲಿ ಮೋಡಿ: ಉದ್ಘಾಟನಾ ಸಮಾರಂಭದ ಬಳಿಕ ಮೊದಲ ಕಾರ್ಯಕ್ರಮವಾಗಿ ಪ್ರಸಿದ್ಧ ನೃತ್ಯಪಟು ಮೈಸೂರಿನ ಶ್ರೀಧರ್ ಜೈನ್ ಹಾಗೂ ತಂಡದ ಕಲಾವಿದರು ನೃತ್ಯ ರೂಪಕ ಪ್ರಸ್ತುತಪಡಿಸಲಿದ್ದಾರೆ. ನಂತರ ವಿಶಿಷ್ಟ ಶೈಲಿಯ ಹಾಡುಗಾರಿಕೆಯಿಂದಲೇ ಜನಪ್ರಿಯರಾಗಿರುವ ರಘು ದೀಕ್ಷಿತ್ ಗಾಯನ ಸುಧೆ ಹರಿಸಲಿದ್ದಾರೆ. ಹಾಗೆಯೇ 'ಕಣ್ಣು ಹೊಡಿಯಾಕ ಮೊನ್ನೆ ಕಲತೀನಿ...' ಖ್ಯಾತಿಯ ವಿಶೇಷ ಕಂಠದ ಗಾಯಕಿ ಮಂಗ್ಲಿ ಮೋಡಿ ಮಾಡಲಿದ್ದಾರೆ.

'ಅಪ್ಪು ನಮನ': 2ನೇ ದಿನದಿಂದ (ಸೆ.28) ಕೊನೆವರೆಗೂ 'ಯುವ ದಸರಾ' ಕಾರ್ಯಕ್ರಮದ ಮೊದಲ ಅವಧಿಯಲ್ಲಿ 'ಯುವ ಸಂಭ್ರಮ'ದ ವಿಜೇತ ತಂಡಗಳ ನೃತ್ಯ ಪ್ರದರ್ಶನವಿರಲಿದೆ. ಮೊದಲೇ ಘೋಷಿಸಿದಂತೆ 'ಯುವ ದಸರಾ'ದ ಒಂದು ದಿನವನ್ನು ದಿವಂಗತ ಪುನೀತ್ ರಾಜ್‌ಕುಮಾರ್ ಅವರ ನೆನಪಿನ ಕಾರ್ಯಕ್ರಮಕ್ಕೆ ನಿಗದಿಪಡಿಸಲಾಗಿದೆ. ಅಂತೆಯೇ ಸೆ.28ಕ್ಕೆ ಸಂಗೀತ ನಿರ್ದೇಶಕ, ಗಾಯಕ ಗುರುಕಿರಣ್, ವಿಜಯಪ್ರಕಾಶ್, ಕುನಾಲ್ ಗಾಂಜಾವಾಲ ಇನ್ನಿತರ ಗಾಯಕರು ಪುನೀತ್ ಹಾಡಿರುವ ಹಾಗೂ ಅಭಿನಯಿಸಿರುವ ಹತ್ತಾರು ಗೀತೆಗಳನ್ನು ಹಾಡುವ ಮೂಲಕ 'ಅಪ್ಪು ನಮನ' ಸಲ್ಲಿಸಲಿದ್ದಾರೆ. ಅಂದು ಸ್ಥಳೀಯ ಕಲಾವಿದರು ಆಕರ್ಷಕ ನೃತ್ಯ ಪ್ರದರ್ಶಿಸಲಿದ್ದಾರೆ.

'ಬೇಬಿ ಡಾಲ್' ಸಿಂಗರ್: ಶಿಕ್ಷಣ, ಉದ್ಯೋಗ ಹಾಗೂ ಪ್ರವಾಸ ಕಾರಣದಿಂದ ಮೈಸೂರಿನಲ್ಲಿರುವ ಹೊರರಾಜ್ಯ ಹಾಗೂ ವಿದೇಶಿಗರೂ ದಸರಾ ಸಂಭ್ರಮದಲ್ಲಿ ಉತ್ಸಾಹದಿಂದ ಭಾಗಿಯಾಗಬೇಕೆಂಬ ಉದ್ದೇಶದಿಂದ ಬಾಲಿವುಡ್ ಗಾಯಕರನ್ನು 'ಯುವ ದಸರಾ'ಗೆ ಆಹ್ವಾನಿಸಲಾಗುತ್ತದೆ. ಹಾಗೆಯೇ ಈ ಬಾರಿ ಸೆ.29ರಂದು 'ಬೇಬಿ ಡಾಲ್...' ಹಾಡಿನ ಮೂಲಕ ಹೆಚ್ಚು ಶ್ರೋತೃಗಳ ಮನಮುಟ್ಟಿರುವ ಬಾಲಿವುಡ್ ಗಾಯಕಿ 'ಕನ್ನಿಕಾ ಕಪೂರ್' ಅಸೆಂಟ್ ಸಂಗೀತ ತಂಡದೊಂದಿಗೆ ಕಾರ್ಯಕ್ರಮ ನೀಡಲಿದ್ದಾರೆ. ವಿಶಿಷ್ಟ ಗಾಯನ ಶೈಲಿಯ ಮೂಲಕ ಸಂಗೀತ ರಸಿಕರಿಗೆ ಇಷ್ಟವಾಗಿರುವ ಇವರು, ಹತ್ತಾರು ಜನಪ್ರಿಯ ಗೀತೆಗಳನ್ನು ಹಾಡಿ ರಂಜಿಸಲಿದ್ದಾರೆ. ಜೊತೆಗೆ ಸಿಗ್ನೇಚರ್ ಗ್ರೂಪ್ ತಂಡ ಹಾಗೂ ಸ್ಥಳೀಯ ಕಲಾವಿದರು ನರ್ತಿಸಲಿದ್ದಾರೆ. ಜೊತೆಗೆ ಅಂದು ಚಿತ್ತಾಕರ್ಷಕ ಲೇಸರ್ ಶೋ ಕೂಡ ಇರಲಿದೆ.

ಸ್ಯಾಂಡಲ್‌ವುಡ್ ನೈಟ್ಸ್: ಸೆ.30ರಂದು 'ಸ್ಯಾಂಡಲ್‌ವುಡ್ ನೈಟ್' ಯುವಸಮೂಹದ ಸಡಗರವನ್ನು ಇಮ್ಮಡಿಗೊಳಿಸಲಿದೆ. ಕನ್ನಡ ಚಿತ್ರರಂಗದ ನಾಯಕರು, ನಾಯಕಿಯರು, ಗಾಯಕರು, ಪೋಷಕ ನಟರು ಸೇರಿದಂತೆ ಸ್ಯಾಂಡಲ್‌ವುಡ್‌ನ ಪ್ರಸಿದ್ಧ ಕಲಾವಿದರು ಪಾಲ್ಗೊಳ್ಳಲಿದ್ದಾರೆ. ನೆಚ್ಚಿನ ನಟ–ನಟಿಯರನ್ನು ಕಣ್ತುಂಬಿಕೊಳ್ಳುವ ತವಕದಲ್ಲಿರುವ ಯುವ ಸಮೂಹಕ್ಕೆ ಅಂದು ಮನರಂಜನೆ ಉಣಬಡಿಸಲಿದ್ದಾರೆ. ಕಾರ್ಯಕ್ರಮದ ನಡುವೆ ಸ್ಥಳೀಯ ನೃತ್ಯ ಕಲಾವಿದರು ರಂಜಿಸಲಿದ್ದಾರೆ.

ಪ್ರಸಿದ್ಧ ಗಾಯಕರ ಆಕರ್ಷಣೆ: ಅಕ್ಟೋಬರ್ 1ರಂದು ದಂತವೈದ್ಯೆ, ಸಂಗೀತ ▶ 9ನೇ ಪುಟಕ್ಕೆ





ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಮೋದಿ ಯುಗ ಉತ್ಸವ ನಡೆಯುತ್ತಿದ್ದು, 4ನೇ ದಿನದ ಆರೋಗ್ಯ ಮೇಳದಲ್ಲಿ ಭಾಗವಹಿಸಿದ್ದ ಬಿಜೆಪಿ ರಾಜ್ಯ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರರನ್ನು ಸನ್ಮಾನಿಸಲಾಯಿತು. ಚಿತ್ರದಲ್ಲಿ ಶಾಸಕ ಎಸ್.ಎ. ರಾಮದಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆ.ಆರ್.ಕ್ಷೇತ್ರದ ಅಧ್ಯಕ್ಷ ವಡಿವೇಲು, ಓಂ ಶ್ರೀನಿವಾಸ್, ನಾಗೇಂದ್ರಕುಮಾರ್, ಪ್ರಸಾದ್‌ಬಾಬು, ಮನು ಶೈವ, ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ಪಾಲಿಕೆ ಸದಸ್ಯ ರಾಮ್‌ಪ್ರಸಾದ್ ಅವರನ್ನು ಕಾಣಬಹುದು.

ಸೆ.26ರಿಂದ ಶರನ್ನವರಾತ್ರಿ ಪೂಜೆ, ವಿಸ್ತಾರ ಸಹಸ್ರಚಂಡೀಯಾಗ

ಮೈಸೂರು, ಸೆ.22(ಆರ್‌ಕೆಬಿ)– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ 72ನೇ ವರ್ಷದ ನವರಾತ್ರಿ ಪ್ರಯುಕ್ತ ಸೆ.26ರಿಂದ ಅ.5ರವರೆಗೆ ಪ್ರತಿದಿನ ಶತಚಂಡೀಹೋಮ ಏರ್ಪಡಿಸಲಾಗಿದೆ. ಪ್ರತಿದಿನ ಬೆಳಗ್ಗೆ 9.30ಕ್ಕೆ ಪ್ರಾರಂಭವಾಗಿ ಮಧ್ಯಾಹ್ನ 12.30ರವರೆಗೆ ಪೂರ್ಣಾಹುತಿ, ಶ್ರೀಚಕ್ರ ನವಾವರಣ ಪೂಜೆ, ಚಂಡಿಕಾ ಪಾರಾಯಣ ಲಲಿತಾ ಸಹಸ್ರನಾಮ ನೆರವೇರಲಿದೆ. ಆರೋಗ್ಯ, ವಿದ್ಯೆ, ಯಶಸ್ಸು, ಐಶ್ವರ್ಯ ಇತ್ಯಾದಿಗಳಿಗೆ ಸಂಕಲ್ಪ ಮಾಡಬಹುದಾಗಿದೆ ಎಂದು ಡಾ.ಭಾನುಪ್ರಕಾಶ್ ಶರ್ಮ, ಮೈಕುಮಾರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವರಾತ್ರಿ ವಿಶೇಷ ಅಲಂಕಾರ: ನವರಾತ್ರಿ ಹಿನ್ನೆಲೆಯಲ್ಲಿ ಕೆ.ಟಿ.ಸ್ಟ್ರೀಟ್‌ನಲ್ಲಿರುವ ಶ್ರೀ ಕಾಲಭೈರವೇಶ್ವರಸ್ವಾಮಿ ದೇವಸ್ಥಾನದಲ್ಲಿ ಸೆ.26ರಿಂದ ಅ.5ರವರೆಗೆ ಶ್ರೀ ಪಾರ್ವತಿ ಅಮ್ಮನವರಿಗೆ ವಿಶೇಷ ಅಲಂಕಾರ ಪೂಜಾ ಮಹೋತ್ಸವ ಏರ್ಪಡಿಸಲಾಗಿದೆ. ಸೆ.26 ರಂದು ರಜತ ಕವಚ ಅಲಂಕಾರ (ಅರಿಶಿನ ಕುಂಕುಮ), 27ರಂದ ಗಜ ಮಹಾಲಕ್ಷ್ಮಿ ಅಲಂಕಾರ, 28ರಂದು ರೇಣುಕಾದೇವಿ ಅಲಂಕಾರ, 29ರಂದು ಅನ್ನಪೂರ್ಣೇಶ್ವರಿ ಅಲಂಕಾರ, 30ರಂದು ರಾಜರಾಜೇಶ್ವರಿ (ವಿಳ್ಳೇದೆಲೆ) ಅಲಂಕಾರ, ಅ.1ರಂದು ಉಮಾ ಮಹೇಶ್ವರಿ ಅಲಂಕಾರ, 2ರಂದು ಸರಸ್ವತಿ ಅಲಂಕಾರ, 3ರಂದು ಮಹಾಕಾಳಿ ದುರ್ಗಾದೇವಿ ಅಲಂಕಾರ, 4ರ ಮಹಾನವಮಿಯಂದು ಚಾಮುಂಡಿದೇವಿ ಅಲಂಕಾರ, 5ರಂದು ವಿಜಯಲಕ್ಷ್ಮೀ ಅಲಂಕಾರ ಏರ್ಪಡಿಸಲಾಗಿದೆ. ಶ್ರೀದೇವಿಗೆ ಪ್ರತಿದಿನ ಅಲಂಕಾರ ಸೇವೆ ಮಾಡಿಸುವ ಭಕ್ತರು ಮೊ–8970721257 ಸಂಪರ್ಕಿಸುವಂತೆ ಕೋರಲಾಗಿದೆ.

ಫಾರ್ಮಸಿಸ್ಟ್‌ಗಳಿಗೆ ಕ್ರಿಕೆಟ್ ಪಂದ್ಯಾವಳಿ

ಮೈಸೂರು, ಸೆ.22(ಎಂಟಿವೈ)–ಜೆಎಸ್‌ಎಸ್ ಕಾಲೇಜು ಮೈದಾನದಲ್ಲಿ ಸೆ.23ರಿಂದ ಫಾರ್ಮಸಿಸ್ಟ್‌ಗಳಿಗಾಗಿ ಮೂರು ದಿನಗಳ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ರಾಜ್ಯ ನೋಂದಾಯಿತ ಫಾರ್ಮಾಸಿಸ್ಟ್ ಸಂಘದ ಅಧ್ಯಕ್ಷ ಡಾ.ಕೌಶಿಕ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ನೋಂದಾಯಿತ ಫಾರ್ಮಾಸಿಸ್ಟ್ ಸಂಘ ಹಾಗೂ ಜೆಎಸ್‌ಎಸ್ ಫಾರ್ಮಸಿ ಕಾಲೇಜು ಸಹಯೋಗದಲ್ಲಿ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ. ರಾಜ್ಯಾದ್ಯಂತ ಒಟ್ಟು 18 ಫಾರ್ಮಸಿಸ್ಟ್ ತಂಡಗಳು ಭಾಗವಹಿಸಲಿವೆ. ಸೆ.23ರಂದು ಬೆಳಗ್ಗೆ 9ಕ್ಕೆ ಉಪ ಮೇಯರ್ ಡಾ.ರೂಪ ಯೋಗೇಶ್ ಕ್ರಿಕೆಟ್ ಪಂದ್ಯಾವಳಿಯನ್ನು ಉದ್ಘಾಟಿಸಲಿದ್ದಾರೆ. ಡಿವೈಎಸ್ಪಿ ಎಸ್.ಎನ್.ಸಂದೇಶ್‌ಕುಮಾರ್, ರೆ.ಫಾ. ಬರ್ನಾಡ್ ಪ್ರಕಾಶ್ ಬರ್ನಿಸ್ ಹಾಗೂ ಇನ್ನಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ರಾಜ್ಯ ಫಾರ್ಮಾಸಿಸ್ಟ್ ಪರಿಷತ್‌ಗೆ ಹಲವಾರು ವರ್ಷಗಳಿಂದ ಚುನಾವಣೆಯೇ ನಡೆದಿಲ್ಲ. ಹೀಗಾಗಿ ಸರ್ಕಾರ ಕೂಡಲೇ ಈ ಬಗ್ಗೆ ಗಮನ ಹರಿಸಿ ನೂತನ ಪದಾಧಿಕಾರಿಗಳ ಆಯ್ಕೆಗಾಗಿ ಪರಿಷತ್‌ಗೆ ಚುನಾವಣೆ ನಡೆಸಬೇಕೆಂದು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ನೋಂದಾಯಿತ ಫಾರ್ಮಾಸಿಸ್ಟ್ ಸಂಘದ ಪದಾಧಿಕಾರಿಗಳಾದ ಉಮೇಶ್, ದೀಪು, ವಸಂತ ಜೋಶಿ, ಸಂಜೀವ್‌ಕುಮಾರ್ ಇದ್ದರು.



ಕನ್ನಡಪ್ರಭ ಮತ್ತು ಸುವರ್ಣ ನ್ಯೂ ಚಾನಲ್ ಕೊಡ ಮಾಡುವ ಬಿಸ್ನೆಸ್ ಬೆಸ್ಟ್ ಅವಾರ್ಡ್ ಪಡೆದ ಮೈಸೂರಿನ ಹೋಟೆಲ್ ಲಿ ರುಚಿ ಮಾಲೀಕರಾದ ಉದ್ಯಮಿ ಮಂಜಣ್ಣ ಅವರನ್ನು ಮೈಸೂರು ನಗರ ಯುವ ಜನತಾದಳದ ಅಧ್ಯಕ್ಷ ಲೋಕೇಶ್, ಯುವ ಮುಖಂಡರಾದ ಶರತ್, ನರೇಂದ್ರ, ರಾಮು, ಸಂತೋಷ್ ನವೀನ್, ರವಿ, ರಘು, ಅವಿನಾಶ್ ಇನ್ನಿತರರು ಸನ್ಮಾನಿಸಿದರು.

ಲಕ್ಷಾಂತರ ರೂ. ಮೌಲ್ಯದ ಗಾಂಜಾ ಮಾರಲೆತ್ನಿಸಿದ ಇಬ್ಬರ ಬಂಧನ

ಮೈಸೂರು, ಸೆ.22(ಎಸ್‌ಪಿಎನ್)– ಲಕ್ಷಾಂತರ ರೂ. ಮೌಲ್ಯದ ಗಾಂಜಾ ಮಾರಾಟ ಮಾಡಲು ಯತ್ನಿಸುತ್ತಿದ್ದ ಇಬ್ಬರು ಆರೋಪಿಗಳನ್ನು ಅಬಕಾರಿ ಇಲಾಖೆ ಅಧಿಕಾರಿಗಳು ಬಂಧಿಸಿ, 2,200 ಕೆಜಿ ಒಣ ಗಾಂಜಾ ಹಾಗೂ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿದ್ದಾರೆ. ಮೈಸೂರು ಹೆಬ್ಬಾಳ ರಿಂಗ್ ರಸ್ತೆಯ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ಶೇಷಾದ್ರಿಪುರಂ ನಡುವಿನ ಸರ್ವೀಸ್ ರಸ್ತೆಯಲ್ಲಿ ಅಬಕಾರಿ ಅಧಿಕಾರಿಗಳು ದಾಳಿ ನಡೆಸಿ ಗಾಂಜಾ ಮಾರಾಟ ಮಾಡುತ್ತಿದ್ದ ಸೈಯದ್ ಚಾಂದ್ ಪಾಷ ಪುತ್ರ ಸೈಯದ್ ನವಾಜ್ ಪಾಷ, ಅಸ್ಮತ್ ಪಾಷಾ ಪುತ್ರ ಉಮೇರ್ ಪಾಷಾ ಅವರನ್ನು ಗಾಂಜಾ ಸಮೇತ ಬಂಧಿಸಿ, ಆರೋಪಿಗಳ ವಿರುದ್ಧ ಎನ್‌ಡಿಪಿಎಸ್ ಕಾಯ್ದೆ ಅನ್ವಯ ಪ್ರಕರಣ ದಾಖಲಿಸಿ, ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಕಾರ್ಯಾಚರಣೆಯಲ್ಲಿ ಅಬಕಾರಿ ಇಲಾಖೆ ನಗರ ವಿಚಕ್ಷಣ ದಳದ ಅಬಕಾರಿ ನಿರೀಕ್ಷಕ ಸಂತೋಷ್‌ಕುಮಾರ್, ಅಬಕಾರಿ ಉಪ ನಿರೀಕ್ಷಕ ರವಿಕುಮಾರ್ ಹಾಗೂ ಮುಖ್ಯಪೇದೆ ಲೋಕೇಶ್, ವಾಹನ ಚಾಲಕ ಮಂಜು ಸಾಥ್ ನೀಡಿದ್ದಾರೆ.


ನಿಧನ

ಚಂಗೋಡಯ್ಯ




ಮೈಸೂರು, ಸೆ.22– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಡಾ.ಎನ್.ಸಿ.ವೆಂಕಟರಾಜು ಅವರ ತಂದೆ ಚಂಗೋಡಯ್ಯ (87) ಅವರು ಇಂದು ರಾತ್ರಿ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಇವರು ಮೂಲತಃ ರಾಮನಗರ ಜಿಲ್ಲೆ ಚನ್ನಪಟ್ಟಣ ತಾಲೂಕು ನೆಲಮಾಕನಹಳ್ಳಿ ಗ್ರಾಮದ ನಿವಾಸಿ. ಮೃತರು ಡಾ.ವೆಂಕಟರಾಜು ಅಲ್ಲದೆ ಮತ್ತೊಬ್ಬ ಪುತ್ರ ಎನ್.ಸಿ.ಮುತ್ತುರಾಜು, ಪುತ್ರಿಯರಾದ ಗೌರಮ್ಮ, ಚಿಕ್ಕತಾಯಮ್ಮ, ರಾಜಮ್ಮ ಹಾಗೂ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಶುಕ್ರವಾರ) ಮಧ್ಯಾಹ್ನ 2 ಗಂಟೆಗೆ ಸ್ವಗ್ರಾಮ ನೆಲಮಾಕನಹಳ್ಳಿಯಲ್ಲಿ ನೆರವೇರಲಿದೆ.

ಪಿ.ಗುಂಡಪ್ಪ



ಮೈಸೂರು,ಸೆ.22–ನಗರದ ಹೊಸಬಂಡಿಕೇರಿ 2ನೇ ಕ್ರಾಸ್, ಕೆ.ಆರ್. ಮೊಹಲ್ಲಾ, ನಂಜುಮಳಿಗೆ ನಿವಾಸಿ ಪಿ.ಗುಂಡಪ್ಪನವರು ವಯೋಸಹಜ ಕಾಯಿಲೆಯಿಂದ ಮೊನ್ನೆ ನಿಧನರಾದರು. ಮೃತರಿಗೆ 90 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಓರ್ವ ಪುತ್ರ, ಮೂವರು ಹೆಣ್ಣುಮಕ್ಕಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರವು ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮೊನ್ನೆ ಸಂಜೆ ನೆರವೇರಿತು.

ನಾಗೇಂದ್ರ



ಪಾಂಡವಪುರ ತಾಲೂಕಿನ ಚಿಕ್ಕಾಯರಹಳ್ಳಿ ಗ್ರಾಮದ ನಿವಾಸಿ ಹಾಗೂ ನೀರಾವರಿ ಇಲಾಖೆ ನಿವೃತ್ತ ದ್ವಿತೀಯ ದರ್ಜೆ ನೌಕರ ನಾಗೇಂದ್ರ (77) ಅವರು ಇಂದು ಬೆಳಗ್ಗೆ ಅನಾರೋಗ್ಯದಿಂದ ನಿಧನರಾದರು. ಮೃತರು ಪತ್ನಿ ಶ್ರೀಮತಿ ಭಾಗ್ಯಮ್ಮ, ಮಕ್ಕಳಾದ ಪಂಕಜ, ರಜನಿಕಾಂತ್, ಪ್ರಮೀಳಾ, ರಾಜೇಶ್, ಅಳಿಯ ಪ್ರಸಾದ್, ಸೊಸೆಯಂದಿರಾದ ಸುಮ, ಶೀಲಾ ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಚಿಕ್ಕಾಯರಹಳ್ಳಿ ಗ್ರಾಮದ ಸ್ಮಶಾನದಲ್ಲಿ ಗುರುವಾರ ಸಂಜೆ ನೆರವೇರಿತು.

ಸಚಿವ ಸೋಮಶೇಖರ್ ರಾಜೀನಾಮೆಗೆ ಆಗ್ರಹಿಸಿ ಮೈಸೂರಲ್ಲಿ ಕಾಂಗ್ರೆಸ್ ಪ್ರತಿಭಟನೆ

ಮೈಸೂರು,ಸೆ.22(ಪಿಎಂ)–ಭ್ರಷ್ಟಾಚಾರ ಆರೋಪದಡಿ ಸಚಿವ ಎಸ್.ಟಿ.ಸೋಮಶೇಖರ್ ವಿರುದ್ಧ ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿರುವ ಹಿನ್ನೆಲೆಯಲ್ಲಿ ಸರ್ಕಾರ ಅವರನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಸ್ಥಾನದಿಂದ ಬಿಡುಗಡೆಗೊಳಿಸಿ, ಸಹಕಾರ ಸಚಿವ ಸ್ಥಾನಕ್ಕೆ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿ ಮೈಸೂರು ನಗರ (ಜಿಲ್ಲಾ) ಕಾಂಗ್ರೆಸ್ ಸಮಿತಿ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.



ಮೈಸೂರಿನ ಎಫ್‌ಟಿಎಸ್ ವೃತ್ತದ ಅಂಬೇಡ್ಕರ್ ಪ್ರತಿಮೆ ಎದುರು ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ (ಎಫ್‌ಟಿಎಸ್ ವೃತ್ತ) ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ರಾಮಲಿಂಗಂ ಕನ್‌ಸ್ಟ್ರಕ್ಷನ್ ಕಂಪನಿಗೆ ತಮ್ಮ ಪ್ರಭಾವ ಬಳಸಿ 666.22 ಕೋಟಿ ರೂ. ಮೊತ್ತದ ವಸತಿ ಸಮುಚ್ಚಯದ ಟೆಂಡರ್ ಕಾರ್ಯಾದೇಶ ನೀಡಿರುವ ಆರೋಪ ಎಸ್.ಟಿ.ಸೋಮಶೇಖರ್ ಮೇಲಿದ್ದು, ಇಲ್ಲಿ 12 ಕೋಟಿ ರೂ. ಭ್ರಷ್ಟಾಚಾರ ನಡೆದಿರುವ ಆರೋಪ ಕೇಳಿ ಬಂದಿದೆ. ಹೀಗಾಗಿ ಅವರು ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಪ್ರತಿಭಟನಾಕಾರರು ಒತ್ತಾಯಿಸಿದರು.

ಅಲ್ಲದೆ, ಈ ಪ್ರಕರಣದಲ್ಲಿ ಅಂದಿನ ಮುಖ್ಯಮಂತ್ರಿಯಾಗಿದ್ದ ಬಿ.ಎಸ್.ಯಡಿಯೂರಪ್ಪ ಸೇರಿದಂತೆ ಹಲವರು ಆರೋಪಿಗಳಾಗಿದ್ದಾರೆ. ಸೋಮಶೇಖರ್ ಅವರು ಅಧಿಕಾರದಲ್ಲಿ ಮುಂದುವರೆದರೆ ಸಾಕ್ಷ್ಯ ನಾಶ ಪಡಿಸುವ ಸಾಧ್ಯತೆ ಇದೆ. ಇವರ ರಾಜೀನಾಮೆ ಪಡೆದು ನಿಷ್ಪಕ್ಷಪಾತ ತನಿಖೆ ನಡೆಸಲು ಮುಖ್ಯಮಂತ್ರಿಗಳು ಮುಂದಾಗಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮೈಸೂರು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ನಗರ ಕಾಂಗ್ರೆಸ್ ಉಪಾಧ್ಯಕ್ಷ ಮಂಟೇಲಿಂಗಯ್ಯ, ಕಾಂಗ್ರೆಸ್ ಮುಖಂಡರಾದ ವಿಶ್ವರಾಜ್, ಜಿ.ಎಲ್. ಪ್ರವೀಣ್, ರಾಕೇಶ್‌ಕುಮಾರ್, ರಹೀಮ್, ನಗರಪಾಲಿಕೆ ಮಾಜಿ ಸದಸ್ಯ ಉದಯ್‌ಕುಮಾರ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದಸರಾ ಫಲ–ಪುಷ್ಪ ಪ್ರದರ್ಶನ

ಮೈಸೂರು, ಸೆ.22– ಮೈಸೂರು ವಿಶ್ವವಿದ್ಯಾನಿಲಯದ ತೋಟಗಾರಿಕೆ ವಿಭಾಗದ ವತಿಯಿಂದ 17ನೇ ವರ್ಷದ ದಸರಾ ಫಲಪುಷ್ಪ ಪ್ರದರ್ಶನವನ್ನು ಸೆ.26ರಿಂದ ಅ.5ರವರೆಗೆ ಕುಕ್ಕರಹಳ್ಳಿ ಕೆರೆ ಪೂರ್ವದಂಡೆಯಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಜಿ.ಹೇಮಂತ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸುವರು. ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ, ಪರೀಕ್ಷಾಂಗ ಕುಲಸಚಿವ ಪ್ರೊ.ಎ.ಪಿ.ಜ್ಞಾನಪ್ರಕಾಶ್, ಹಣಕಾಸು ಅಧಿಕಾರಿಗಳಾದ ಡಾ. ಸಂಗೀತ ಗಜಾನನ ಭಟ್, ಸಿಂಡಿಕೇಟ್ ಮತ್ತು ಅಕಾಡೆಮಿ ಕೌನ್ಸಿಲ್ ಸದಸ್ಯರು ಉಪಸ್ಥಿತರಿರುವರು. ಫಲಪುಷ್ಪ ಪ್ರದರ್ಶನಕ್ಕೆ ಉಚಿತ ಪ್ರವೇಶವಿದ್ದು, ಪ್ರತಿದಿನ ಬೆಳಗ್ಗೆ 9 ಗಂಟೆಯಿಂದ ಸಂಜೆ 7ರವರೆಗೆ ತೆರೆದಿರುತ್ತದೆ ಎಂದು ಮಾನಸ ಗಂಗೋತ್ರಿ ತೋಟಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ಎಸ್.ಕೆ.ಮುಜಾವರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


ಗುತ್ತಿಗೆ ನೀಡಿಕೆಯಲ್ಲಿ ಅಕ್ರಮ ಆರೋಪ
ಸಚಿವ ಸೋಮಶೇಖರ್ ರಾಜೀನಾಮೆಗೆ ಆಗ್ರಹ

ಮೈಸೂರು,ಸೆ.22(ಎಂಟಿವೈ)–ಬಿಡಿಎ ಅಧ್ಯಕ್ಷರಾಗಿದ್ದ ವೇಳೆ ಗುತ್ತಿಗೆ ನೀಡಿಕೆಯಲ್ಲಿ ಅಕ್ರಮ ಎಸಗಿದ ಆರೋಪ ಎದುರಿಸುತ್ತಿರುವ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಅವರು ಕೂಡಲೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡದಿದ್ದರೆ, ದಸರಾ ಉದ್ಘಾಟನಾ ಕಾರ್ಯಕ್ರಮದಲ್ಲಿ ಕನ್ನಡಪರ ಸಂಘಟನೆಗಳೊಂದಿಗೆ ಪ್ರತಿಭಟನೆ ಮಾಡುವುದಾಗಿ ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ರಾಜ್ಯಾಧ್ಯಕ್ಷ ಗಿರೀಶ್ ಶಿವಾರ್ಚಕ ಎಚ್ಚರಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ಈ ಹಿಂದೆ ಬಿಡಿಎ ಅಧ್ಯಕ್ಷರಾಗಿದ್ದ ವೇಳೆ ನೂರಾರು ಕೋಟಿ ರೂ. ಲಂಚ ಪಡೆದಿದ್ದಾರೆ. ಈ ಕುರಿತು ನ್ಯಾಯಾಲಯದ ಆದೇಶದ ಮೇರೆಗೆ ಎಫ್‌ಐಆರ್ ದಾಖಲಾಗಿದೆ. ಎಫ್‌ಐಆರ್ ದಾಖಲಾಗಿರುವ ಹಿನ್ನೆಲೆಯಲ್ಲಿ ಎಸ್.ಟಿ.ಸೋಮಶೇಖರ್ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಕಳಂಕ ನಿವಾರಣೆಯಾಗುವವರೆಗೂ ಸಚಿವರಾಗಿ ಮುಂದುವರೆಯಬಾರದು. ನಾಡಹಬ್ಬ ದಸರಾ ಮಹೋತ್ಸವಕ್ಕೆ ತನ್ನದೇ ಆದ ಇತಿಹಾಸವಿದೆ. ಇಂತಹ ಐತಿಹಾಸಿಕ ಕಾರ್ಯಕ್ರಮಕ್ಕೆ ಕಳಂಕಿತ ಸಚಿವರು ಪಾಲ್ಗೊಳ್ಳುವುದು ಸರಿಯಿಲ್ಲ. ಈ ಹಿಂದೆ ಎಫ್‌ಐಆರ್ ದಾಖಲಾದ ಹಿನ್ನೆಲೆಯಲ್ಲಿ ಹಲವು ಸಚಿವರು ರಾಜೀನಾಮೆ ನೀಡಿರುವ ಇತಿಹಾಸವಿದೆ. ಹಾಗಾಗಿ ಕೂಡಲೇ ರಾಜೀನಾಮೆ ನೀಡಬೇಕು. ಇಲ್ಲದಿದ್ದರೆ ದಸರಾ ಮಹೋತ್ಸವ ಉದ್ಘಾಟನಾ ಸಮಾರಂಭದ ವೇಳೆ ಪ್ರತಿಭಟನೆ ಮಾಡುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಸ್ತೂರಿ ಕರ್ನಾಟಕ ನ್ಯಾಯಪರ ವೇದಿಕೆ ಪದಾಧಿಕಾರಿಗಳಾದ ಸಂತೋಷ್, ಯುವರಾಜ್, ಸಂತೋಷ್‌ಕುಮಾರ್, ರಾಕೇಶ್ ಇದ್ದರು.

ಸೋಮಶೇಖರ್ ರಾಜೀನಾಮೆ ನೀಡುವ ಅಗತ್ಯವಿಲ್ಲ

ಮೈಸೂರು,ಸೆ.22(ಎಂಟಿವೈ)–ಲೋಕಾಯುಕ್ತದಲ್ಲಿ ಎಫ್‌ಐಆರ್ ದಾಖಲಾದ ಮಾತ್ರಕ್ಕೇ ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ಅವರನ್ನು ದಸರಾ ಕಾರ್ಯಕ್ರಮಗಳಿಂದ ದೂರವಿಡಬೇಕೆಂದು ಒತ್ತಾಯಿಸುವುದು ಸರಿಯಲ್ಲ ಎಂದು ಆದಿ ಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿ ಅಧ್ಯಕ್ಷ ಕೆ. ಮುರುಳಿ ಅಭಿಪ್ರಾಯಪಟ್ಟಿದ್ದಾರೆ.



ಎಸ್.ಟಿ.ಸೋಮಶೇಖರ್

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಲೋಕಾಯುಕ್ತದಲ್ಲಿ ಸಚಿವ ಎಸ್.ಟಿ.ಸೋಮಶೇಖರ್ ಅವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ಅವರು ಆರೋಪಿಯಲ್ಲ. ಹಾಗಾಗಿ ರಾಜೀನಾಮೆ ನೀಡುವ ಅಗತ್ಯವಿಲ್ಲ. ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು ಅವರು ರಾಜೀನಾಮೆ ನೀಡುವಂತೆ ಆಗ್ರಹಿಸಿರುವುದನ್ನು ಖಂಡಿಸುತ್ತೇವೆ. ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್ ಜಿಲ್ಲೆಯ ಅಭಿವೃದ್ಧಿಗೆ ಸಾಕಷ್ಟು ಕೆಲಸ ಮಾಡಿದ್ದಾರೆ. ಇನ್ನು, ಅವರ ವಿರುದ್ಧ ರಾಜಕೀಯ ಪಿತೂರಿ ನಡೆಯುತ್ತಿರುವ ಶಂಕೆ ವ್ಯಕ್ತವಾಗುತ್ತಿದೆ. ಜಿಲ್ಲೆಯಲ್ಲಿ ಕೊರೊನಾ ವೇಳೆ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ. ಕೆ.ಎಸ್. ಶಿವರಾಮ್ ಅವರು ಸಚಿವರ ವಿರುದ್ಧ ಹೇಳಿಕೆ ನೀಡುವುದನ್ನು ನಿಲ್ಲಿಸಬೇಕು. ಇಲ್ಲದಿದ್ದರೆ ಅವರ ವಿರುದ್ಧ ಪ್ರತಿಭಟನೆ ಮಾಡುತ್ತೇವೆ ಎಂದರು. ಸುದ್ದಿಗೋಷ್ಠಿಯಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವ ಬಳಗದ ಉಪಾಧ್ಯಕ್ಷ ಎಂ.ಅನಿಲ್‌ಕುಮಾರ್, ಆದಿ ಕರ್ನಾಟಕ ಹಿತರಕ್ಷಣಾ ಹೋರಾಟ ಸಮಿತಿಯ ಉಪಾಧ್ಯಕ್ಷ ಕುಮಾರ್, ಪದಾಧಿಕಾರಿಗಳಾದ ಎನ್.ಕೃಷ್ಣಮೂರ್ತಿ, ನಾಗರಾಜು ಇನ್ನಿತರರಿದ್ದರು.

ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಮೈಸೂರಲ್ಲಿ ಕಟ್ಟಡ ಕಾರ್ಮಿಕರ ಪ್ರತಿಭಟನೆ



ಮೈಸೂರು,ಸೆ.22(ಪಿಎಂ)– ಹತ್ತಾರು ವರ್ಷಗಳಿಂದ ನೋಂದಣಿ ಆಗಿರುವ ನೈಜ ಕಟ್ಟಡ ಕಾರ್ಮಿಕರಿಗೆ ಮಾತ್ರವೇ ವಸತಿ ನಿರ್ಮಾಣಕ್ಕೆ ಸಹಾಯಧನ ನೀಡಬೇಕು ಎಂಬುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಸಲು ಆಗ್ರಹಿಸಿ ಸಿಡಬ್ಲ್ಯೂಎಫ್‌ಐ (ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಫೆಡರೇಷನ್/ ಸಿಐಟಿಯು) ಮೈಸೂರು ಜಿಲ್ಲಾ ಸಮಿತಿ ನೇತೃತ್ವದಲ್ಲಿ ಕಟ್ಟಡ ಕಾರ್ಮಿಕರು ಗುರುವಾರ ಪ್ರತಿಭಟನೆ ನಡೆಸಿದರು.

ಮೈಸೂರಿನ ಕುವೆಂಪುನಗರದ ಸಹಾಯಕ ಕಾರ್ಮಿಕರ ಆಯುಕ್ತರ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಕೊಳಚೆ ನಿರ್ಮೂಲನಾ ಮಂಡಳಿ ಸೇರಿ ಇತರೆ ವಸತಿ ಯೋಜನೆಗಳ ಫಲಾನುಭವಿಗಳನ್ನು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ನೋಂದಣಿ ಮಾಡುವ ಕ್ರಮ ಕೈಬಿಡಬೇಕು. ಈಗಾಗಲೇ ಕೊಳಚೆ ನಿರ್ಮೂಲನಾ ಮಂಡಳಿಗೆ ಪಾವತಿಸಲಾದ 76 ಕೋಟಿ ರೂ. ಅನ್ನು ಕೂಡಲೇ ಮಂಡಳಿಯ ಖಾತೆಗೆ ವಾಪಸ್ಸು ಪಡೆಯಬೇಕು ಎಂದು ಒತ್ತಾಯಿಸಿದರು.

ಮಂಡಳಿ ಸದಸ್ಯತ್ವ ಪಡೆದು ಐದು ವರ್ಷ ಪೂರೈಸಿದ ಸದಸ್ಯರಿಗೆ ಮಾತ್ರವೇ ಮನೆ ನಿರ್ಮಾಣಕ್ಕೆ ಸಾಲ, ಸಹಾಯಧನ ಮತ್ತು ಮುಂಗಡ ಹಣ ಪಾವತಿ ಮಾಡಬೇಕು. ಮಂಡಳಿಯಿಂದ ಈಗ ಜಾರಿಯಲ್ಲಿರುವ ಸಿಜಿಹೆಚ್ ಆಧಾರಿತ ವೈದ್ಯಕೀಯ ಮರುಪಾವತಿ ಯೋಜನೆ ರದ್ದುಪಡಿಸಿ ಎಲ್ಲಾ ನೋಂದಾಯಿತ ಕಟ್ಟಡ ಕಾರ್ಮಿಕರು ಹಾಗೂ ಕುಟುಂಬದವರಿಗೆ ರಾಜ್ಯ ಸರ್ಕಾರದ ಆರೋಗ್ಯ ಸಂಜೀವಿನಿ–2021 ಅನ್ನು ನಗದು ರಹಿತ ಸೇವೆಯಾಗಿ ಜಾರಿಗೊಳಿಸಬೇಕು ಎಂದು ಆಗ್ರಹಿಸಿದರು. ಸಿಐಟಿಯು ಜಿಲ್ಲಾಧ್ಯಕ್ಷ ಎನ್.ಕೆ.ಬಾಲಾಜಿ, ಪ್ರಧಾನ ಕಾರ್ಯದರ್ಶಿ ಜಿ.ಜಯರಾಮ್, ಸಂಘಟನೆ ಮುಖಂಡರಾದ ಬಸವರಾಜು, ಅಶೋಕ್, ಈಶ್ವರ್, ನಾಗೇಶ್, ವೆಂಕಟೇಶ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಯೋಗ ಸಾಧಕರಿಗೆ ಪ್ರಶಸ್ತಿ ಪ್ರದಾನ



ಮೈಸೂರು, ಸೆ.22(ಎಂಟಿವೈ)– ಹಿಮಾಲಯ ಪ್ರತಿಷ್ಠಾನ ಹಾಗೂ ಉತ್ತಿಷ್ಠ ಭಾರತ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡಿರುವವರಿಗೆ ಯೋಗ ವಿಭೂಷಣ ಹಾಗೂ ಯೋಗ ಭೂಷಣ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಲಾಯಿತು. ಯೋಗದಲ್ಲಿ ಸಾಧನೆ ಮಾಡಿರುವ ಬಿ.ಪಿ.ಮೂರ್ತಿ, ಜಿ.ವೆಂಕಟೇಶ್, ಕೆ.ವಿ.ಉಮೇಶ್, ಎಸ್.ಅನುರಾಧ, ವಿನುತ ಲೋಬೋ, ರೋಶನ್ ಅರೆಹೊಳೆ, ಎಂ.ರೂಪಾ ಹಾಗೂ ಕಲ್ಯಾಣ್‌ಕುಮಾರ್ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಜಿಎಸ್‌ಎಸ್ ಫೌಂಡೇಷನ್ ಸಂಸ್ಥಾಪಕ ಶ್ರೀಹರಿ ಮಾತನಾಡಿ, ಯೋಗ ಕ್ಷೇತ್ರಕ್ಕೆ ಮೈಸೂರು ತನ್ನದೇ ಆದ ಕೊಡುಗೆ ನೀಡಿದೆ. ಹೀಗಾಗಿ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ಪ್ರಶಸ್ತಿ ನೀಡಿ ಗೌರವಿಸುವುದರಿಂದ ಅವರು ಇನ್ನಷ್ಟು ದೊಡ್ಡ ಪ್ರಮಾಣದಲ್ಲಿ ಕೆಲಸ ಮಾಡಲು ಸಾಧ್ಯವಾಗುತ್ತದೆ ಎಂದರು. ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಯೋಗ ಸಾಧಕರಾದ ಯೋಗ ಪ್ರಕಾಶ್, ಕೆ.ಆರ್.ಯೋಗಾನರಸಿಂಹನ್, ಹಿಮಾಲಯ ಪ್ರತಿಷ್ಠಾನದ ಅನಂತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.09.2022 ಶುಕ್ರವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ತ್ರಯೋದಶಿ, ನಕ್ಷತ್ರ : ಮಖೆ, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

■ **ರೋಟರಿ ಕ್ಲಬ್ ಆಫ್ ಮೈಸೂರು ಸೌತ್ ಈಸ್ಟ್ :** ರೊಟೇರಿಯನ್ಸ್ ಮತ್ತು ನಾನ್ ರೊಟೇರಿಯನ್ಸ್‌ಗೆ ಜಿಲ್ಲಾ ಮಟ್ಟದ ಬ್ಯಾಡ್ಮಿಂಟನ್ ಪಂದ್ಯಾವಳಿ, ಸ್ಥಳ: ಫ್ರೆಂಡ್ಸ್ ಸ್ಪೋರ್ಟ್ಸ್ ಜೋನ್, ಕೆ.ಸಿ. ಲೇಔಟ್, ಬೆಳಗ್ಗೆ 8.30ಕ್ಕೆ

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ :** ಸನ್ಮಾನ ಸಮಾರಂಭ, ಸಾನ್ನಿಧ್ಯ : ಇಳೈ ಆಳ್ವಾರ್ ಸ್ವಾಮೀಜಿ, ಅಧ್ಯಕ್ಷತೆ : ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿಗಳು : ಟಿ.ಎಸ್. ಪ್ರಭುಸ್ವಾಮಿ, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಂ ವಾಜಪೇಯಿ, ಹಿರಣ್ಮಯಿ ಪ್ರತಿಷ್ಠಾನ ಅಧ್ಯಕ್ಷ ಎ. ಸಂಗಪ್ಪ, ಸ್ಥಳ: ಶ್ರೀಕಾಂತ ಹಿರಿಯ ಪ್ರಾಥಮಿಕ ಶಾಲೆ, ಅಗ್ರಹಾರ, ಬೆಳಗ್ಗೆ 10ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಶರದ್ ವಿರೇಚನ–ಪಂಚಕರ್ಮ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ಅರ್ಬನ್ ಹಾತ್ :** ಗಾಂಧಿ ಶಿಲ್ಪ ಬಜಾರ್, ಕರಕುಶಲ ವಸ್ತುಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ಬೆಳಗ್ಗೆ 10 ರಿಂದ.

■ **ಆರ್ಟ್ ಆಫ್ ಲಿವಿಂಗ್ :** ಜೀವನ ಕಲೆ ಆನಂದ ಅನುಭೂತಿ ಶಿಬಿರ, ಸ್ಥಳ: ಆರ್ಟ್ ಆಫ್ ಲಿವಿಂಗ್, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 6 ರಿಂದ, ಮಧ್ಯಾಹ್ನ 1 ರಿಂದ, ಮಧ್ಯಾಹ್ನ 3 ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ರಾಷ್ಟ್ರೀಯ ಪ್ರಾಕೃತ ಅಧ್ಯಯನ ಮತ್ತು ಸಂಶೋಧನಾ ಸಂಸ್ಥೆ :** ರಾಜ್ಯ ಮಟ್ಟದ ಮೂರು ದಿನಗಳ ಕಾರ್ಯಾಗಾರ, ಬೆಳಗ್ಗೆ 10.30 ರಿಂದ ಗೋಷ್ಠಿ–4, ಪ್ರಾಕೃತ ಆಗಮ ಸಾಹಿತ್ಯದ ರೂಪುರೇಖೆ, ಉಪನ್ಯಾಸಕರು : ಮೈಸೂರು ವಿವಿ ಅತಿಥಿ ಉಪನ್ಯಾಸಕ ಡಾ. ಅಭಿಜಿತ್ ಅಲಗೌಡರ, ಗೋಷ್ಠಿ–5 ಪ್ರಾಕೃತ ಕಥಾ ಸಾಹಿತ್ಯದ ವಿವೇಚನೆ, ಉಪನ್ಯಾಸಕರು : ಹಿರಿಯ ವಿದ್ವಾಂಸ ಡಾ. ಎಸ್.ವಿ. ಸುಜಾತ, ಗೋಷ್ಠಿ–6 ಪ್ರಾಕೃತ ಚರಿತ ಸಾಹಿತ್ಯದ ರೂಪುರೇಖೆ, ಉಪನ್ಯಾಸಕರು : ಡಾ. ಬಿ.ಎಲ್. ಶಶಿರೇಖ, ಗೋಷ್ಠಿ–7 ಪ್ರಾಕೃತ ಕಾವ್ಯಸಾಹಿತ್ಯದ ಸ್ವರೂಪ, ಉಪನ್ಯಾಸಕರು: ಎನ್. ಲೋಕಕುಮಾರ್, ಸ್ಥಳ: ಜೈನಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗ, ಮೈಸೂರು ವಿವಿ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಹಿರಿಯ ವಿದ್ಯಾರ್ಥಿಗಳ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸಭೆಯ ಮುಖ್ಯ ವಿಷಯ : ವಿಶ್ವವಿದ್ಯಾನಿಲಯದ ಸರ್ವತೋಮುಖ ಬೆಳವಣಿಗೆಯಲ್ಲಿ ಹಿರಿಯ ವಿದ್ಯಾರ್ಥಿ ಸಂಘದ ಪಾತ್ರ, ಅಧ್ಯಕ್ಷತೆ :ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಕುಲಪತಿ ಡಾ. ಎಸ್. ವಿದ್ಯಾಶಂಕರ್, ಉಪಸ್ಥಿತರು: ಹಣಕಾಸು ಅಧಿಕಾರಿ ಡಾ. ಎ. ಖಾದರ್ ಪಾಷ, ಡೀನ್ (ಶೈಕ್ಷಣಿಕ) ಡಾ. ಅಶೋಕ ಕಾಂಬ್ಳೆ, ಸ್ಥಳ: ಕಾವೇರಿ ಸಭಾಂಗಣ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಬೆಳಗ್ಗೆ 11ಕ್ಕೆ

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ :** ಪಂಡಿತ್ ಶ್ರೀ ವ್ಯಾಸತೀರ್ಥಾಚಾರ್ ಅವರಿಂದ ಜಗನ್ನಾಥ ದಾಸರ ವಿರಚಿತ ಕೃತಿ 'ಫಲವಿದು ಬಾಳ್ದುದಕೆ' ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.


■ **ಗಾನಭಾರತೀ :** ಎಚ್. ಯೋಗನರಸಿಂಹಂ 125ನೇ ಜನ್ಮ ವರ್ಷಾಚರಣೆ, ವಿದುಷಿ ಜಿ.ವಿ. ರಂಗನಾಯಕಮ್ಮ ಮತ್ತು ವಿದುಷಿ ಜಿ.ವಿ. ನೀಲಾ ಸ್ಮರಣಾರ್ಥ ಎಚ್. ಯೋಗನರಸಿಂಹಂ ಅವರ ಕೃತಿಗಳ ಗಾಯನ ಕಛೇರಿ, ವಿದ್ವಾನ್ ಸಂಪಗೋಡು ವಿಘ್ನರಾಜ್ ಅವರಿಂದ ಗಾಯನ, ವಿದ್ವಾನ್ ಸ್ಮಿತ ಎಚ್.ಎಂ.– ಪಿಟೀಲು, ವಿದ್ವಾನ್ ಆನೂರು ಅನಂತಕೃಷ್ಣಶರ್ಮ–ಮೃದಂಗ, ವಿದ್ವಾನ್ ಶರತ್ ಕೌಶಿಕ್–ಘಟ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

■ **ಶ್ರೀ ಯೋಗಿನಾರಾಯಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಕೆ. ಸುಬ್ಬಯ್ಯ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಸ್ಥೆ, ಜೆಎಲ್‌ಬಿ ರಸ್ತೆ, ಸಂಜೆ 5ಕ್ಕೆ.

■ **ಚಿನ್ಮಯ ಮಿಷನ್ :** ಜ್ಞಾನ ಯಜ್ಞ, ಸಂಜೆ 6 ರಿಂದ ಸಾಮೂಹಿಕ ವಿಷ್ಣು ಸಹಸ್ರನಾಮ, ಸಂಜೆ 6.30 ರಿಂದ ಸ್ವಾಮಿ ಗಹನಾನಂದಜೀ ಅವರಿಂದ ಶ್ರೀ ಆದಿಶಂಕರಾಚಾರ್ಯರ ಸಾಧನಾ ಪಂಚಕ ಕುರಿತು ಉಪನ್ಯಾಸ, ಸ್ಥಳ: ಶ್ರೀ ಗುರುದೇವ ದತ್ತ ಸನ್ನಿಧಿ, 148, 6ನೇ ಮುಖ್ಯ ರಸ್ತೆ, ಗೋಕುಲಂ 3ನೇ ಹಂತ.

■ **ರಂಗಾಯಣ, ಮೈಸೂರು :** ಭಾರತೀಯ ರಂಗ ಸಂಗೀತೋತ್ಸವ, ಮಧ್ಯಾಹ್ನ 3.30ಕ್ಕೆ ಕಾರಂತರ ನೆನಪಿನಲ್ಲಿ... ವಿಚಾರ ಸಂಕಿರಣ, ಅಧ್ಯಕ್ಷತೆ : ಹಿರಿಯ ರಂಗಕರ್ಮಿ ಗುರುರಾಜ ಮಾರ್ಪಳ್ಳಿ, ರಂಗಭೂಮಿ ಆಸ್ತಿ ಬಿ.ವಿ. ಕಾರಂತ : ರಂಗಚಿಂತಕ, ವಿಮರ್ಶಕ ನಾರಾಯಣ ರಾಯಚೂರ್, ಗಡಿಯಾಚೆ ಕಾರಂತ ರಂಗ ಚಳುವಳಿ : ರಂಗ ನಿರ್ದೇಶಕ ಕಾಸರಗೋಡು ಚಿನ್ನಾ, ಸಂಗೀತ ನಿರ್ದೇಶಕ ಆರ್. ಶ್ರೀನಾಥ್ ಅವರಿಂದ ರಂಗ ಸಂಗೀತ ಮತ್ತು ರಂಗಗೀತೆಗಳು ಸ್ಥಳ: ಭೂಮಿಗೀತ, ಸಂಜೆ 6.30 ಗಂಟೆಗೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಗಾಂಧಿ ಒಂದು ನೆನಪು, ಪ್ರಸ್ತುತಿ– ಪ್ರೊ. ಎನ್. ವೆಂಕೋಬರಾವ್, 6.40 ಅರಿವಿನ ಶಿಖರ, ಗಾಯನ– ಎಂ.ರಾಘವೇಂದ್ರ, ಡಿ. ಪುರುಷೋತ್ತಮ್, ವ್ಯಾಖ್ಯಾನ– ಡಾ.ಬೋರೇಗೌಡ ಚಿಕ್ಕಮರಳಿ, 6.50 ರೈತರಿಗೆ ಸಲಹೆ, 7.15 ಭಾವಗೀತೆ, 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಪ್ರಾಯೋಜಿತ ಆರೋಗ್ಯ ಕಾರ್ಯಕ್ರಮ– ವಿಶ್ವ ಹೃದಯ ದಿನದ ಸಂಬಂಧವಾಗಿ ವಿಶೇಷ ಕಾರ್ಯಕ್ರಮ, ಆರೋಗ್ಯವಂತ ಹೃದಯ – ಭಾಗವಹಿಸುವ ತಜ್ಞರು– ಡಾ. ಎಂ.ಎನ್.ರವಿ, 10.00 ವಿ.ಕೃಷ್ಣಮೂರ್ತಿ–ನಾಗಸ್ವರ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ–ಶೈಲ ಭಂಡಾರ್‌ಕರ್, ಸಂಗೀತಾ ಕಟ್ಟಿ ಮತ್ತು ಗಣೇಶ್ ದೇಸಾಯಿ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ– ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಗಾನರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ಯಾಮಾಶಾಸ್ತ್ರಿಗಳ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ–ಆಕಾಶವಾಣಿ ಅಡುಗೆ ಮನೆ, ಪ್ರಸ್ತುತಿ– ಕೆ.ಬಿ. ಮೀನಾ, 4.30 ವೃತ್ತಿ ಮಾರ್ಗದರ್ಶನ– ಫ್ಯಾಷನ್ ಡಿಸೈನಿಂಗ್ ಮತ್ತು ಇಂಟೀರಿಯರ್ ಡೆಕೊರೇಷನ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ವೇದಶ್ರೀ ಕೆ.ಅವರೊಂದಿಗೆ ಮಾತುಕತೆ, 6.50 ಕೃಷಿರಂಗ–ಕಿಸಾನ್‌ವಾಣಿ –ಬೇಳೆಕಾಳು ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣಾ ಕ್ರಮಗಳು ಕುರಿತು ಡಾ.ಎಂ.ಎಸ್. ಕಿತ್ತೂರುಮಠ್ ಅವರೊಂದಿಗೆ ಸಂದರ್ಶನ, 9.00 ವಿಜ್ಞಾನ ಭಾರತಿ, 10.00 ರಂಗಗೀತೆಗಳು, 10.30 ಸವಿನೆನಪು

ಎಐಸಿಸಿ ಅಧ್ಯಕ್ಷೀಯ ಚುನಾವಣೆ

ಕಾಂಗ್ರೆಸ್ ಕೇಂದ್ರೀಯ ಚುನಾವಣಾ ಸಮಿತಿಯಿಂದ ಅಧಿಸೂಚನೆ ಪ್ರಕಟ

ನವದೆಹಲಿ, ಸೆ.22– ಎಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆಗೆ ಕಾಂಗ್ರೆಸ್ ಕೇಂದ್ರೀಯ ಚುನಾವಣಾ ಸಮಿತಿ ಗುರುವಾರ ಅಧಿಸೂಚನೆ ಹೊರಡಿಸಿದೆ ಇದರೊಂದಿಗೆ ಸುದೀರ್ಘ ಕಾಲ ಪಕ್ಷದ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ ಸೋನಿಯಾ ಗಾಂಧಿ ನಂತರ ಉತ್ತರಾಧಿಕಾರಿ ಆಯ್ಕೆಯ ಚುನಾವಣೆಗೆ ಸಿದ್ಧತೆ ನಡೆಸಲಾಗಿದೆ. ಕಾಂಗ್ರೆಸ್ ಕೇಂದ್ರೀಯ ಚುನಾವಣಾ ಸಮಿತಿ ಮುಖ್ಯಸ್ಥ ಮಧುಸೂದನ್ ಮಿಸ್ತ್ರಿ ಅಧಿಸೂಚನೆ ಹೊರಡಿಸಿದ್ದು, ನೀಡಲಾಗಿರುವ ವೇಳಾಪಟ್ಟಿಯಂತೆ ಪಕ್ಷದ ಅಧ್ಯಕ್ಷರ ಸ್ಥಾನಕ್ಕೆ ಚುನಾವಣೆ ನಡೆಯಲಿದೆ ಎಂದು ಅವರು ತಿಳಿಸಿದ್ದಾರೆ.

ಅಧಿಸೂಚನೆ ಪ್ರಕಾರ, ಸೆಪ್ಟೆಂಬರ್ 24 ರಿಂದ 30ರವರೆಗೂ ಚುನಾವಣೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ನಡೆಯಲಿದೆ. ಅಕ್ಟೋಬರ್ 1 ನಾಮಪತ್ರಗಳ ಪರಿಶೀಲನೆ ನಡೆಯಲಿದ್ದು, ಅಕ್ಟೋಬರ್ 8 ನಾಮಪತ್ರ ಹಿಂಪಡೆಯಲು ಕೊನೆಯ ದಿನವಾಗಿದೆ. ಒಂದು ವೇಳೆ ಒಬ್ಬರಿಗಿಂತ ಹೆಚ್ಚಿನ ವ್ಯಕ್ತಿಗಳು ನಾಮಪತ್ರ ಸಲ್ಲಿಸಿದ್ದಲ್ಲಿ ಅಕ್ಟೋಬರ್ 17 ರಂದು ಚುನಾವಣೆ ನಡೆಯಲಿದೆ. ಅಕ್ಟೋಬರ್ 19 ರಂದು ಮತಗಳ ಎಣಿಕೆ ನಡೆಯಲಿದ್ದು, ಅಂದೇ ಫಲಿತಾಂಶ ಪ್ರಕಟವಾಗಲಿದೆ.

ಅಖಿಲ ಭಾರತ ನ್ಯಾಷನಲ್ ಕಾಂಗ್ರೆಸ್ ನ ಸಂವಿಧಾನದ ಕಲಂ XVIII ಅಡಿ ದೊರೆತಿರುವ ವಿನಾಯಿತಿ ಅಡಿ ಎಐಸಿಸಿ ಅಧ್ಯಕ್ಷರನ್ನು ಆಯ್ಕೆ ಮಾಡಲು ಪಕ್ಷದ ಪ್ರತಿನಿಧಿಗಳಿಗೆ ಆಹ್ವಾನ ನೀಡಿರುವುದಾಗಿ ಮಿಸ್ತ್ರಿ ಹೇಳಿಕೆಯಲ್ಲಿ ತಿಳಿಸಿದ್ದಾರೆ. 24 ಅಕ್ಬರ್ ರಸ್ತೆಯಲ್ಲಿರುವ ಎಐಸಿಸಿ ಕೇಂದ್ರ ಕಚೇರಿಯಲ್ಲಿ ನಾಮಪತ್ರ ಲಭ್ಯವಿರಲಿದೆ ಎಂದು ಅಧಿಸೂಚನೆಯಲ್ಲಿ ತಿಳಿಸಲಾಗಿದೆ. ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಮತ್ತು ಶಶಿ ತರೂರ್ ಎಐಸಿಸಿ ಅಧ್ಯಕ್ಷೀಯ ಸ್ಥಾನದ ರೇಸ್‌ನಲ್ಲಿರುವುದು ಕಂಡುಬಂದಿದೆ. ದಶಕಗಳ ನಂತರ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್ ಚುನಾವಣೆ ನಡೆಸುತ್ತಿದೆ. 1998 ರಿಂದ ಸುದೀರ್ಘ ಕಾಲ ಪಕ್ಷದ ಅಧ್ಯಕ್ಷೆಯಾಗಿ ಸೋನಿಯಾ ಗಾಂಧಿ ಸೇವೆ ಸಲ್ಲಿಸಿದ್ದಾರೆ. 2017 ಮತ್ತು 2019ರ ನಡುವೆ ರಾಹುಲ್ ಗಾಂಧಿ ಪಕ್ಷದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದರು. ನಂತರ ಲೋಕಸಭಾ ಚುನಾವಣೆಯಲ್ಲಿ ಹೀನಾಯ ಸೋಲಿನ ನಂತರ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಅವರು ರಾಜೀನಾಮೆ ಸಲ್ಲಿಸಿದ್ದರು.

ಐತಿಹಾಸಿಕ ಕನ್ನಡ ವಿಧೇಯಕ ಮಂಡನೆ

ಉನ್ನತ ಶಿಕ್ಷಣದಲ್ಲಿ ಮೀಸಲಾತಿ, ಸ್ಥಳೀಯರಿಗೆ ಉದ್ಯೋಗ

ಬೆಂಗಳೂರು, ಸೆ.22– ಕನ್ನಡವನ್ನು ಅಧಿಕೃತ ಭಾಷೆಯಾಗಿ ಎಲ್ಲ ಹಂತಗಳಲ್ಲಿ ಅನುಷ್ಠಾನಗೊಳಿಸುವುದಕ್ಕೆ ಅಗತ್ಯವಾದ ಶಾಸನಾತ್ಮಕ ಬಲವನ್ನು ಒಳಗೊಂಡಂಥ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ವಿಧೇಯಕವನ್ನು ರಾಜ್ಯ ಸರ್ಕಾರ ಗುರುವಾರ ವಿಧಾನಸಭೆಯಲ್ಲಿ ಮಂಡಿಸಿದೆ.


ಕನ್ನಡ ಮತ್ತು ಸಂಸ್ಕೃತಿ, ಇಂಧನ ಸಚಿವ ವಿ ಸುನಿಲ್ ಕುಮಾರ್ ವಿಧೇಯಕವನ್ನು ಮಂಡಿಸಿದ್ದು, ಆಡಳಿತ ಕನ್ನಡ ಜಾರಿ ನಿಯಮ ಉಲ್ಲಂಘಿಸಿದವರಿಗೆ ದಂಡ ವಿಧಿಸುವುದು ಸೇರಿದಂತೆ ಶಿಸ್ತು ಕ್ರಮಗಳ ಅನುಷ್ಠಾನಕ್ಕಾಗಿ ವಿವಿಧ ಹಂತಗಳಲ್ಲಿ ಜಾರಿ ಪ್ರಾಧಿಕಾರ ರಚನೆ ಮಾಡಲು ಈ ವಿಧೇಯಕದ ಮೂಲಕ ಅವಕಾಶ ನೀಡಲಾಗಿದೆ ಎಂದರು.

ಮುಖ್ಯವಾಗಿ ರಾಜ್ಯದಲ್ಲಿ ಭೂಮಿ, ತೆರಿಗೆ ರಿಯಾಯಿತಿ, ಅನುದಾನ ಹಾಗೂ ಇತರೆ ಸೌಲಭ್ಯ ಪಡೆಯುತ್ತಿರುವ ಕೈಗಾರಿಕೆಗಳು, ಕಂಪನಿಗಳು ಕನ್ನಡಿಗರಿಗೆ ಉದ್ಯೋಗ ಮೀಸಲು ನೀಡುವ ಕಾಯಿದೆಯ ಮೇಲ್ವಿಚಾರಣೆಗೂ ಈ ವಿಧೇಯಕ ಬಲ ನೀಡಲಿದೆ.

ಕಾಯಿದೆಯ ಮುಖ್ಯಾಂಶಗಳು: ಉನ್ನತ, ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣದಲ್ಲಿ ಕನ್ನಡವನ್ನು ಒಂದು ಭಾಷೆಯಾಗಿ ಪರಿಚಯಿಸಿ ಕನ್ನಡ ಕಲಿಕೆಗೆ ಪ್ರೋತ್ಸಾಹಿಸುವುದು. ಕನ್ನಡ ಮಾಧ್ಯಮದ ವಿದ್ಯಾರ್ಥಿಗಳಿಗೆ ಉನ್ನತ , ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣದಲ್ಲಿ ಮೀಸಲು ಸೌಲಭ್ಯ ರಾಜ್ಯ ಸರ್ಕಾರ, ಸ್ಥಳೀಯ ಪ್ರಾಧಿಕಾರ, ಶಾಸನಬದ್ಧ ಸಂಸ್ಥೆಗಳು, ಸಹಕಾರ ಸಂಘಗಳ ನೇಮಕ ಪ್ರಕ್ರಿಯೆಯಲ್ಲಿ ಕನ್ನಡ ಭಾಷಾ ಜ್ಞಾನ ಕಡ್ಡಾಯ. ಅಧೀನ ನ್ಯಾಯಾಲಯ ಹಾಗೂ ನ್ಯಾಯ ಮಂಡಳಿಗಳಲ್ಲಿ ಕನ್ನಡ ಭಾಷಾ ಬಳಕೆ. ಕನ್ನಡದ ಬಳಕೆ ಮತ್ತು ಪ್ರಸಾರಕ್ಕೆ ನೀತಿ. ಮಾಹಿತಿ ತಂತ್ರಜ್ಞಾನ ಮತ್ತು ತಂತ್ರಾಂಶದಲ್ಲಿ ಕನ್ನಡ ಬಳಕೆಗೆ ಕ್ರಮ. ರಾಜ್ಯ ಸರಕಾರದಿಂದ ತೆರಿಗೆ ರಿಯಾಯಿತಿ ಹಾಗೂ ಇತರೆ ಸೌಲಭ್ಯ ಪಡೆದ ಕೈಗಾರಿಕೆಗಳಲ್ಲಿ ಕನ್ನಡಿಗರಿಗೆ ಮೀಸಲು ನೀಡುವುದು. ಉದ್ಯೋಗ ಪೋರ್ಟಲ್ ಸ್ಥಾಪನೆ. ಅನುಷ್ಠಾನಗಳ ಮೇಲ್ವಿಚಾರಣೆಗೆ ಕಾರ್ಯ ವ್ಯವಸ್ಥೆ ಸ್ಥಾಪನೆ.

ದಂಡ ವ್ಯವಸ್ಥೆ: ಇದೆಲ್ಲಕ್ಕಿಂತ ಮುಖ್ಯವಾಗಿ ಕನ್ನಡ ಅನುಷ್ಠಾನ ಉಲ್ಲಂಘನೆ ಮಾಡಿದ ವ್ಯಕ್ತಿ, ಸಂಘ– ಸಂಸ್ಥೆಗಳಿಗೆ ಈ ಕಾಯಿದೆಯ ಮೂಲಕ ದಂಡ ವಿಧಿಸುವ ಉಪಬಂಧವನ್ನು ಈ ಕಾಯಿದೆಯ ಮೂಲಕ ಪರಿಚಯಿಸಲಾಗುತ್ತಿದೆ. ಮೊದಲ ಬಾರಿಗೆ ನಿಯಮ ಉಲ್ಲಂಘಿಸಿದ ಖಾಸಗಿ ವ್ಯಕ್ತಿ, ಕಾರ್ಖಾನೆ, ಸಂಘಟನೆಗಳಿಗೆ 5000 ರೂ, ಎರಡನೇ ಬಾರಿಗೆ 10,000 ರೂ. ಹಾಗೂ ಮೂರನೇ ಬಾರಿಗೆ ತಪ್ಪೆಸಗಿದವರಿಗೆ 20, 000 ರೂ.ವರೆಗೆ ದಂಡ ವಿಧಿಸುವ ಅಧಿಕಾರವನ್ನು ವಿವಿಧ ಹಂತದಲ್ಲಿ ಜಾರಿಗೆ ತರುವ ಅಧಿಕಾರ ಜಾರಿ ಪ್ರಾಧಿಕಾರಕ್ಕೆ ನೀಡಲಾಗುತ್ತದೆ. ಸರಕಾರಿ ಅಧಿಕಾರಿಗಳು ಕನ್ನಡ ಜಾರಿ ವಿಚಾರದಲ್ಲಿ ಎಸಗುವ ತಪ್ಪನ್ನು ಕರ್ತವ್ಯ ಲೋಪ ಎಂದು ಪರಿಗಣಿಸಿ ಶಿಸ್ತುಕ್ರಮ ತೆಗೆದುಕೊಳ್ಳಲಾಗುತ್ತದೆ.

ಅಗತ್ಯ ಬಿದ್ದರೆ ವರುಣಾ ಕ್ಷೇತ್ರದಲ್ಲಿ ಪಿಯು ಕಾಲೇಜು ಆರಂಭ



ಬೆಂಗಳೂರು,ಸೆ.22(ಕೆಎಂಶಿ)–ಅವಶ್ಯವಿದ್ದಲ್ಲಿ ವರುಣಾ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪದವಿ ಪೂರ್ವ ಕಾಲೇಜು ಪ್ರಾರಂಭಿಸುವುದಾಗಿ ಶಿಕ್ಷಣ ಸಚಿವ ಬಿ.ಸಿ.ನಾಗೇಶ್, ವಿಧಾನಸಭೆಯಲ್ಲಿ ತಿಳಿಸಿದ್ದಾರೆ.

ಪ್ರಶ್ನೋತ್ತರ ವೇಳೆಯಲ್ಲಿ ಡಾ.ಯತೀಂದ್ರ ಮಾಡಿದ ಪ್ರಸ್ತಾವಕ್ಕೆ ಉತ್ತರಿಸಿದ ಸಚಿವರು, ಕಾಲೇಜು ಮಂಜೂರು ಮಾಡುವ ಬಗ್ಗೆ ಡಿಡಿಪಿಐ ಕಳುಹಿಸಿ ಪರಿಶೀಲನೆ ಮಾಡಲಾಗುವುದು ಎಂದರು. ಕ್ಷೇತ್ರದಲ್ಲಿ ಕಳೆದ 3 ವರ್ಷದಿಂದ ಯಾವುದೇ ಹೊಸ ಕಾಲೇಜು ಮಂಜೂರು ಮಾಡಿಲ್ಲ. ಆದರೆ, 7 ಕಾಲೇಜುಗಳು ಈ ಕ್ಷೇತ್ರದಲ್ಲಿದ್ದು, ಪ್ರತಿ ಕಾಲೇಜಿನಲ್ಲೂ ಪ್ರತಿ ಸೆಕ್ಷನ್‌ನಲ್ಲಿ 50 ವಿದ್ಯಾರ್ಥಿಗಳಿಗಿಂತ ಕಡಿಮೆ ಇದ್ದು, ಹೊಸದಾಗಿ ಕಾಲೇಜು ಪ್ರಾರಂಭಿಸಲು ವಿದ್ಯಾರ್ಥಿಗಳ ಕೊರತೆ ಇದೆ ಎಂದು ಹೇಳಿದರು.

ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಶಿಕ್ಷಕರ ವೈದ್ಯಕೀಯ ವೆಚ್ಚವನ್ನು ಕಾಲಮಿತಿಯೊಳಗೆ ಬಿಡುಗಡೆ ಮಾಡಲು ಮುಖ್ಯಮಂತ್ರಿ ಜತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಇದೇ ಸಂದರ್ಭದಲ್ಲಿ ಎ.ಮಂಜುನಾಥ್ ಅವರ ಪ್ರಸ್ತಾವಕ್ಕೆ ಉತ್ತರಿಸಿದರು.

ವೈದ್ಯಕೀಯ ವೆಚ್ಚ ಮರುಪಾವತಿ ವಿಳಂಬವಾಗುತ್ತಿರುವುದು ತಮ್ಮ ಗಮನಕ್ಕೆ ಬಂದಿದೆ. ಎಷ್ಟು ಸಾಧ್ಯವೋ ಅಷ್ಟು ಬೇಗ ಬಿಡುಗಡೆಗೆ ಕ್ರಮ ತೆಗೆದುಕೊಳ್ಳಲಾಗುವುದು. ಈ ಸಮಸ್ಯೆ ಇತ್ಯರ್ಥಕ್ಕೆ ಬದ್ಧವಾಗಿದೆ ಎಂದು ಸಚಿವ ನಾಗೇಶ್ ಹೇಳಿದರು.

ರಾಜ್ಯದ ವಿವಿಧ ಟ್ರಸ್ಟ್, ಮಠಗಳಿಗೆ 400 ಕೋಟಿ ಹಂಚಿಕೆ

14,762 ಕೋಟಿ ರೂ. ಪೂರಕ ಅಂದಾಜು ಮಂಡಿಸಿದ ಸಿಎಂ ಬೊಮ್ಮಾಯಿ

ಬೆಂಗಳೂರು, ಸೆ.22– 2022–23ನೇ ಸಾಲಿನ ಪೂರಕ ಅಂದಾಜನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಗುರುವಾರ ವಿಧಾನಸಭೆಯಲ್ಲಿ ಮಂಡಿಸಿದ್ದು, ರಾಜ್ಯದ ವಿವಿಧ ಮಠಗಳಿಗೆ ಬರೋಬ್ಬರಿ 400 ಕೋಟಿ ರೂಪಾಯಿ ಹೆಚ್ಚುವರಿಯಾಗಿ ಹಂಚಿಕೆ ಮಾಡಿದ್ದಾರೆ.

ಇಂದು ವಿಧಾನಸಭೆಯಲ್ಲಿ ಈ ಸಾಲಿನ ಮೊದಲ ಪೂರಕ ಅಂದಾಜು ಮಂಡಿಸಿದ ಸಿಎಂ ಬೊಮ್ಮಾಯಿ, ಸುಮಾರು 14,762 ಕೋಟಿ ರೂ.ಗಳ ಬೇಡಿಕೆ ಇದಾಗಿದ್ದು, ಯಾವ ಇಲಾಖೆಗೆ ಎಷ್ಟು ಮೊತ್ತ ವಿವರಣೆ ನೀಡಿದರು. 'ರೈತ ವಿದ್ಯಾನಿಧಿ' ಯೋಜನೆಗೆ 810 ಕೋಟಿ ರೂಪಾಯಿ, ಟ್ರಸ್ಟ್ ಮತ್ತು ಮಠಗಳಿಗೆ 400 ಕೋಟಿ ರೂಪಾಯಿ, ಟ್ಯಾಕ್ಸಿ ಚಾಲಕರ ಮಕ್ಕಳ ಉನ್ನತ ವಿದ್ಯಾಭ್ಯಾಸವನ್ನು ಉತ್ತೇಜಿಸಲು ವಿದ್ಯಾನಿಧಿ ಯೋಜನೆ ವಿಸ್ತರಿಸಲು ಮತ್ತು ಆರೋಗ್ಯ ಸೌಲಭ್ಯಕ್ಕಾಗಿ ವಿಶೇಷ ಯೋಜನೆ ರೂಪಿಸಲು 10 ಕೋಟಿ ಒದಗಿಸಲಾಗಿದೆ.

ಯಾವ ಇಲಾಖೆಗೆ ಎಷ್ಟು ಮೊತ್ತ: ಕೃಷಿ ಮತ್ತು ತೋಟಗಾರಿಕೆ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 188 ಕೋಟಿ ರೂ., ಬಂಡವಾಳ ಲೆಕ್ಕದಲ್ಲಿ 97 ಕೋಟಿ ರೂ., ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 478 ಕೋಟಿ ರೂ. ಬಂಡವಾಳ ಲೆಕ್ಕದಲ್ಲಿ 101 ಕೋಟಿ., ಆರ್ಥಿಕ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 302, ಬಂಡವಾಳ ಲೆಕ್ಕದಲ್ಲಿ 1 ಕೋಟಿ ರೂ., ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 14.48 ಬಂಡವಾಳ ಲೆಕ್ಕದಲ್ಲಿ 3.37 ಕೋಟಿ ರೂ., ಒಳಾಡಳಿತ ಮತ್ತು ಸಾರಿಗೆ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 2673 ಕೋಟಿ, ಬಂಡವಾಳ ಲೆಕ್ಕದಲ್ಲಿ 1228 ಕೋಟಿ ರೂ., ಮೂಲಸೌಕರ್ಯ ಅಭಿವೃದ್ಧಿಗೆ 73 ಕೋಟಿ., ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 1111 ಕೋಟಿ ರೂ. ಬಂಡವಾಳ ಲೆಕ್ಕದಲ್ಲಿ 144 ಕೋಟಿ ರೂ., ಅರಣ್ಯ, ಜೀವಶಾಸ್ತ್ರ ಮತ್ತು ಪರಿಸರಕ್ಕೆ ಸಂಬಂಧಿಸಿದ ವೆಚ್ಚಗಳಿಗೆ ರಾಜಸ್ವ ಲೆಕ್ಕದಲ್ಲಿ 120.98 ಕೋಟಿ ರೂ., ಸಹಕಾರಕ್ಕೆ ರಾಜಸ್ವ ಲೆಕ್ಕದಲ್ಲಿ 1.52 ಕೋಟಿ, ಬಂಡವಾಳ ಲೆಕ್ಕದಲ್ಲಿ 88.38 ಕೋಟಿ ರೂ., ಸಮಾಜ ಕಲ್ಯಾಣಕ್ಕೆ ರಾಜಸ್ವ ಲೆಕ್ಕದಲ್ಲಿ 1145 ಕೋಟಿ, ಬಂಡವಾಳ ಲೆಕ್ಕದಲ್ಲಿ 79 ಕೋಟಿ ರೂ., ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿಗೆ ರಾಜಸ್ವ ಲೆಕ್ಕದಲ್ಲಿ 843 ಕೋಟಿ, ಬಂಡವಾಳ ಲೆಕ್ಕದಲ್ಲಿ 21.33 ಕೋಟಿ ರೂ., ಪ್ರವಾಸೋದ್ಯಮ ಮತ್ತು ಯುವ ಜನ ಸೇವೆಗಳಿಗೆ ರಾಜಸ್ವ ಲೆಕ್ಕದಲ್ಲಿ 43.92 ಕೋಟಿ ರೂ., ಬಂಡವಾಳ ಲೆಕ್ಕದಲ್ಲಿ 10.42 ಕೋಟಿ ರೂ., ಆಹಾರ ಮತ್ತು ನಾಗರಿಕ ಸರಬರಾಜಿಗೆ ರಾಜಸ್ವ ಲೆಕ್ಕದಲ್ಲಿ 1.16 ಕೋಟಿ, ಕಂದಾಯಕ್ಕೆ ರಾಜಸ್ವ ಲೆಕ್ಕದಲ್ಲಿ 836 ಕೋಟಿ, ಬಂಡವಾಳ ಲೆಕ್ಕದಲ್ಲಿ 20 ಕೋಟಿ ರೂ., ವಸತಿಗೆ ರಾಜಸ್ವ ಲೆಕ್ಕದದಲ್ಲಿ 350 ಕೋಟಿ ರೂ. ಮಂಜೂರು, ಶಿಕ್ಷಣಕ್ಕೆ ರಾಜಸ್ವ ಲೆಕ್ಕದಲ್ಲಿ 1261 ಕೋಟಿ, ಬಂಡವಾಳ ಲೆಕ್ಕದಲ್ಲಿ 111 ಕೋಟಿ ರೂ., ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಗೆ 53.79 ಕೋಟಿ ರೂಪಾಯಿಗಳನ್ನು ರಾಜಸ್ವ ಲೆಕ್ಕದಡಿ ಹಾಗೂ 37.59 ಕೋಟಿ ರೂಪಾಯಿಗಳನ್ನು ಬಂಡವಾಳ ಲೆಕ್ಕದಡಿ ಮಂಜೂರು, ನಗರಾಭಿವೃದ್ಧಿ ಇಲಾಖೆಗೆ ಸಂಬಂಧಿಸಿದ ವೆಚ್ಚಗಳ ಸಂದಾಯಕ್ಕೆ ರಾಜಸ್ವ ಲೆಕ್ಕದಲ್ಲಿ 392.08 ಕೋಟಿ ರೂ., ಲೋಕೋಪಯೋಗಿ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 200 ಕೋಟಿ ರೂ., ಆರೋಗ್ಯ ಇಲಾಖೆಗೆ ರಾಜಸ್ವ ಲೆಕ್ಕದಲ್ಲಿ 41.61 ಕೋಟಿ ರೂ. ಬಂಡವಾಳ ಲೆಕ್ಕದಲ್ಲಿ 45.62 ಕೋಟಿ, ಕಾರ್ಮಿಕ ಮತ್ತು ಕೌಸಲ್ಯ ಅಭಿವೃದ್ಧಿಗೆ ರಾಜಸ್ವ ಲೆಕ್ಕದಲ್ಲಿ 207.47 ಕೋಟಿ ರೂ. ಬಂಡವಾಳ ಲೆಕ್ಕದಲ್ಲಿ 4.30 ಕೋಟಿ ರೂ., ಇಂಧನಕ್ಕೆ 10 ಕೋಟಿ, ಕನ್ನಡ ಮತ್ತು ಸಂಸ್ಕೃತಿಗೆ ರಾಜಸ್ವ ಲೆಕ್ಕದಲ್ಲಿ 27.44 ಕೋಟಿ ರೂ. ಬಂಡವಾಳ ಲೆಕ್ಕದಲ್ಲಿ 28 ಕೋಟಿ ರೂ., ಯೋಜನೆ ಸಾಂಖ್ಯಿಕ ಮತ್ತು ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ರಾಜಸ್ವ ಲೆಕ್ಕದಲ್ಲಿ 17.61 ಕೋಟಿ, ಬಂಡವಾಳ ಲೆಕ್ಕದಲ್ಲಿ 131.70 ಕೋಟಿ ರೂ., ಕಾನೂನಿಗೆ ರಾಜಸ್ವ ಲೆಕ್ಕದಲ್ಲಿ 32.41 ಕೋಟಿ, ಬಂಡವಾಳದ ಲೆಕ್ಕದಲ್ಲಿ 6.92 ಕೋಟಿ ರೂ., ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆಗೆ ರಾಜಸ್ವ ಲೆಕ್ಕದಲ್ಲಿ 58.50 ಕೋಟಿ ರೂ., ಬಂಡವಾಳ ಲೆಕ್ಕದಲ್ಲಿ 1 ಕೋಟಿ ರೂ. ಮಂಜೂರು ಮಾಡಲಾಗಿದೆ

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

ಶ್ರೀ ಗೌರೀಶಂಕರ ಟೂರಿಸ್ಟ್
8–10–22 (14 ದಿನ): ದೆಹಲಿ, ಗಂಗೋತ್ರಿ, ಯಮುನೋತ್ರಿ, ಕೇದಾರ್‌ನಾಥ್, ಬದರೀನಾಥ್.
1–11–22 (9 ದಿನ): ದೆಹಲಿ, ಆಗ್ರಾ, ಪ್ರಯಾಗ್‌ರಾಜ್, ಕಾಶಿ, ಗಯಾ, ಅಯೋಧ್ಯ ಇತ್ಯಾದಿ.
11–11–22 (4 ದಿನ): ಶಿರಡಿ, ಬಾಂಬೆ, 3 ಜ್ಯೋತಿರ್ಲಿಂಗ ಇತ್ಯಾದಿ. (ವಿಮಾನ, ಟ್ರೈನ್, ಬಸ್ ಹಾಗೂ ಊಟ, ವಸತಿ).
Mob: 9620002114

ಮೂಡಾ ಅನುಮೋದಿತ ಸೈಟ್‌ಗಳು
ಮೈಸೂರಿನಲ್ಲಿ ಮೂಡಾ ಅನುಮೋದಿತ ಸೈಟ್‌ಗಳು ಎಲ್ಲಾ ಮೂಲಭೂತ ಸೌಕರ್ಯಗಳೊಂದಿಗೆ ಮನೆ ನಿರ್ಮಿಸಲು ಕೇವಲ ರೂ.8 ಲಕ್ಷದಿಂದ ರೂ.75 ಲಕ್ಷದವರೆಗೆ ಲಭ್ಯವಿದೆ
ಸಂಪರ್ಕಿಸಿ :6364230543

URGENT REQUIREMENT
ARAMANE NAGARA DEVELOPERS
1. TELE CALLERS
2. SALES MANAGERS (FIELD SALES)
Job Descriptions
Company : SRI DEVELOPERS LLP | Location : Mysore
Qualification : Any Degree | Experience : 2 to 10 Years
Salary : 10 to 25 K + Incentives
We have requirement for the above Positions, Interested one please apply
@ 95131 57993 / 99862 28888 on Whatsapp

ಹುಣಸೂರು ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಹಕಾರ ಸಂಘ (ರಿ)
ಹುಣಸೂರು, ಮೈಸೂರು ಜಿಲ್ಲೆ
ನೋಂದಣಿ ಸಂಖ್ಯೆ
DRM/SiH/Red.8081. ತಾ.5.11.1980.
2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ
ಆಹ್ವಾನ ಪತ್ರಿಕೆ
ದಿನಾಂಕ 24.09.2022ನೇ ಶನಿವಾರ
ಸಮಯ: ಮಧ್ಯಾಹ್ನ 2 ಗಂಟೆಗೆ
ಸ್ಥಳ: ಶಿಕ್ಷಕರ ಭವನ, ಹುಣಸೂರು.

ದಿ ಯೂನಿಯನ್ ರೈತ ಸೇವಾ ಸಹಕಾರ ಸಂಘ ನಿಯಮಿತ
ಕಡಕೊಳ – 571311, ಮೈಸೂರು ತಾಲ್ಲೂಕು
ಮೇಲ್ಕಂಡ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ದಿನಾಂಕ: 24–09–22 ರ ಶನಿವಾರ ಮಧ್ಯಾಹ್ನ 2 ಗಂಟೆಗೆ ಸಂಘದ ಅಧ್ಯಕ್ಷರಾದ ಶ್ರೀ ಕಪನಿಗೌಡರವರ ಅಧ್ಯಕ್ಷತೆಯಲ್ಲಿ ಕಡಕೊಳದ ಮಹಾವೀರ ಭವನದಲ್ಲಿ ಕರೆಯಲಾಗಿದೆ. ಈಗಾಗಲೇ ಎಲ್ಲಾ ಸದಸ್ಯರಿಗೂ ಆಹ್ವಾನ ಪತ್ರಿಕೆ ತಲುಪಿಸಿದ್ದು ತಲುಪದೇ ಇರುವ ಮಾನ್ಯ ಸದಸ್ಯರು ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಆಗಮಿಸಬೇಕಾಗಿ ಈ ಮೂಲಕ ಕೋರಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಮಂಡಳಿ ಪರವಾಗಿ
ಶ್ರೀಮತಿ ದೀಪು ವಿ. ಪ್ರಭಾರ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು

ಮೈಸೂರು ಮಿತ್ರ 43
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಕೆ.ಪಿ.ಟಿ.ಸಿ.ಎಲ್. ವೇತನ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ ನಿ.
ಎಂ.ಪಿ.ಎಲ್. ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
2021–22 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ
ಆಹ್ವಾನ ಪತ್ರಿಕೆ
ಮಾನ್ಯ ಸದಸ್ಯರುಗಳೇ
ಮೇಲ್ಕಂಡ ಸಂಘದ ವಾರ್ಷಿಕ ಮಹಾಸಭೆಯನ್ನು ದಿನಾಂಕ 24.09.2022ನೇ ಶನಿವಾರ ಬೆಳಿಗ್ಗೆ 11.00 ಘಂಟೆಗೆ ಹೋಟೆಲ್ ಗೋವರ್ಧನ್ ಸಭಾಂಗಣ ಶ್ರೀ ಹರ್ಷರಸ್ತೆ, ಮೈಸೂರು ಇಲ್ಲಿ ಸಂಘದ ಅಧ್ಯಕ್ಷರಾದ
ಶ್ರೀ ಕೆ. ಚನ್ನೇಗೌಡ
ಇವರ ಘನ ಅಧ್ಯಕ್ಷತೆಯಲ್ಲಿ ಕೋವಿಡ್ –19 ಮಾರ್ಗಸೂಚಿಗಳಿಗೆ ಅನುಗುಣವಾಗಿ ಸಭೆ ನಡೆಸಲು ಆಡಳಿತ ಮಂಡಳಿಯು ತೀರ್ಮಾನಿಸಿರುತ್ತದೆ. ಮಾನ್ಯ ಸದಸ್ಯರುಗಳು ಸಭೆಗೆ ಸಕಾಲದಲ್ಲಿ ಆಗಮಿಸಿ ಸಭೆಯನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.
ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/-ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ
ಸೂಚನೆ:
ಆಹ್ವಾನ ಪತ್ರಿಕೆ ತಲುಪದಿದ್ದಲ್ಲಿ ಇದನ್ನೇ ಆಹ್ವಾನ ಪತ್ರಿಕೆ ಎಂದು ತಿಳಿದು ಸಭೆಗೆ ಸಕಾಲದಲ್ಲಿ ಆಗಮಿಸಬೇಕೆಂದು ಕೇಳಿಕೊಳ್ಳುತ್ತೇವೆ.

national health authority
ಸತ್ಯಮೇವ ಜಯತೇ
ಸ್ವಾಸ್ಥ್ಯ ಕಾ ವರದಾನ್ ಆಯುಷ್ಮಾನ್



“ಆಯುಷ್ಮಾನ್ ಭಾರತ್ ಆರ್ಥಿಕ ತೊಂದರೆಯ ಚಿಂತೆ ಇಲ್ಲದೆ ಕೋಟ್ಯಾಂತರ ಬಡ ಕುಟುಂಬಗಳಿಗೆ ಉಚಿತ ಚಿಕಿತ್ಸೆ ಲಭ್ಯತೆಯನ್ನು ಸಾಧ್ಯವಾಗಿಸಿದೆ ”
- ನರೇಂದ್ರ ಮೋದಿ, ಪ್ರಧಾನಮಂತ್ರಿ



ಈ ಯೋಜನೆಯಡಿ ಇಲ್ಲಿವರೆಗೆ 19 ಕೋಟಿಗೂ ಅಧಿಕ ಆಯುಷ್ಮಾನ್ ಕಾರ್ಡ್‌ಗಳನ್ನು ಸೃಷ್ಟಿಸಲಾಗಿದೆ ಮತ್ತು 3.8 ಕೋಟಿಗೂ ಅಧಿಕ ಫಲಾನುಭವಿಗಳಿಗೆ ಉಚಿತ ಚಿಕಿತ್ಸೆ ಲಭ್ಯವಿದೆ. ಇಂದೇ ನಿಮ್ಮ ಅರ್ಹತೆ ಬಗ್ಗೆ ಪರಿಶೀಲಿಸಿ ಮತ್ತು ನಿಮ್ಮ ಅಯುಷ್ಮಾನ್ ಕಾರ್ಡ್ ಸೃಷ್ಟಿಸಿಕೊಂಡರೆ ರೂ. 5 ಲಕ್ಷದವರೆಗೆ ಉಚಿತ ಆರೋಗ್ಯ ಸೌಕರ್ಯ ಲಭ್ಯವಿದೆ.

ಯೋಜನೆಯಡಿ ನಿಮ್ಮ ಅರ್ಹತೆ ಪರಿಶೀಲಿಸಿ ಮತ್ತು ನಿಮ್ಮ ಆಯುಷ್ಮಾನ್ ಕಾರ್ಡ್ ಸೃಷ್ಟಿಸಿ

ಡೌನ್‌ಲೋಡ್ ಪಿಎಂಜಯ್ ಆಪ್ | ಕರೆ ಮಾಡಿ 14555 (ಟೋಲ್ ಫ್ರೀ) | ಲಾಗ್ ಆನ್ https://setu.pmjay.gov | CSC ನಿಮ್ಮ ಸಮೀಪದ ಸಿಎಸ್‌ಸಿ ಇಲ್ಲವೆ ನಿಯೋಜಿತ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆಗೆ ಭೇಟಿ ನೀಡಿ

ಎಬಿ-ಎಆರ್‌ಕೆ ಪ್ರಮುಖ ಉದ್ದೇಶಗಳು (ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ)
ಯೋಜನೆಯಡಿ ಯಾವುದೇ ನಿಯೋಜಿತ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆ ಲಭ್ಯ.
ಕುಟುಂಬದ ಗಾತ್ರ ಮತ್ತು ಕುಟುಂಬ ಸದಸ್ಯರ ವಯಸ್ಸಿನ ಮಿತಿ ಇಲ್ಲ.
ಆಯುಷ್ಮಾನ್ ಕಾರ್ಡ್ ಸೃಷ್ಟಿಸಲು ಯಾವುದೇ ಹಣವಿಲ್ಲ
CBC 17180/15/0021/2223
www.nha.gov.in | @AyushmanNHA | @AyushmanBharatGoI | @AyushmanBharatNHA | @AyushmanNHA



ಕೈಲಾಸ ಶಿವಗಣಾರಾಧನಾ ಆಹ್ವಾನ ಪತ್ರಿಕೆ



ದಿನಾಂಕ 14–09–2022ನೇ ಬುಧವಾರ **ಶ್ರೀ ಜಿ.ಎಸ್. ಶಿವಪ್ರಸಾದ್** ಶಿವೈಕ್ಯರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 24–09–2022 ರ ಶನಿವಾರ ಬೆಳಗ್ಗೆ 11.00 ಗಂಟೆಗೆ ಮಾದಾಪಟ್ಟಣದ ಶ್ರೀ ವಿರಕ್ತ ಮಠಾಧ್ಯಕ್ಷರಾದ ನಿ.ಪ್ರ.ಸ್ವ. ಶ್ರೀ ತೋಂಟದಾರ್ಯಸ್ವಾಮಿಗಳ ದಿವ್ಯಪಾದಪೂಜೆಯೊಂದಿಗೆ ಕೈಲಾಸ ಶಿವಗಣಾರಾಧನೆಯನ್ನು ಶಿವೈಕ್ಯರ ಸ್ವಗೃಹ ನಂ. 896, 1ನೇ ಮಹಡಿ, 10ನೇ ಕ್ರಾಸ್, 2ನೇ ಹಂತ, ಮಯೂರ ಸರ್ಕಲ್, ಹೆಬ್ಬಾಳು, ಮೈಸೂರು ಇಲ್ಲಿ ಏರ್ಪಡಿಸಲಾಗಿದೆ. ತಾವುಗಳು ಆಗಮಿಸಿ ಶಿವೈಕ್ಯರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಶ್ರೀಮತಿ ಶೈಲಜಾ ಶಿವಕುಮಾರಸ್ವಾಮಿ ಶ್ರೀಮತಿ ಎಂ. ಭ್ರಮರಾಂಭಿಕ, ಕು|| ಎಂ.ಎಸ್. ದಿವ್ಯಶ್ರೀ ಮತ್ತು ಕುಟುಂಬವರ್ಗದವರು

ಆಹ್ವಾನ ಪತ್ರಿಕೆ ತಲುಪದೇ ಇದ್ದವರು ಇದನ್ನೇ ಆಹ್ವಾನವೆಂದು ತಿಳಿದು ಆಗಮಿಸಬೇಕಾಗಿ ವಿನಂತಿ.


ನಿಧನ



ರವಿ ಜಗನಾಥನ್
(ಇಂಡಿಯನ್ ಏರ್‌ಫೋರ್ಸ್ -ಜೂನಿಯರ್ ವಾರೆಂಟ್ ಆಫೀಸರ್)

ಇವರು ದಿ: 22.09.2022 ಗುರುವಾರ ನಿಧನರಾಗಿದ್ದು ಮೃತರ ಅಂತ್ಯಕ್ರಿಯೆಯನ್ನು ದಿ .23.09.2022 ಶುಕ್ರವಾರ ಎನ್.ಆರ್.ಮೊಹಲ್ಲಾ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ದುಃಖತಪ್ತರು: ಮೃತರ ಪತ್ನಿ, ಮಗ, ಮಗಳು ಹಾಗೂ ಬಂಧು-ಬಳಗ
ಮೊ: 8553112251, 9731950134
ಟೀಚರ್ ಲೇಔಟ್, ಕೆಸರೆ

2ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆಯಿತು ಆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚ ಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ ಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು ರಾಮಕೃಷ್ಣನಗರ, ಮೈಸೂರು

ಶ್ರೀ ನಿಂಗಪ್ಪ (ಹಾಲಪ್ಪ)
ಕೆ.ಜಿ.ಕೊಪ್ಪಲು, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಶ್ರೀಮತಿ ದಿವ್ಯ ಬಿ.ಎಸ್. ಕೋಂ ವೈ.ಎಸ್. ಶ್ರೀಧರ್, ಸುಮಾರು 32 ವರ್ಷ ವಯಸ್ಸು, ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಚಿಕ್ಕರಸಿನಕೆರೆ ಹೋಬಳಿ, ಯಡಗನಹಳ್ಳಿಯ ವಾಸಿಯಾದ ಇವರು ನನ್ನ ಕಕ್ಷಿ ದಾರರೊಂದಿಗೆ ಸೇರಿ ಕೆಳಗೆ ನಮೂದಿಸಿರುವ ಷೆಡ್ಯೂಲ್ ಸ್ವತ್ತಿನ ಆಸ್ತಿಯನ್ನು ವಿಕ್ರಯಿಸಲು ಮಾತುಕತೆ ನಡೆಸಿರುತ್ತಾರೆ.

ಆದಾಗಿ ಯಾವುದೇ ವ್ಯಕ್ತಿ ಅಥವಾ ಕಂಪನಿ ಅಥವಾ ಬ್ಯಾಂಕ್ ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಕಾನೂನಿನ ರೀತಿ ಅಂದರೆ ಕ್ರಯದ ಮೂಲಕ ಅಥವಾ ದಾನ ಪತ್ರದ ಮೂಲಕ ಅಥವಾ ಯಾವುದೇ ಊರ್ಜಿತ ದಸ್ತಾವೇಜಿನ ಮೂಲಕ ಅಥವಾ ಮಾಲೀಕತ್ವವನ್ನು ಊರ್ಜಿತಪಡಿಸುವ ದಾಖಲಾತಿಗಳೊಂದಿಗೆ ಈ ನೋಟಿಸ್ ಪ್ರಕಟಿಸಿದ ದಿನಾಂಕದಿಂದ 7 ದಿನಗಳ ಒಳಗಾಗಿ ಕೆಳಗೆ ವಿವರಿಸಿರುವ ವಕೀಲರ ಕಛೇರಿಗೆ ಸಂಪರ್ಕಿಸಲು ಈ ಮೂಲಕ ತಿಳಿಸಲಾಗಿದೆ. ಸದರಿ ದಿನಾಂಕದೊಳಗೆ ಆಕ್ಷೇಪಣೆ ಬರದಿದ್ದಲ್ಲಿ ಷೆಡ್ಯೂಲ್ ಸ್ವತ್ತನ್ನು ಕ್ರಯಕ್ಕೆ ಪಡೆಯಲು ನನ್ನ ಕಕ್ಷಿದಾರರು ತೀರ್ಮಾನಿಸಿರುತ್ತಾರೆ.

ಅನುಸೂಚಿ: ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರುಣಾ ಹೋಬಳಿ, ದುದ್ದಗೆರೆ ಇಲ್ಲಿ ಇರುವ ಕೃಷಿ ಭೂಮಿ ಸರ್ವೆ ನಂ. 154/4 ಒಂದು (1) ಎಕರೆ ಹತ್ತು (10) ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಶ್ರೀ ಸಂತೋಷ್ ರವರ ಸ್ವತ್ತು ; ಪಶ್ಚಿಮಕ್ಕೆ: ಶ್ರೀಮತಿ ಮಲ್ಲಮ್ಮನವರ ಸ್ವತ್ತು ; ಉತ್ತರಕ್ಕೆ: ರಸ್ತೆ ; ದಕ್ಷಿಣಕ್ಕೆ: ಶ್ರೀ ರಾಮರಾಯರವರ ಸ್ವತ್ತು ಮತ್ತು ತಿರುಗಾಡುವ ಜಾಗ.

ಸಹಿ/– ರೋಹಿತ್ ಪಿ.ಪಿ., ವಕೀಲರು
ಹಿಮಾಂಶಿ ಲಾ ಅಸೋಸಿಯೇಟ್ಸ್
ನಂ. 529, 9ನೇ ಕ್ರಾಸ್, ಟ್ಯಾಂಕ್ ರಸ್ತೆ, ರವಿ ಕ್ಲಿನಿಕ್ ಹತ್ತಿರ, ಎನ್.ಆರ್. ಮೊಹಲ್ಲಾ, ಮೈಸೂರು–7. Mob: 9900121108

ಸಾರ್ವಜನಿಕರ ಗಮನಕ್ಕೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ನಮ್ಮ ಕಕ್ಷಿದಾರರಾದ ಶ್ರೀ ಮಹದೇವು ಬಿನ್ ಲೇಟ್ ಕೆಂಪೇಗೌಡ ರವರು, ನಾರಾಯಣ ರವರ ಬಿನ್ ಲೇಟ್ ಕೆಂಪೆಗೌಡ ವಿರುದ್ಧ ಮೈಸೂರಿನ 2ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ (ಹಿರಿಯ ಶ್ರೇಣಿ) ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತಿನ ಮೇಲೆ ಆಸ್ತಿ ವಿಭಾಗಕ್ಕಾಗಿ ಅಸಲು ದಾವಾ ಸಂಖ್ಯೆ 1116/2022 ನ್ನು ಹೂಡಿದ್ದು, ಸದರಿ ದಾವಾದಲ್ಲಿ ಮಧ್ಯಕಾಲೀನ ಅರ್ಜಿ ಆದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಸದರಿ ಘನನ್ಯಾಯಾಲಯವು ಪ್ರತಿವಾದಿ ಅಥವಾ ಅವರ ಏಜೆಂಟರುಗಳು ಅಥವಾ ಅಧಿಕಾರ ಪಡೆದವರು ಅಥವಾ ಇನ್ನಿತರರು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಬಾರದೆಂದು ತಾತ್ಕಾಲಿಕ ತಡೆಯಾಜ್ಞೆ ನೀಡಿರುತ್ತೆ. ಯಾರಾದರೂ ಸದರಿ ಸ್ವತ್ತಿನ ಬಗ್ಗೆ ಕ್ರಯ, ಕ್ರಯದ ಒಪ್ಪಂದ, ಭೋಗ್ಯ, ಬಾಡಿಗೆ ಅಥವಾ ಇನ್ನಿತರ ಯಾವುದೇ ಸ್ವತ್ತು ಹಸ್ತಾಂತರದ ರೀತಿಯಲ್ಲಿ ವ್ಯವಹರಿಸಿದ್ದಲ್ಲಿ ಅದು ನಮ್ಮ ಕಕ್ಷಿದಾರರನ್ನು ಬದ್ಧಪಡಿಸುವುದಿಲ್ಲ ಹಾಗೂ ಕಾನೂನು ಬಾಹಿರವಾಗಿರುತ್ತದೆ. ಅದಕ್ಕೆ ನಮ್ಮ ಕಕ್ಷಿದಾರರು ಜವಾಬ್ದಾರರಲ್ಲ. ಅದಕ್ಕೆ ನೀವೇ ಜವಾಬ್ದಾರರು.

ಷೆಡ್ಯೂಲ್

ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಹೆಬ್ಬಾಳು ಗ್ರಾಮದಲ್ಲಿರುವ ಸರ್ವೆ ನಂ.272/1 ರಲ್ಲಿರುವ 0.11 1/2 ಗುಂಟೆ ಜಮೀನು.

ಸದರಿ ಜಮೀನಿನಲ್ಲಿ ನಿರ್ಮಿಸಿರುವ ನಿವೇಶನಕ್ಕೆ ಚೆಕ್ಕುಬಂದಿ:–
* ನಿವೇಶನ ಸಂಖ್ಯೆ – 1837 ರ ಅಳತೆ ಪೂ:ಪ 12.00 ಮೀ, ಉ:ದ–9.00 ಮೀ ಒಟ್ಟು 108.00 ಚ.ಮೀ.
* ನಿವೇಶನ ಸಂಖ್ಯೆ – 1838 ರ ಅಳತೆ ಪೂ:ಪ 12.00 ಮೀ, ಉ:ದ–9.00 ಮೀ ಒಟ್ಟು 108.00 ಚ.ಮೀ
* ನಿವೇಶನ ಸಂಖ್ಯೆ – 1839 ರ ಅಳತೆ ಪೂ:ಪ 12.00 ಮೀ, ಉ:ದ–9.00 ಮೀ ಒಟ್ಟು 108.00 ಚ.ಮಿ.

ಸಹಿ/– N. Ravi Kumar, BBA, LLB
Advocate, # LIG-111, 1st Floor, Panchamantra Road, Kuvempunagar, Mysore-23. Mob.: 9449123406

ಮೈಸೂರು ಮಿತ್ರ 43
ಜಾಹೀರಾತಿಗಾಗಿ ಸಂಪರ್ಕಿಸಿ:
Ph: 0821-2496522 / 23
Email: ad@mysurumithra.com

ನಕ್ಕರೆ ಅದೇ ಸ್ವರ್ಗ

ಗೆಳತಿ : ನಾನು ನಿನ್ನ ಜೊತೆ ಬೈಕ್‌ನಲ್ಲಿ ಹೋಗ್ತಿರೋದನ್ನು ನನ್ನ ಅಪ್ಪ ನೋಡಿಬಿಟ್ರು

ಗೆಳೆಯ : ಹೌದಾ? ಏನು ಹೇಳಿದ್ರು? ಬೈದ್ರಾ?

ಗೆಳತಿ : ನಮ್ಮಪ್ಪ ಇಂಥ ವಿಷಯದಲ್ಲೆಲ್ಲ ತುಂಬ ಸ್ಟ್ರಿಕ್ಟ್. ನೀನು ಅವನ ಜೊತೆ ಬೈಕ್‌ನಲ್ಲಿ ಹೋಗೋದಾದ್ರೆ, ಇನ್ನು ಮೇಲೆ ಬಸ್ ಚಾರ್ಜ್‌ಗಾಗಿ ದುಡ್ಡು ಕೊಡಲ್ಲ ಅಂದ್ರು

ಮೈಸೂರು ಮಿತ್ರ

ಶುಕ್ರವಾರ, 23 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ಅನುಭವವು ಮನುಷ್ಯನ ಮುಂದಿನ ಮಾರ್ಗಕ್ಕೆ ಬೆಳಕಿನಂತೆ. –ಸುಭಾಷಿತ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಬೇಸರಿಸಬಾರದು, ಅವಸರ ಮಾಡಬಾರದು

ನಿಮ್ಮ ಪತ್ರಗಳು

ದಂಡ ವಿಧಿಸಿ, ಗಡಿಪಾರು ಮಾಡಿ...

ಮಾನ್ಯರೆ,

ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ ಉಳ್ಳೇರಹಳ್ಳಿಯ ಗ್ರಾಮದೇವತೆಯ ಮೆರವಣಿಗೆಯ ಸಂದರ್ಭದಲ್ಲಿ ಗುಜ್ಜುಕೋಲು ಮುಟ್ಟಿದನೆಂಬ ಕಾರಣಕ್ಕೆ ಪರಿಶಿಷ್ಟ ಸಮುದಾಯಕ್ಕೆ ಸೇರಿದ ಬಾಲಕನಿಗೆ ಆ ಊರಿನ ಮೇಲು ಸಮುದಾಯಕ್ಕೆ ಸೇರಿದ ಕೆಲವರು 60 ಸಾವಿರ ರೂಪಾಯಿಗಳ ದಂಡ ವಿಧಿಸಿ ದೈಹಿಕ ಹಲ್ಲೆ ನಡೆಸಿರುವುದು ಮತ್ತು ಅವನ ಕುಟುಂಬಕ್ಕೆ ಬಹಿಷ್ಕಾರ ಹಾಕಿರುವುದು ಖಂಡನೀಯ ಮತ್ತು ಅಮಾನವೀಯ. ಇದು ಆ ಪ್ರದೇಶದಲ್ಲಿ ಇನ್ನೂ ಜೀವಂತವಾಗಿರುವ ಊಳಿಗ ಮಾನ್ಯ ವ್ಯವಸ್ಥೆಯ ಪ್ರತೀಕವಾಗಿದೆಯಲ್ಲದೆ ಬೇರೇನಲ್ಲ. ಇಂಥ ಹೇಯ ಕೃತ್ಯಕ್ಕೆ ಕಾರಣರಾದವರೆಲ್ಲರಿಗೆ ತಲಾ 60 ಸಾವಿರ ರೂಪಾಯಿ ದಂಡ ಮತ್ತು ಆ ಊರಿನಿಂದ ಕನಿಷ್ಠ 6 ವರ್ಷಗಳ ಕಾಲ ಗಡಿಪಾರು ಮಾಡಬೇಕು.

ಇಂಥ ನೀಚ ಕೃತ್ಯಗಳು ನಡೆಯದಂತೆ ಎಚ್ಚರ ವಹಿಸಬೇಕಾದರೆ, ಇನ್ನು ಮುಂದಾ ದರೂ ಈ ನಾಡಿನ; ಪ್ರಮುಖವಾಗಿ ಗ್ರಾಮೀಣ ಪ್ರದೇಶಗಳಲ್ಲಿ ವೈಚಾರಿಕ ಚಳುವಳಿ ಯನ್ನು ಹಬ್ಬಿಸಬೇಕಾದ ಜರೂರು ಇದೆ ಎಂಬುದನ್ನು ಈ ಘಟನೆ ಪರೋಕ್ಷವಾಗಿ ಪ್ರತಿಬಿಂಬಿಸುತ್ತದೆ. ಬಸವಣ್ಣ, ಕನಕದಾಸ, ಕುವೆಂಪುವಿನಂಥ ದಾರ್ಶನಿಕ ವ್ಯಕ್ತಿತ್ವವುಳ್ಳವರು ಹುಟ್ಟಿರುವ ನಮ್ಮ ಕನ್ನಡ ನಾಡಿನಲ್ಲಿ ಇಂಥ ಬಾಲಿಶ ಹಾಗೂ ಅಸಹನೆಯ ಘಟನೆಗಳು ಸಂಭವಿಸದಂತೆ ಕಾರ್ಯಕ್ರಮಗಳನ್ನು ರೂಪಿಸುವುದು ಈ ನಾಡಿನ ಎಲ್ಲ ವೈಜ್ಞಾನಿಕ, ವೈಚಾರಿಕ ಮನೋಭಾವವುಳ್ಳವರ ಆದ್ಯ ಕರ್ತವ್ಯವಾಗಿದೆ.

–ಹೊರೆಯಾಲ ದೊರೆಸ್ವಾಮಿ, ಬರಹಗಾರ ಹಾಗೂ ಕರ್ನಾಟಕ ವಿಚಾರವಾದಿ ಒಕ್ಕೂಟದ ಮಾಜಿ ಅಧ್ಯಕ್ಷ, ಮೈಸೂರು

ವಿಜಯನಗರ 4ನೇ ಹಂತಕ್ಕೆ ಪ್ರಾರ್ಥನಾ ಮಂದಿರಬೇಕು

ಮಾನ್ಯರೆ,

ಮೈಸೂರಿನ ವಿಜಯನಗರ 4ನೇ ಹಂತ ದೊಡ್ಡ ಬಡಾವಣೆ ಎಂಬ ಹೆಗ್ಗಳಿಕೆ. ಇಷ್ಟು ದೊಡ್ಡ ಬಡಾವಣೆಗೆ ಒಂದೇ ಒಂದು ಪ್ರಾರ್ಥನಾ ಮಂದಿರವಿಲ್ಲ. ಮೈಸೂರಿನ ಚಿಕ್ಕ ಚಿಕ್ಕ ಬಡಾವಣೆಯಲ್ಲೂ ಪ್ರಾರ್ಥನಾ ಮಂದಿರಗಳಿವೆ. ವಿಜಯನಗರ 4ನೇ ಹಂತ ವಿಸ್ತಾರವಾಗಿದ್ದು, ಒಂದು ಅಂದಾಜಿನ ಪ್ರಕಾರ ಈ ಬಡಾವಣೆಗೆ ಜನಸಂಖ್ಯೆಗೆ ಅನುಗುಣವಾಗಿ 4 ಪ್ರಾರ್ಥನಾ ಮಂದಿರಗಳ ಅವಶ್ಯಕತೆ ಇದೆ. ಮೈಸೂರು ನಗರಾ ಭಿವೃದ್ಧಿ ಪ್ರಾಧಿಕಾರ ಟೌನ್ ಪ್ಲಾನಿಂಗ್‌ನಲ್ಲಿ ಅದು ಯಾವ ರೀತಿ ಪ್ಲಾನ್ ಮಾಡಿದ್ಯೋ ಗೊತ್ತಿಲ್ಲ. ಪ್ರಾರ್ಥನಾ ಮಂದಿರಕ್ಕೆ ಪ್ರತ್ಯೇಕ ನಿವೇಶನದ ಅವಶ್ಯಕತೆ ಇದೆ.

ಪ್ರಾರ್ಥನಾ ಮಂದಿರ ಎಂಬುದು ಸಾರ್ವಜನಿಕ ಆಸ್ತಿ. ಈ ಹಿನ್ನೆಲೆಯಲ್ಲಿ ಈ ಬಡಾವಣೆಗೆ 4 ಪ್ರಾರ್ಥನಾ ಮಂದಿರಗಳಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿವೇಶನ ಕಾಯ್ದಿರಿಸುವಂತೆ ಈ ಮೂಲಕ ಜಿಲ್ಲಾಧಿಕಾರಿಗಳು ಮತ್ತು ಆಯುಕ್ತರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಈ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಸಿ.ಎ. ನಿವೇಶನ ಸಬ್ ಕಮಿಟಿ ಸದಸ್ಯರಾಗಿರುವುದರಿಂದ ವಿಜಯನಗರ 4ನೇ ಹಂತದ ನಿವಾಸಿಗಳ ಬಹುದಿನಗಳ ಬೇಡಿಕೆಯಾದ ಪ್ರಾರ್ಥನಾ ಮಂದಿರಕ್ಕೆ ನಿವೇಶನ ಒದಗಿಸಿಕೊಡ ಬೇಕೆಂದು ಈ ಮೂಲಕ ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

– ಬಿ.ಜಿ.ರಂಗೇಗೌಡ, ಮೈಸೂರು.

ಹಸುವಿನ ಕಳೇಬರ ತೆರವುಗೊಳಿಸಿ

ಮಾನ್ಯರೆ,

ಮೈಸೂರಿನ ಹಂಚ್ಯಾ ಸಾತಗಳ್ಳಿ ಬಿ ವಲಯ ರಾಜಕಾಲುವೆ ಬಳಿ ಯಾರೋ ಕಿಡಿಗೇಡಿಗಳು ಸತ್ತ ಹಸುವನ್ನು ತಂದು ಹಾಕಿದ್ದಾರೆ. ಅದು ಕೊಳೆತು ದುರ್ನಾತ ಬೀರುತ್ತಿದೆ. ಇದರ ಮಧ್ಯೆ ಮುಡಾ ಅಧಿಕಾರಿಗಳಾದ ಮೋಹನ್ ಹಾಗೂ ಸಂಪತ್ ಮತ್ತು ನಗರ ಪಾಲಿಕೆಯ ಎಸಿ ಕೃಷ್ಣ ಅವರಿಗೆ ಮಾಹಿತಿ ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಸತ್ತ ಹಸುವಿನಿಂದ ಹೊರಸೂಸುವ ದುರ್ನಾತದಿಂದ ಇಲ್ಲಿನ ನಿವಾಸಿಗಳು ತೀರಾ ತೊಂದರೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ, ಸೂಕ್ತ ಕ್ರಮ ಕೈಗೊಳ್ಳುವರೆ?

–ಜಯಸ್ವಾಮಿ, ನಿವೃತ್ತ ಸಬ್‌ಇನ್ಸ್‌ಪೆಕ್ಟರ್, ಮೈಸೂರು

ಆರೋಗ್ಯ ಇಲಾಖೆಗೆ ಬಯೋಮೆಟ್ರಿಕ್ ಹಾಜರಾತಿ ಸ್ವಾಗತಾರ್ಹ

ಮಾನ್ಯರೆ,

ಕರ್ತವ್ಯದೆಡೆಗೆ ನಿಷ್ಠೆ, ಪ್ರಾಮಾಣಿಕತೆ ಹೊಂದಿರಬೇಕಾಗಿರುವುದು ಪ್ರತಿಯೊಬ್ಬ ಉದ್ಯೋಗಿಯ ಮೊದಲ ಆದ್ಯತೆಯಾಗಿರಬೇಕು. ಪಡೆಯುವ ಸಂಬಳಕ್ಕೆ ತಕ್ಕಂತೆ ಕೆಲಸ ನಿರ್ವಹಿಸಬೇಕೆಂಬ ನೈತಿಕತೆ ಹೊಂದಿರುವ ನೌಕರರಿಗೆ ಹಾಜರಾತಿಯ ಅಗತ್ಯವಿರುವುದಿಲ್ಲ. ಏಕೆಂದರೆ ಅವರು ತಮ್ಮ ಕರ್ತವ್ಯವನ್ನು ಸರಿಯಾಗಿ ನಿಭಾಯಿಸುತ್ತಾರೆ.

ಪ್ರಸ್ತುತ ರಾಜ್ಯ ಸರ್ಕಾರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳಿಗೆ ಬಯೋಮೆಟ್ರಿಕ್ ಹಾಜರಾತಿ ಕಡ್ಡಾಯಗೊಳಿಸಿರುವುದು ಉತ್ತಮ ಬೆಳವಣಿಗೆಯಾಗಿದ್ದು, ಇದರಿಂದಾಗಿ ಆಡಳಿತದಲ್ಲಿ ಸುಧಾರಣೆ ತರಲು ಸಾಧ್ಯವಾಗುತ್ತದೆ.

ಇದರಿಂದಾಗಿ ಕಡತಗಳ ವಿಲೇವಾರಿಯಲ್ಲಿ ವೇಗ ಹೆಚ್ಚಾಗಿ ಜನಸಾಮಾನ್ಯರು ಅಲೆದಾಡುವುದಕ್ಕೆ ಮುಕ್ತಿ ದೊರೆಯುತ್ತದೆ. ಬಯೋಮೆಟ್ರಿಕ್ ಹಾಜರಾತಿ ಪದ್ಧತಿಯಿಂದಾಗಿ ಅಧಿಕಾರಿಗಳು ನೆಪ ಹೇಳಿ ಕರ್ತವ್ಯದಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ.

ಬಯೋಮೆಟ್ರಿಕ್ ಹಾಜರಾತಿ ಪದ್ಧತಿ ಅಭಿವೃದ್ಧಿ ಹೊಂದಿದ ದೇಶಗಳಲ್ಲಿ ವ್ಯವಸ್ಥಿತವಾಗಿ ಜಾರಿಯಲ್ಲಿದ್ದು, ಈ ವ್ಯವಸ್ಥೆಯಿಂದಾಗಿ ಅಲ್ಲಿನ ಅಭಿವೃದ್ಧಿಯ ವೇಗದಲ್ಲಿ ಸಮತೋಲನವಿರುತ್ತದೆ. ಈ ವ್ಯವಸ್ಥೆ ಭಾರತದಂತಹ ಅಭಿವೃದ್ಧಿಶೀಲ ರಾಷ್ಟ್ರಗಳಿಗೆ ಅಗತ್ಯವಾಗಿದ್ದು, ದೇಶದ ಪ್ರತಿಯೊಂದು ಇಲಾಖೆಯಲ್ಲೂ ಈ ವ್ಯವಸ್ಥೆ ಜಾರಿಗೆ ತಂದರೆ ಸರ್ಕಾರಿ ಕೆಲಸಗಳು ವೇಗ ಪಡೆದುಕೊಳ್ಳುತ್ತವೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಬಯೋಮೆಟ್ರಿಕ್ ಹಾಜರಾತಿಯನ್ನು ಜಾರಿಗೆ ತಂದಿರುವ ರಾಜ್ಯ ಸರ್ಕಾರಕ್ಕೆ ಅಭಿನಂದನೆಗಳು ಮತ್ತು ಈ ಹಾಜರಾತಿ ವ್ಯವಸ್ಥೆ ಎಲ್ಲಾ ಇಲಾಖೆಗಳಿಗೂ ಜಾರಿಯಾಗಲಿ.

–ರಾಸುಮ ಭಟ್, ಚಿಕ್ಕಮಗಳೂರು



ಪ್ರೊ. ಎ.ವಿ.ನರಸಿಂಹಮೂರ್ತಿ
ಮಾಜಿ ಮುಖ್ಯಸ್ಥರು, ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ.


ಇತಿಹಾಸದ ಪುಟಗಳು

ಪ್ರಸಿದ್ಧ ಪ್ರಾಚೀನ ವಿದ್ಯಾಕೇಂದ್ರ ತಕ್ಷಶಿಲೆ

ತಕ್ಷಶಿಲೆಯು ಪ್ರಾಚೀನ ಗಾಂಧಾರ ದೇಶದ ರಾಜಧಾನಿಯಾಗಿತ್ತು ಇದು ಉನ್ನತ ವಿದ್ಯಾ ಕೇಂದ್ರವೂ ಆಗಿದ್ದಿತು. ಈ ನಗರವನ್ನು ಭರತ ಮುನಿಯು ಸ್ಥಾಪಿಸಿದ್ದನೆಂದು ಮತ್ತು ತಕ್ಷನಿಂದ ಬಂದಿತೆಂಬುದನ್ನು ಪುರಾಣಗಳು ಉಲ್ಲೇಖಿಸಿವೆ. ತಕ್ಷಶಿಲೆಯಲ್ಲಿ ಜನಮೇಜಯರಾಯನು ಸರ್ಪಯಾಗವನ್ನು ಆಚರಿಸಿದನೆಂದು ಹೇಳಲಾಗಿದೆ. ತಕ್ಷಶಿಲೆಯು ಕ್ರಿಪೂ. ಏಳನೆಯ ಶತಮಾನದ ಸಮಯದಲ್ಲಿ ಶ್ರೇಷ್ಠ ವಿದ್ಯಾಕೇಂದ್ರವಾಗಿದ್ದಿತು. ಮಿಥಿಲೆ, ವಾರಣಾಸಿ, ರಾಜಗೃಹ ಮುಂತಾದ ಕಡೆಗಳಿಂದ ಶ್ರೇಷ್ಠ ವಿದ್ವಾಂಸರು ತಕ್ಷಶಿಲೆಗೆ ಬಂದಿದ್ದರು. ಕ್ರಿಪೂ. ಆರನೆಯ ಶತಮಾನದಲ್ಲಿ ಪಾರಸೀಕರ ದಾಳಿಗೂ ಕ್ರಿ.ಪೂ. ಏಳನೆಯ ಶತಮಾನದಲ್ಲಿ ಇಂಡೋ–ಬ್ಯಾಕ್ಟ್ರಿಯನ್ನರ ದಾಳಿಗೂ ಮತ್ತು ಕ್ರಿ.ಪೂ. ಒಂದನೆಯ ಶತಮಾನದಲ್ಲಿ ಸಿಥಿಯನ್ನರ ದಾಳಿಗೂ ಮತ್ತು ಕ್ರಿ.ಶ. ಒಂದನೆಯ ಶತಮಾನದಲ್ಲಿ ಕುಶಾನರ ದಾಳಿಗೂ ಸಿಕ್ಕಿತ್ತು.

ತಕ್ಷಶಿಲೆಯಲ್ಲಿ ಭಾರತ ಪುರಾತತ್ವ ಇಲಾಖೆಯ ಮುಖ್ಯಾಧಿಕಾರಿಯಾಗಿದ್ದ ಸರ್ ಜಾನ್ ಮಾರ್ಷಲ್‌ನ ನೇತೃತ್ವದಲ್ಲಿ ಭೂಶೋಧನೆಗಳು 1819ರಿಂದ 1934 ರವರೆಗೆ ನಡೆದವು. ಈ ಭೂಶೋಧನೆಗಳ ಫಲವಾಗಿ ತಕ್ಷಶಿಲೆಯ ಇತಿಹಾಸವನ್ನು ಕ್ರಿ.ಪೂ. 7ನೆಯ ಶತಮಾನಕ್ಕೆ ಮಾರ್ಷಲ್ ಕೊಂಡೊಯ್ದರು. ಈ ಭೂಶೋಧನೆಯಿಂದ ಅನೇಕ ಪ್ರಾಚೀನ ನಗರಗಳು ಬೆಳಕಿಗೆ ಬಂದಿವೆ. ತಕ್ಷಶಿಲೆಯು ದೊಡ್ಡ ನಗರವಾಗಿ ಬೆಳೆದು ಪರ್ಷಿಯನ್ ಸಾಮ್ರಾಜ್ಯದ ಇಪ್ಪತ್ತನೆಯ ಪ್ರಾಂತ್ಯವಾಗಿ ಬೆಳೆಯಿತು. ಗ್ರೀಕರು ಭಾರತದ ವಾಯುವ್ಯ ನೆಲೆಗಳನ್ನು ಆಕ್ರಮಿಸಿದಾಗ, ತಕ್ಷಶಿಲೆಯು ತಮ್ಮ ರಾಜಧಾನಿಯಾಗಲು ಸರಿಯಾಗಿಲ್ಲವೆಂದು ಭಾವಿಸಿ ತಾಮ್ರ ನಾಲೆಯ ದಡದಲ್ಲಿದ್ದ ಸರ್ಕಾಪ್ ನಗರವನ್ನು ಸ್ಥಾಪಿಸಿದರು. ಮಾರ್ಷಲ್ ನಡೆಸಿದ ಉತ್ಖನನದಲ್ಲಿ ಆ ಕಾಲದ ಅರಮನೆ, ಗ್ರೀಕ್ ಧಾರ್ಮಿಕ ಮಂದಿರಗಳು ಹಾಗೂ ಸಾರ್ವಜನಿಕರ ಕಟ್ಟಡಗಳು ಮತ್ತು ಜನಸಾಮಾನ್ಯರು ವಾಸ ಮಾಡುವ ಪ್ರದೇಶಗಳೂ ಕಂಡುಬಂದಿವೆ. ತಕ್ಷಶಿಲೆಯ ನಗರದ ಸುತ್ತಲೂ ಹದಿನೈದರಿಂದ ಇಪ್ಪತ್ತೊಂದು ಅಡಿಗಳ ಅಗಲವಾದ ಕಲ್ಲಿನ ಕೋಟೆಗಳು, ಗೋಡೆಗಳು ಉತ್ಖನನದಲ್ಲಿ ದೊರಕಿದವು. ತಕ್ಷಶಿಲೆಯ ಸಮೀಪದಲ್ಲಿದ್ದ ಗುಡ್ಡದಲ್ಲಿ, ಅರಮನೆ, ಸಾರ್ವಜನಿಕ ಕಟ್ಟಡಗಳು ಇದ್ದ ನಗರಭಾಗವೆಂದು ಊಹಿಸಲಾಗಿದೆ. ಬೆಟ್ಟದ ನಡುವಿನ ಕಣಿವೆಯಲ್ಲಿ ಕೋಟೆಯ ಮಹಾ ದ್ವಾರವಿದ್ದಿತು. ಸರ್ಕಾಪ್ ನಗರದ ರಸ್ತೆಗಳ ಪಕ್ಕದಲ್ಲಿ, ತೆರೆದ ಚರಂಡಿ ಮತ್ತು ಮನೆಗಳ ಚರಂಡಿ ವ್ಯವಸ್ಥೆ ಹಾಗೂ ಬಾವಿಗಳು ಇವೆಲ್ಲವೂ ಸರ್ಕಾಪ್ ನಗರದ ಜನಗಳಿಗೆ ನೈರ್ಮಲ್ಯದ ಬಗ್ಗೆ ಇದ್ದ ಕಳಕಳಿಯನ್ನು ಸೂಚಿಸುತ್ತದೆ. ಈ ನಗರದ ಹೊರಭಾಗದಲ್ಲಿ ಬಡಜನರ ಕಾರ್ಮಿಕರ ವಸತಿಗಳು ಮತ್ತು ಗ್ರೀಕ್ ದೇವತೆಯ ಮಂದಿರವೂ ಇದ್ದವು.

ಬ್ಯಾಕ್ಟ್ರಿಯದ ಗ್ರೀಕರು ಹಾಗೂ ಶಕರು ಮತ್ತು ಪಾರ್ಥಿಯನ್ನರ ಕಾಲಗಳಲ್ಲಿ ಸರ್ಕಾಪ್ ನಗರವು ಮುಂದುವರಿದಿತ್ತು. ಬಹುಶಃ ಮೊದಲನೆಯ ಕನಿಷ್ಕನ ಕಾಲದಲ್ಲಿ ಸರ್ಕಾಪ್ ಮುಂದುವರಿದರೂ ಹೊಸ ರಾಜಧಾನಿಯನ್ನು ಸರ್‌ಸುಖ್‌ನಗರದಲ್ಲಿ ಸ್ಥಾಪಿಸಲಾಯಿತು. ಚಚ್ಚೌಕವಾದ ಪ್ರದೇಶಗಳನ್ನೊಳಗೊಂಡ ಸರ್ಕಾಪ್ ನಗರದ ಸುತ್ತಳತೆ



ಸುಮಾರು 3 ಮೈಲಿಗಳಷ್ಟು ಇದ್ದವು. ಕೋಟೆಯ ಗೋಡೆಯ ಅಗಲ 18 ಅಡಿಗಳಿದ್ದು, ಅದನ್ನು ಕಲ್ಲಿನಲ್ಲಿ ಕಟ್ಟಲಾಗಿತ್ತು ಮತ್ತು ಬುರುಜಗಳು ವೃತ್ತಾಕಾರದಲ್ಲಿದ್ದವು. ಈ ಕೋಟೆಯ ಒಳಭಾಗದಲ್ಲಿ ಮೂರು ಗ್ರಾಮಗಳಿದ್ದವು. ಸರ್‌ಸೂಕ್‌ನಗರವು ಕ್ರಿ.ಶ. ಏಳರಿಂದ ಎಂಟನೆಯ ಶತಮಾನದಲ್ಲಿ ಕುಶಾನ ರಾಜ್ಯವು ನಾಶವಾಗುವವರೆಗೂ ರಾಜಧಾನಿಯಾಗಿತ್ತು.

ಮಾರ್ಷಲ್‌ನ ಉತ್ಖನನದಿಂದ ತಕ್ಷಶಿಲೆಯ ಮೂರು ಪ್ರಾಚೀನ ನಗರಗಳಲ್ಲದೆ ನಗರದ ಹೊರಗಡೆಯಲ್ಲಿದ್ದ ಕಣಿವೆಗಳ ಪ್ರದೇಶದಲ್ಲಿದ್ದ ನೂರಾರು ಬೌದ್ಧ ಸ್ತೂಪ ಮತ್ತು ವಿಹಾರಗಳ ಅವಶೇಷಗಳು ಬೆಳಕಿಗೆ ಬಂದಿವೆ. ಈ ಗುಡ್ಡದ ಎತ್ತರದ ಭಾಗದಲ್ಲಿ ಬೌದ್ಧರ ನೆಲೆಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಮುಖ್ಯವಾದುದೇ **ಧರ್ಮರಾಜಿಕ ಸ್ತೂಪ**. ಇದನ್ನು ಮೊದಲು ಅಶೋಕನ ಕಾಲದಲ್ಲಿ ಕಟ್ಟಲಾಗಿದ್ದು ಮತ್ತು ಕುಶಾನರ ಕಾಲದಲ್ಲಿ ವಿಶಾಲವಾಗಿ ಪುನರ್ನಿರ್ಮಿಸಲಾಗಿದೆ. ಧರ್ಮರಾಜಿಕ ಸ್ತೂಪದಲ್ಲಿ ಎತ್ತರವಾದ ಜಗುಲಿಯ ಮೇಲೆ ವೃತ್ತಾಕಾರದ ಸ್ತೂಪವನ್ನು ಕಟ್ಟಲಾಗಿದೆ. ಧರ್ಮರಾಜಿಕ ಸ್ತೂಪದಲ್ಲಿ ಗೂಡುಗಳು ಹಾಗೂ ಬುದ್ಧ, ಬೋಧಿಸತ್ವ ಮತ್ತಿತರ ಬೌದ್ಧ ದೇವತೆಗಳ ಶಿಲ್ಪಗಳಿವೆ. ಇವುಗಳಿಂದ ಧರ್ಮರಾಜಿಕ ಸ್ತೂಪದ ಸೌಂದರ್ಯವು ಹೆಚ್ಚಿದೆ.

ಮುಖ್ಯ ಸ್ತೂಪದ ಸುತ್ತಲೂ ಕೆಲವು ಪುಟ್ಟಸ್ತೂಪಗಳನ್ನು ವಿವಿಧ ಕಾಲಗಳಲ್ಲಿ ನಿರ್ಮಿಸಲಾಗಿದೆ. ಮುಖ್ಯ ಸ್ತೂಪದ ಸುತ್ತಲೂ **ಪ್ರದಕ್ಷಿಣಾಪಥವಿದೆ**. ಅಲ್ಲಿ ಅನೇಕ ಸಣ್ಣ ಗುಡಿಗಳನ್ನು ಕಟ್ಟಲಾಗಿದೆ. ಈ ಗುಡಿಗಳಲ್ಲಿ ಅಲ್ಲಿಯೇ ವಾಸವಾಗಿದ್ದು ನಿರ್ವಾಣ (ನಿಧನ) ಪಡೆದ ಪ್ರಮುಖ ಬೌದ್ಧ ಸನ್ಯಾಸಿಗಳ ಸ್ಮಾರಕಸ್ತೂಪಗಳಿವೆ. ಈ ಸ್ತೂಪದ ಹೊರವಲಯದಲ್ಲಿ ಕೆಲವು ವಿಶಾಲವಾದ ಗುಡಿಗಳನ್ನು ನಿರ್ಮಿಸಲಾಗಿದೆ. ಇವುಗಳಲ್ಲಿ ನೈರುತ್ಯ ಮೂಲೆಯಲ್ಲಿರುವ ಗಜಪೃಷ್ಠಾಕೃತಿಯ ಗುಡಿ ಗಮನಾರ್ಹವಾದದ್ದು.

ಧರ್ಮರಾಜಿಕ ಸ್ತೂಪದ ಆಗ್ನೇಯದಲ್ಲಿ ಕೆಲವು ಸಣ್ಣಸ್ತೂಪಗಳಿವೆ. ಇವುಗಳನ್ನು ದಾಟಿ ಮುಂದೆ ಹೋದರೆ, ಅಶೋಕನ ಮಗ ಕುನಾಲನ ಸ್ಮರಣಾರ್ಥವಾಗಿ ಕಟ್ಟಲಾದ ಕುನಾಲ ಸ್ತೂಪವಿದೆ. ಸರ್ಕಾಪ್ ನಗರವನ್ನು ದಾಟಿದರೆ ಚಾಂಡಿಯಾಲ್ ದೇವಿಗಾಗಿ ಕಟ್ಟಲಾದ ದೇವಾಲಯವಿದೆ. ಮಾರ್ಷಲ್ ಅವರು ಈ ಕಟ್ಟಡವನ್ನು ಜರತುಷ್ಟ ಪಂಥದ ಮಂದಿರವೆಂದು ಅಭಿಪ್ರಾಯಪಟ್ಟಿದ್ದಾರೆ. ಇವುಗಳಲ್ಲದೆ ತಕ್ಷಶಿಲೆಯಲ್ಲಿರುವ ಮೊಹ್ರ ಮೊರಾಡು, ಪಿಪ್ಪಲಾ ಮತ್ತು ಜಾಲಿಯನ್ ಸ್ತೂಪಗಳು ಹಾಗೂ ಬೌದ್ಧ ನಿರ್ಮಾಣಗಳು ಮತ್ತು ಅದಕ್ಕೆ ಸೇರಿದ ವಿಹಾರಗಳು ಈ ಪ್ರದೇಶದ ಉತ್ತಮ ನಿರ್ಮಾಣದ ಮಾದರಿಗಳೆಂದು ಪರಿಗಣಿಸಲಾಗಿದೆ.

ತಕ್ಷಶಿಲೆಯು ಭಾರತದ ಪ್ರಾಚೀನ ವಿಶ್ವವಿದ್ಯಾನಿಲಯವಾಗಿದ್ದಿತೆಂದು ಎಲ್ಲರೂ ಒಪ್ಪಿದ್ದಾರೆ. ಇಲ್ಲಿ ಅನೇಕ ತತ್ವ ಚಿಂತಕರೂ (ಫಿಲಾಸಫರ್ಸ್), ಪಂಡಿತರೂ ಇದ್ದರೂ ಪಂಡಿತರು ಅನೇಕ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡುತ್ತಿದ್ದರು. ಈ ಪಂಡಿತರು ಯಾವ ಪಠ್ಯಕ್ರಮವನ್ನು ಅನುಸರಿಸುತ್ತಿರಲಿಲ್ಲ. ಆದರೆ ವಿದ್ಯಾರ್ಥಿಗಳಿಗೆ ಅವಶ್ಯಕವಾದ ಪಾಠಗಳನ್ನು ಹೇಳಿಕೊಡುತ್ತಿದ್ದರು. ಪರೀಕ್ಷೆಗಳಾಗಲೀ ಪದವಿ ಪ್ರದಾನ ಮಾಡುವ ವ್ಯವಸ್ಥೆಯಾಗಲೀ ಆಗ ಇರಲಿಲ್ಲ. ಪ್ರತಿಯೊಬ್ಬ ಗುರುಗಳ ಬಳಿಯಲ್ಲೂ ಸುಮಾರು ಐದನೂರು ವಿದ್ಯಾರ್ಥಿಗಳಿರುತ್ತಿದ್ದರೆಂದು ಬೌದ್ಧ ಜಾತಕದ ಕಥೆಗಳು ಹೇಳುತ್ತವೆ. ಖ್ಯಾತ ಗುರುಗಳ ಬಳಿ ನೂರ ಮೂರು ರಾಜಕುಮಾರರು ಅಧ್ಯಯನ ಮಾಡುತ್ತಿದ್ದರೆಂದು ಮಹಾಸೂತ ಸೋಮಜಾತಕದಲ್ಲಿ ಹೇಳಿದೆ. ವಿದ್ಯಾರ್ಥಿಗಳು ತಮ್ಮ ಗುರುಗಳ ಮನೆಯಲ್ಲೇ ವಾಸಿಸುತ್ತಿದ್ದರು. ಆದರೆ ಶ್ರೀಮಂತರಾದ ವಿದ್ಯಾರ್ಥಿಗಳು ಪ್ರತ್ಯೇಕವಾದ ನಿವಾಸಗಳಲ್ಲಿ ವಾಸಿಸುತ್ತಿದ್ದರು. ಆರಂಭದ ಕಾಲದಲ್ಲಿ ತಕ್ಷಶಿಲೆಯು ಅನೇಕ ಗುರುಕುಲಗಳ ಸಮೂಹವಾಗಿದ್ದಿತು. ಕ್ರಿಪೂ. ಆರನೆಯ ಶತಮಾನದ ವೇಳೆಗೆ ಅದೊಂದು ಪ್ರಖ್ಯಾತ ವಿದ್ಯಾಕೇಂದ್ರವಾಯಿತು. ಆಗಿನ ಕಾಲದಲ್ಲಿ ವಾಹನ ಸೌಕರ್ಯಗಳಾಗಲೀ ಅಥವಾ ಮಾರ್ಗಸೌಕರ್ಯಗಳಾಗಲೀ ಇಲ್ಲದಿದ್ದರೂ, ಉಜ್ಜಯಿನಿ ಮುಂತಾದ ದೂರದ ಊರುಗಳಿಂದ ವಿದ್ಯಾರ್ಥಿಗಳು ಬಂದು ತಕ್ಷಶಿಲೆಯಲ್ಲಿ ಅಧ್ಯಯನ ಮಾಡುತ್ತಿದ್ದರು.

ಕೋಸಲ ಹಾಗೂ ಕಾಶಿ ಮುಂತಾದ ರಾಜಮನೆತನಗಳು ತಮ್ಮ ಮಕ್ಕಳಿಗೆ ಇಲ್ಲಿ, ಜಾತಕ ಶಿಕ್ಷಣಕ್ಕೆ ವ್ಯವಸ್ಥೆ ಮಾಡುತ್ತಿದ್ದುದು, ತಕ್ಷಶಿಲೆಯಲ್ಲಿ ಸಂಪ್ರದಾಯವಾಗಿದ್ದಿತು. ತಕ್ಷಶಿಲೆಯಲ್ಲಿ ದೊರಕುತ್ತಿದ್ದ ಬಿಲ್ಲು ವಿದ್ಯೆಯು ರಾಜಮನೆತನಗಳಿಗೆ ಪ್ರಿಯವಾಗಿದ್ದಿತು. ಬಿಂಬಸಾರನ ಮಗ ಜೀವಿತನು ಏಳು ವರ್ಷಗಳವರೆಗೆ ವೈದ್ಯ ವಿದ್ಯೆಯನ್ನು ಅಧ್ಯಯನ ಮಾಡಿದ್ದನ್ನು, ಇಲ್ಲಿ ಅಧ್ಯಯನ ನಿರತ ವಿದ್ಯಾರ್ಥಿಗಳು ತಮ್ಮ ಹದಿನೇಳನೆಯ ವಯಸ್ಸಿನಲ್ಲಿ ಕಲಾಶಾಸ್ತ್ರ (ಹ್ಯೂಮಾನಿಟೀಸ್), ವಿಜ್ಞಾನ ಹಾಗೂ ವೃತ್ತಿ ವಿದ್ಯೆಗಳನ್ನು ಕಲಿಯುತ್ತಿದ್ದರು. ವಿದ್ಯಾರ್ಥಿಗಳಲ್ಲಾಗಲೀ ಮತ್ತು ಅಧ್ಯಾಪಕರಲ್ಲಾಗಲೀ ಜಾತಿಪದ್ಧತಿ ಇರಲಿಲ್ಲ. ಒಬ್ಬ ಗುರುಗಳ ಬಳಿ ಬ್ರಾಹ್ಮಣರಂತೆ ಕ್ಷತ್ರಿಯರೂ ಮತ್ತು ವೈಶ್ಯರೂ ಮತ್ತು ಇತರರು ಅಧ್ಯಯನ ಮಾಡುತ್ತಿದ್ದರು. ಬ್ರಾಹ್ಮಣ ವಿದ್ಯಾರ್ಥಿಗಳೂ ಬಿಲ್ಲು ವಿದ್ಯೆಯನ್ನು ಕಲಿಯುತ್ತಿದ್ದರು ಎಂಬ ಅಂಶ ಶರಭಂಗ ಜಾತಕದಲ್ಲಿ ಉಲ್ಲೇಖಗೊಂಡಿದೆ. ಇದೇ ಜಾತಕವು ಧನುರ್ವಿಧ್ಯೆಯಲ್ಲಿ ಬ್ರಾಹ್ಮಣ, ಕ್ಷತ್ರಿಯರೂ, ವೈಶ್ಯರೂ ಮತ್ತು ಇತರರೂ ಅಭ್ಯಾಸ ಮಾಡುತ್ತಿದ್ದರೆಂದು ತಿಳಿಸಿದೆ. ಕ್ಷತ್ರಿಯರಾದ ಕೌರವರಿಗೆ ಬ್ರಾಹ್ಮಣರಾದ ದ್ರೋಣಾಚಾರ್ಯರು ಗುರುಗಳಾಗಿದ್ದರು. ಅನೇಕ ಸ್ಮೃತಿಗಳೂ ಬ್ರಾಹ್ಮಣರು ಎಲ್ಲಾ ವೃತ್ತಿಗಳನ್ನು ಕೈಗೊಳ್ಳುತ್ತಿದ್ದರು ಎಂಬ ಅಂಶವನ್ನು ಸೂಚಿಸುತ್ತವೆ. ಆದುದರಿಂದ ಜಾತಿ ಪದ್ಧತಿಯು ವೃತ್ತಿಯನ್ನು ಇನ್ನೂ ಅನುಸರಿಸುತ್ತಿರಲಿಲ್ಲ. ಯಾವ ವಿದ್ಯಾರ್ಥಿಯೇ ಆಗಲಿ, ತನಗೆ ಆಸಕ್ತಿಯಿರುವ ವಿದ್ಯೆಯನ್ನು ಕಲಿಯಲು ಅವಕಾಶವಿದ್ದಿತು.

ವಿದ್ಯಾರ್ಥಿಗಳು ತಾವು ತಕ್ಷಶಿಲೆಗೆ ಸೇರುವಾಗ ಅಥವಾ ಬಿಡುವಾಗ ಯಾವ ರೀತಿಯ ಗುರುದಕ್ಷಿಣೆಯನ್ನು ಕೊಡುತ್ತಿರಲಿಲ್ಲ. ಅದರ ಬದಲು ಗುರುಗಳಿಗೆ ಅಗತ್ಯವಾದ ಸೇವಾ ಕಾರ್ಯಗಳನ್ನು ಮಾಡುತ್ತಿದ್ದರು. ಹಗಲು ಹೊತ್ತಿನಲ್ಲಿ ವಿದ್ಯಾರ್ಥಿಗಳಿಂದ ಕೆಲಸಗಳನ್ನು ಮಾಡಿಸಿಕೊಂಡು ರಾತ್ರಿಯ ಸಮಯದಲ್ಲಿ ಗುರುಗಳು ವಿದ್ಯಾರ್ಥಿಗಳಿಗೆ ಪಾಠವನ್ನು ಹೇಳುತ್ತಿದ್ದರು.


ತಕ್ಷಶಿಲೆಯಲ್ಲಿ ಮೂರು ವೇದಗಳನ್ನು ಮತ್ತು ಹದಿನೆಂಟು ಪುರಾಣಗಳನ್ನು ಹಾಗೂ ವೃತ್ತಿ ಕಲೆಗಳನ್ನು ಬೋಧಿಸುತ್ತಿದ್ದ ಅಂಶವನ್ನು ಜಾತಕಗಳು ಸೂಚಿಸುತ್ತವೆ. ಇವುಗಳ ಜೊತೆಗೆ ವಿದ್ಯಾರ್ಥಿಗಳಿಗೆ ವೈದ್ಯ, ಶಸ್ತ್ರಚಿಕಿತ್ಸೆ, ಬಿಲ್ಲು ವಿದ್ಯೆ, ಯುದ್ಧ ವಿದ್ಯೆ, ಖಗೋಳಶಾಸ್ತ್ರ ಜ್ಯೋತಿಷ್ಯ, ಗಣಿತ, ವ್ಯವಸಾಯ, ದೇವತಾಶಾಸ್ತ್ರ, ಸರ್ಪವಿದ್ಯೆ, ಮಂತ್ರ ವಿದ್ಯೆ ಮತ್ತು ತತ್ವಶಾಸ್ತ್ರ ಮುಂತಾದವುಗಳ ಜೊತೆಗೆ ವೇದಾಂತವನ್ನು ಬೋಧಿಸಲಾಗುತ್ತಿತ್ತು.

ತಕ್ಷಶಿಲೆಯ ಪ್ರಖ್ಯಾತಿಯು ಮೌರ್ಯರ ಕಾಲಕ್ಕೆ ಅವನತಿಯನ್ನು ಕಂಡಿತು.ಒಟ್ಟಿನಲ್ಲಿ ತಕ್ಷಶಿಲೆಯ ಖ್ಯಾತಿಯು ಕ್ರಿ.ಶ. 250ರವರೆಗೂ ಉಳಿದುಕೊಂಡು ಬಂತಾದರೂ, ಕುಶಾನರ ಅನಂತರ ತಕ್ಷಶಿಲೆಯಲ್ಲಿ ಅಧಿಕಾರಕ್ಕೆ ಬಂದ ಕೆಟ್ಟ ದೊರೆಗಳ ಹಿಡಿತಕ್ಕೆ ಸಿಕ್ಕಿ ತಕ್ಷಶಿಲೆಯ ಶಿಕ್ಷಣ ಸೌಲಭ್ಯಗಳು ಐದನೆಯ ಶತಮಾನದ ಸಮಯದಲ್ಲಿ ನಿಂತು ಹೋದವು. ಫಾಹಿಯಾನ್ ಭಾರತದಲ್ಲಿ ಸಂಚರಿಸಿ ಶಿಕ್ಷಣ ಕೇಂದ್ರಗಳನ್ನು ಹೆಸರಿಸುವಾಗ ತಕ್ಷಶಿಲೆಯನ್ನು ಗುರುತಿಸಿಲ್ಲ. ಅಷ್ಟೇ ಅಲ್ಲದೆ, ತಕ್ಷಶಿಲೆಯಲ್ಲಿ ಪ್ರಖ್ಯಾತವಾಗಿದ್ದ ಕುಮಾರಲಬ್ಧನ ಮಠವೂ ಪಾಳು ಬಿದ್ದಿತ್ತು.

ಈ ರೀತಿ ಪ್ರಪಂಚದ ನಾಗರಿಕತೆಯ ಆರಂಭ ಕಾಲದಲ್ಲಿ ರೂಪುಗೊಂಡು, ಸುಮಾರು ಹದಿನಾಲ್ಕು ಶತಮಾನಗಳವರೆಗೆ ನಡೆದು ಬಂದ ತಕ್ಷಶಿಲೆಯು ಹೂಣರ ದಾಳಿಯಿಂದ ಅಂತಿಮವಾಗಿ ನಾಶವಾಯಿತು. ಇದೊಂದು ದೊಡ್ಡ ದುರಂತವೇ ಸರಿ.

ಪೇಸಿಎಂ ತೀವ್ರಗೊಳಿಸಲು ಕಾಂಗ್ರೆಸ್ ನಿರ್ಧಾರ

● ಈ ಸಂಬಂಧ ಇಬ್ಬರ ಬಂಧನಕ್ಕೆ ಆಕ್ರೋಶ ● ಕರ್ನಾಟಕ ಭ್ರಷ್ಟಾಚಾರದ ರಾಜಧಾನಿ ● ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಪಕ್ಷ ನಾಯಕ ಸಿದ್ದರಾಮಯ್ಯ ವಾಗ್ದಾಳಿ



ಬೆಂಗಳೂರು, ಸೆ.22(ಕೆಎಂಶಿ)–ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ವಿರುದ್ಧ ಆರಂಭಿಸಿರುವ ಪೇಸಿಎಂ ಹೋರಾಟವನ್ನು ರಾಜ್ಯಾದ್ಯಂತ ವಿಸ್ತರಿಸಲು ಪ್ರತಿಪಕ್ಷ ಕಾಂಗ್ರೆಸ್ ನಿರ್ಧರಿಸಿದೆ.

ಪೇಸಿಎಂ ಪೋಸ್ಟರ್‌ಗಳನ್ನು ವಿಧಾನಸೌಧ ಸೇರಿದಂತೆ ಇಡೀ ರಾಜ್ಯಾದ್ಯಂತ ನಾವೇ ಅಂಟಿಸುತ್ತೇವೆ ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ.

ಈ ಸಂಬಂಧ ಪ್ರತ್ಯೇಕವಾಗಿ ಹೇಳಿಕೆ ನೀಡಿರುವ ಉಭಯ ನಾಯಕರು ರಾಜ್ಯದಲ್ಲಿರುವ ಬಿಜೆಪಿ ಸರ್ಕಾರ ಶೇ.40ರಷ್ಟು ಕಮಿಷನ್ ಸರ್ಕಾರ ಎಂದು ಅಭಿಯಾನವನ್ನು ನಮ್ಮ ಪಕ್ಷ ನಡೆಸುತ್ತಿದೆ. ಅದರ ಮುಂದುವರೆದ ಭಾಗವಾಗಿ ಈ ಅಭಿಯಾನ ನಡೆದಿದೆ ಎಂದರು.

ಪೇಸಿಎಂ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರನ್ನು ಬಂಧಿಸಿದ ಸರ್ಕಾರದ ವಿರುದ್ಧ ಹರಿಹಾಯ್ದಿದ್ದಾರಲ್ಲದೆ, ಕರ್ನಾಟಕ ಈಗ ದೇಶದ ಭ್ರಷ್ಟಾಚಾರದ ರಾಜಧಾನಿ ಎಂದು ಗುಡುಗಿದ್ದಾರೆ.

ಸಿದ್ದರಾಮಯ್ಯ ಮಾತನಾಡಿ, ನಾನೇ ಖುದ್ದಾಗಿ ಪಕ್ಷದ ಶಾಸಕರ ಜತೆ ಸೇರಿ ಪೇಸಿಎಂ ಭಿತ್ತಿಚಿತ್ರವನ್ನು ಅಂಟಿಸುತ್ತೇನೆ. ಬೇಕಿದ್ದರೆ ನನ್ನನ್ನು ಬಂಧಿಸಿ ಎಂದು ಸರ್ಕಾರಕ್ಕೆ ಸವಾಲು ಎಸೆದರು. ಬಿಜೆಪಿ ಸರ್ಕಾರದಲ್ಲಿ ಹೊಸ ಕಾನೂನು ಜಾರಿಯಾಗಿದೆ. ಅದರ ಪ್ರಕಾರ ಲಂಚ ತಿನ್ನುವುದು ತಪ್ಪಲ್ಲ, ಆದರೆ ಲಂಚ ಪಡೆಯುವುದರ ವಿರುದ್ಧ ಮಾತನಾಡುವುದು ತಪ್ಪು ಎಂದು ಅವರು ವ್ಯಂಗ್ಯವಾಡಿದರು.

ನನ್ನ ಮತ್ತು ಡಿ.ಕೆ.ಶಿವಕುಮಾರ್ ವಿರುದ್ಧ ಭಿತ್ತಿಚಿತ್ರಗಳನ್ನು ಅಂಟಿಸಿದ್ದರಲ್ಲ, ಅದರ ಬಗ್ಗೆ ಯಾಕೆ ಮೌನವಾಗಿದ್ದೀರಿ ಆ ಬಗ್ಗೆ ಪೊಲೀಸರ ಕಣ್ಣು ಯಾಕೆ ಕುರುಡಾಗಿತ್ತು ಎಂದು ಪ್ರಶ್ನಿಸಿದ ಅವರು, ಬಿಜೆಪಿಯ ಯಶಸ್ಸಿನ ಸೂತ್ರ ಅಪಪ್ರಚಾರ, ವಿರೋಧಿಗಳ ಚಾರಿತ್ರ್ಯಹನನ ಎಂದು ಆರೋಪಿಸಿದರು.

ಸಾಮಾಜಿಕ ಮಾಧ್ಯಮವೂ ಸೇರಿದಂತೆ ಹೊಸ ತಂತ್ರಜ್ಞಾನವನ್ನು ಬಿಜೆಪಿಯವರಷ್ಟು ದುರುಪಯೋಗ ಮಾಡಿಕೊಂಡ ಮತ್ತೊಂದು ರಾಜಕೀಯ ಪಕ್ಷ ಜಗತ್ತಿನಲ್ಲೇ ಇಲ್ಲ ಎಂದ ಅವರು, ಬಿಜೆಪಿಯ ಅಧಿಕೃತ ಸೋಷಿಯಲ್ ಮೀಡಿಯಾಗಳಲ್ಲಿ ನನ್ನ ವಿರುದ್ಧ ಕುತ್ಸಿತ ಹೇಳಿಕೆಗಳು, ವಿರೂಪಗೊಳಿಸಿದ ಫೋಟೋಗಳ ವಿವರ ಕೊಡುತ್ತೇನೆ. ಅವರನ್ನು ಬಂಧಿಸಿ ಎಂದು ಒತ್ತಾಯಿಸಿದರು.

ನಾನು ಅಧಿಕಾರದಲ್ಲಿದ್ದಾಗ ಇಂತಹ ಅಪಪ್ರಚಾರಗಳ ಬಗ್ಗೆ ಪೊಲೀಸರಿಗೆ ದೂರು ಕೊಟ್ಟಿರಲಿಲ್ಲ. ಇದು ನಾನು ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನೀಡಿದ ಗೌರವ ಎಂದರು. ರಾಜಕೀಯ ವ್ಯವಸ್ಥೆಯಲ್ಲಿ ಇಂತಹ ಆರೋಪ–ಪ್ರತ್ಯಾರೋಪಗಳು ಸಹಜವಾದರೂ ಇದನ್ನು ಇಷ್ಟೊಂದು ಕೀಳು ಮಟ್ಟಕ್ಕೆ ಇಳಿಸಿದ ಕೀರ್ತಿ ಬಿಜೆಪಿಗೆ ಸಲ್ಲುತ್ತದೆ ಎಂದು ದೂರಿದ ಅವರು, ಬೇರೆಯವರಿಗೆ ಚುಚ್ಚಿದಾಗ ಖುಷಿಪಟ್ಟಿರಿ, ಆದರೆ ಯಾರೋ ನಿಮಗೆ ಚುಚ್ಚಿದ್ದಕ್ಕೆ ನೋವಾಯಿತೇ? ಎಂದು ಪ್ರಶ್ನಿಸಿದರು. ಪ್ರತ್ಯೇಕವಾಗಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಬಿಜೆಪಿಯವರು ನಮ್ಮ ಬಗ್ಗೆಯೂ ಕ್ಯೂ ಆರ್ ಕೋಡ್ ಹಾಕಿದ್ದಾರೆ. ವಿಚಾರಣೆಗೆ ಹೋದ ಸಮಯದಲ್ಲಿ ನಾನು ಕಂಬಿಯ ಹಿಂದೆ ಇರುವಂತೆ ಫೋಟೋ ಹಾಕಿದ್ದಾರೆ. ಹಾಗಂತ ನಾನು ಅವರ ವಿರುದ್ಧ ದೂರು ಕೊಡಲು ಸಾಧ್ಯವೇ?ಎಂದು ಪ್ರಶ್ನಿಸಿದರು.

ರಾಜಕೀಯದಲ್ಲಿ ಇರುವವರನ್ನು ಜನ ಪ್ರಶ್ನಿಸುವುದು, ಟೀಕಿಸುವುದು ಸಹಜ. ಅಧಿಕಾರದಲ್ಲಿರುವವರು ಇದನ್ನು ಜೀರ್ಣಿಸಿಕೊಳ್ಳಬೇಕು ಎಂದ ಅವರು,ಇದು ದೇಶದಲ್ಲೇ ಅತ್ಯಂತ ಭ್ರಷ್ಟ ಸರ್ಕಾರವಾಗಿದ್ದು, ಕರ್ನಾಟಕ ಈಗ ಭ್ರಷ್ಟಾಚಾರದ ರಾಜಧಾನಿ ಎಂದು ಆರೋಪಿಸಿದರು. ಬಿಜೆಪಿಯವರು ನಮ್ಮ ವಿರುದ್ಧ ನೂರಾರು ಪೋಸ್ಟರ್ ಅಂಟಿಸಿದ್ದಾರೆ.ಅವರ ವಿರುದ್ಧ ಕ್ರಮವಾಗಿಲ್ಲ. ಈಗ ನಮ್ಮ ಶಾಸಕ ಪ್ರಿಯಾಂಕ್ ಖರ್ಗೆ ಅವರಿಗೆ ನೋಟೀಸು ಕೊಡುತ್ತಾರಂತೆ. ಅವರ ಪಕ್ಷದ ಯತ್ನಾಳ್, ವಿಶ್ವನಾಥ್ ಅವರಂತವರೇ ಬಿಜೆಪಿಯ ಭ್ರಷ್ಟಾಚಾರದ ಬಗ್ಗೆ ಹೇಳಿದ್ದಾರೆ. ಯತ್ನಾಳ್ ಅವರಂತೂ ಸಿಎಂ ಆಗಲು ಮೂರೂವರೆ ಸಾವಿರ ಕೋಟಿ ರೂಪಾಯಿ ನೀಡಬೇಕು ಎಂದಿದ್ದಾರೆ ಎಂದರು.

ನಾವು ತಲೆ ಎತ್ತಿ ಓಡಾಡದಂತಹ ಪರಿಸ್ಥಿತಿ ಎದುರಾಗಿದೆ: ಮಾಧುಸ್ವಾಮಿ



ಬೆಂಗಳೂರು, ಸೆ.22(ಕೆಎಂಶಿ)–ಕಮಿಷನ್ ಹಣವನ್ನು ಪೇ ಸಿಎಂ ಮೂಲಕ ಪಾವತಿಸುವಂತೆ ಬುಧವಾರ ನಗರದಲ್ಲಿ ಕಾಣಿಸಿಕೊಂಡ ಪೋಸ್ಟರ್‌ಗಳು ಇಂದು ವಿಧಾನಮಂಡಲದ ಉಭಯ ಸದನಗಳಲ್ಲಿ ಕಾವೇರಿದ ಚರ್ಚೆಗೆ ಕಾರಣವಾಗಿದ್ದಲ್ಲದೆ ಕೋಲಾಹಲ ಸೃಷ್ಟಿಯಾಯಿತು. ಪೇ ಸಿಎಂ ಎಂಬ ಆ್ಯಪ್‌ನ ಪೋಸ್ಟರ್ ಅಂಟಿಸಿದ್ದನ್ನು ಸರ್ಕಾರ ಗಂಭೀರವಾಗಿ ಪರಿಗಣಿಸಿದ್ದಲ್ಲದೆ ಇಂತಹ ಆ್ಯಪ್‌ಗಳಿಗೆ ಕಡಿವಾಣ ಹಾಕುವುದಾಗಿ ಘೋಷಿಸಿದೆ.

ವಿಧಾನಸಭೆಯಲ್ಲಿಂದು ಶೂನ್ಯ ವೇಳೆಯಲ್ಲಿ ಸದಸ್ಯ ಪಿ.ರಾಜೀವ್ ಮಾಡಿದ ಪ್ರಸ್ತಾಪದ ಸಂದರ್ಭದಲ್ಲಿ ಮಧ್ಯೆ ಪ್ರವೇಶಿಸಿ ಮಾತನಾಡಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಸಾರ್ವಜನಿಕ ಜೀವನದಲ್ಲಿರುವವರ ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಮಸಿ ಬಳಿಯುವ ಕೆಲಸವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ತಮ್ಮ ವಿರುದ್ಧ ನಿನ್ನೆ ಪೇ ಸಿಎಂ ಆ್ಯಪ್‌ನ ಪೋಸ್ಟರ್‌ಗಳನ್ನು ಅಂಟಿಸಿ, ಸಾಮಾಜಿಕ ಜಾಲತಾಣಗಳಲ್ಲಿ ಪ್ರಚಾರ ಮಾಡಿದ ಕುರಿತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೊಂದಿದ್ದಾರೆ. ಮುಖ್ಯಮಂತ್ರಿ, ರಾಜ್ಯಪಾಲರಂತಹವರ ವಿರುದ್ಧ ಇಂತಹ ಅಪಪ್ರಚಾರ ನಡೆಯುವ ಕೆಲಸವಾದರೆ ನಾವು ಎಂತಹ ಪರಿಸ್ಥಿತಿಗೆ ತಲುಪಿದ್ದೇವೆ ಎಂದು ಪ್ರಶ್ನಿಸಿದ ಅವರು,ನಾವು ಇದಕ್ಕೆ ಅಂಕುಶ ಹಾಕಿಯೇ ಹಾಕುತ್ತೇವೆ ಎಂದು ನುಡಿದರು.

ಪೋಸ್ಟರ್‌ಗಳನ್ನು ಅಂಟಿಸುವುದು, ಫೋನ್ ಕರೆಗಳನ್ನು ರೆಕಾರ್ಡ್ ಮಾಡಿ ಪ್ರಚಾರ ಮಾಡುವುದು, ಸಾಮಾಜಿಕ ಜಾಲತಾಣಗಳಲ್ಲಿ ರಾಜಕಾರಣಿಗಳು, ವ್ಯಕ್ತಿಗಳ ವಿರುದ್ಧ ಅಸಂಬದ್ಧವಾಗಿ ಬಿಂಬಿಸುವ ಕೆಲಸ ಮಾಡುವುದು, ಹೀಗೆ ಇವೆಲ್ಲದಕ್ಕೆ ನಾವು ಕಡಿವಾಣ ಹಾಕುತ್ತೇವೆ ಎಂದು ಗುಡುಗಿದರು. ಇತ್ತೀಚಿನ ದಿನಗಳಲ್ಲಿ ಸಾರ್ವಜನಿಕ ಜೀವನದಲ್ಲಿರುವವರು ತಲೆ ಎತ್ತಿ ನಡೆಯಲಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಲ್ಲು ಹೊಡೆಯುವುದು, ಮೊಟ್ಟೆ ಹೊಡೆಯುವುದು, ಮಸಿ ಬಳಿಯುವುದು ಮಾಡಿಕೊಳ್ಳುತ್ತಿದ್ದೇವೆ.

ನಾವುಗಳು ಶ್ರಮದಿಂದ ಸಾರ್ವಜನಿಕ ಜೀವನವನ್ನು ಪ್ರವೇಶಿಸಿದವರು, ನಮಗೆ ಯಾರ ಬೆಂಬಲವೂ ಇಲ್ಲ. ಆದರೆ ಕೆಲವು ಕಿಡಿಗೇಡಿಗಳು ನಮ್ಮನ್ನು ಅತ್ಯಂತ ಕೀಳಾಗಿ ಬಿಂಬಿಸುತ್ತಿದ್ದಾರೆ. ಇದು ಜನಸಾಮಾನ್ಯರು ತುಚ್ಛವಾಗಿ ನೋಡುವಂತೆ ಮಾಡಿದೆ. ಪೇ ಸಿಎಂ ಆ್ಯಪ್‌ನ ಪೋಸ್ಟರ್ ಹಿಂದೆ ಯಾರಿದ್ದಾರೆ, ಯಾವ ಪಕ್ಷವಿದೆ ಎಂಬ ಬಗ್ಗೆ ತನಿಖೆ ನಡೆಯುತ್ತದೆ. ಸತ್ಯ ಹೊರಬರುತ್ತದೆ.ಈಗಾಗಲೇ ನಾವು ಇಬ್ಬರನ್ನು ಬಂಧಿಸಿದ್ದೇವೆ ಎಂದು ಅವರು ಸದನಕ್ಕೆ ಮಾಹಿತಿ ನೀಡಿದರು. ವಿಧಾನಪರಿಷತ್ತಿನಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ಮತ್ತು ಬಿಜೆಪಿ ಸದಸ್ಯರ ನಡುವೆ ಭಾರೀ ವಾಗ್ಯುದ್ಧ ನಡೆಯಿತಲ್ಲದೆ ಸದನವನ್ನು ಎರಡು ಬಾರಿ ಮುಂದೂಡಲಾಯಿತು.

ಹಿಜಾಬ್ ವಿಚಾರಣೆ ಪೂರ್ಣ: ತೀರ್ಪು ಕಾಯ್ದಿರಿಸಿದ ಸುಪ್ರೀಂಕೋರ್ಟ್

ನವದೆಹಲಿ, ಸೆ.22– ರಾಜ್ಯದ ಶಿಕ್ಷಣ ಸಂಸ್ಥೆಗಳಲ್ಲಿ ರಾಜ್ಯ ಸರ್ಕಾರದ ಹಿಜಾಬ್ ನಿಷೇಧವನ್ನು ಎತ್ತಿ ಹಿಡಿದಿರುವ ಕರ್ನಾಟಕ ಹೈಕೋರ್ಟ್ ಆದೇಶದ ವಿರುದ್ಧದ ಅರ್ಜಿಗಳ ವಿಚಾರಣೆಯನ್ನು ಗುರುವಾರ ಪೂರ್ಣಗೊಳಿಸಿದ ಸುಪ್ರೀಂಕೋರ್ಟ್ ತೀರ್ಪು ಕಾಯ್ದಿರಿಸಿದೆ. ಮಾ.15ರಂದು, ಉಡುಪಿಯ ಸರ್ಕಾರಿ ಪದವಿ ಪೂರ್ವ ಬಾಲಕಿಯರ ಕಾಲೇಜಿನ ಮುಸ್ಲಿಂ ವಿದ್ಯಾರ್ಥಿನಿಯರ ತಂಡ, ತರಗತಿಯೊಳಗೆ ಹಿಜಾಬ್ ಧರಿಸಲು ಅನುಮತಿ ನೀಡುವಂತೆ ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು. ಅಲ್ಲದೆ ಇದು ಇಸ್ಲಾಮಿಕ್ ನಂಬಿಕೆ ಅಗತ್ಯ ಧಾರ್ಮಿಕ ಆಚರಣೆಯ ಭಾಗವಲ್ಲ ಎಂದು ಹೈಕೋರ್ಟ್ ಹೇಳಿತ್ತು. ರಾಜ್ಯ ಸರ್ಕಾರವು ಫೆಬ್ರವರಿ 5, 2022ರಂದು ಹೊರಡಿಸಿದ ತನ್ನ ಆದೇಶದಲ್ಲಿ ಶಾಲೆ ಮತ್ತು ಕಾಲೇಜುಗಳಲ್ಲಿ ಸಮಾನತೆ, ಸಮಗ್ರತೆ ಮತ್ತು ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ತರುವ ಬಟ್ಟೆ ಧರಿಸುವುದನ್ನು ನಿಷೇಧಿಸಿದೆ. ರಾಜ್ಯ ಸರ್ಕಾರದ ನಿಷೇಧ ಎತ್ತಿ ಹಿಡಿದ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಹಲವು ಅರ್ಜಿಗಳು ಸಲ್ಲಿಕೆಯಾಗಿದ್ದವು. ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಹೇಮಂತ್ ಗುಪ್ತಾ ಮತ್ತು ಸುಧಾಂಶು ಧುಲಿಯಾ ಅವರ ಪೀಠವು ಈ ಪ್ರಕರಣದ ತೀರ್ಪನ್ನು ಕಾಯ್ದಿರಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visweswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಕಬ್ಜ ಟೀಸರ್ 2.5 ಕೋಟಿ ವೀಕ್ಷಣೆ !



ಕನ್ನಡದಲ್ಲಿ ಮತ್ತೊಂದು ಅದ್ಭುತ ಮೇಕಿಂಗ್ ಚಿತ್ರ ತೆರೆಗೆ ಬರಲು ಸಿದ್ಧವಾಗುತ್ತಿದೆ. ಅದಕ್ಕೆ ಪೂರಕವಾಗಿ ಟೀಸರ್ ಬಿಡುಗಡೆಯಾದ ಮೂರೇ ದಿನದಲ್ಲಿ ಎರಡೂವರೆ ಕೋಟಿ ಜನ ವೀಕ್ಷಿಸಿದ್ದಾರೆ. ಆರ್.ಚಂದ್ರು ನಿರ್ದೇಶನ ಹಾಗೂ ನಿರ್ಮಾಣ ಇರೋ ಆ ಚಿತ್ರದ ಹೆಸರು 'ಕಬ್ಜ'. ಭಾರತೀಯ ಚಿತ್ರರಂಗವೇ ಕನ್ನಡದತ್ತ ತಿರುಗಿ ನೋಡುವಂಥ ಸಿನಿಮಾ ಮಾಡಬೇಕು ಎಂಬ ಕನಸಿಟ್ಟುಕೊಂಡಿದ್ದ ನಿರ್ದೇಶಕ ಚಂದ್ರು ಕಬ್ಜ ಚಿತ್ರವನ್ನು ಅದೇ ರೀತಿ ನಿರೂಪಿಸಿದ್ದಾರೆ. ಯಾವುದೇ ಡೈಲಾಗ್‌ಗಳಿಲ್ಲದ 163 ಸೆಕೆಂಡ್ ಅವಧಿಯ ಟೀಸರ್ ಈಗ ಭಾರತದಾದ್ಯಂತ ದೊಡ್ಡ ಸೌಂಡ್ ಮಾಡುತ್ತಿದೆ. ಶ್ರಿಯಾ ಶರಣ್ ನಾಯಕಿಯಾಗಿರುವ ಈ ಚಿತ್ರದಲ್ಲಿ ರಾಣಾ ದಗ್ಗುಬಾಟಿ ಖಳನಾಯಕನಾಗಿ ಕಾಣಿಸಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ಚಂದ್ರು, 'ಕಬ್ಜ' ಚಿತ್ರದ ಟೀಸರ್ 25ಮಿಲಿಯನ್ ಜನ ವೀಕ್ಷಿಸಿದ್ದಾರೆ. . ಕೆಜಿಎಫ್ ಲೆವೆಲ್‌ನಲ್ಲಿ ಇಡೀ ದೇಶವೇ ನಮ್ಮತ್ತ ನೋಡುವಂಥ ಸಿನಿಮಾ ಮಾಡಬೇಕೆಂದು ನಾನು 4 ವರ್ಷದಿಂದ ಕಷ್ಟಪಟ್ಟು ಈ ಚಿತ್ರಕ್ಕಾಗಿ ಕೆಲಸ ಮಾಡಿದ್ದೇನೆ. 'ಕಬ್ಜ' ಚಿತ್ರವನ್ನು ಪ್ಯಾನ್ ಇಂಡಿಯಾ ಅಂತ ಮಾಡಿದ್ದೆವು. ಈಗದು ಗ್ಲೋಬಲ್ ಲೆವೆಲ್‌ಗೆ ಹೋಗುತ್ತಿದೆ ಎಂದ ಚಂದ್ರು ಚಿತ್ರೀಕರಣಕ್ಕಾಗಿಯೇ ಮಿನರ್ವ ಮಿಲ್‌ಅನ್ನು 3ವರ್ಷ ಲೀಸ್ ಪಡೆದುಕೊಂಡಿದ್ದೆವು. ಅಲ್ಲದೆ ಶಿವಕುಮಾರ್ ಅವರು ಅದ್ಭುತವಾದ ಸೆಟ್‌ವರ್ಕ್ ಮಾಡಿಕೊಟ್ಟಿದ್ದರು. ಚಿತ್ರಕ್ಕೆ 140 ರಿಂದ 150ದಿನಗಳ ಕಾಲ ಶೂಟಿಂಗ್ ಮಾಡಿದ್ದೇವೆ. ಈಗಾಗಲೇ ಡಬ್ಬಿಂಗ್ ಮುಗಿದು ರೀರೆಕಾರ್ಡಿಂಗ್, ಫೈನಲ್ ಟ್ರಿಮ್ಮಿಂಗ್ ನಡೆಯುತ್ತಿದೆ. ವಿಶೇಷ ಹಾಡಿನ ಚಿತ್ರೀಕರಣವಷ್ಟೇ ಬಾಕಿಯಿದ್ದು, ದೊಡ್ಡ ಸ್ಟಾರ್ ನಟಿಯನ್ನು ಕರೆಸುವ ಪ್ಲಾನಿದೆ. ಉಳಿದಂತೆ ಎಲ್ಲಾ ಕೆಲಸಗಳು ಬಹುತೇಕ ಮುಕ್ತಾಯ ಹಂತದಲ್ಲಿವೆ ಎಂದರು.

ನಾಯಕ ಉಪೇಂದ್ರ ಮಾತನಾಡುತ್ತ, ನನಗೂ ಸಹ ಟೀಸರ್ ಮೆಚ್ಚಿ ಐವತ್ತಕ್ಕೂ ಹೆಚ್ಚು ಕಾಲ್‌ಗಳು ಬಂದಿವೆ. ನಮ್ಮ ಚಿತ್ರದ ಟೀಸರ್ ಉತ್ತರ ಭಾರತದಲ್ಲೂ ಇಷ್ಟು ದೊಡ್ಡ ಮಟ್ಟದಲ್ಲಿ ಸ್ಪ್ರೆಡ್ ಆಗುತ್ತೆ ಅಂದುಕೊಂಡಿರಲಿಲ್ಲ ಎಂದು ಹೇಳಿದರು. ಕಾರ್ಯಕಾರಿ ನಿರ್ಮಾಪಕ ಶ್ರೀಕಾಂತ್ ಮಾತನಾಡಿ, ನಾನು ಚಂದ್ರುಗೆ ಒಬ್ಬ ಅಣ್ಣನಾಗಿ ಎಲ್ಲಾ ಕೆಲಸ ಮಾಡಿ ಕೊಡುತ್ತಿದ್ದೇನೆ. ರೌಡಿಸಂ ಚಿತ್ರಗಳಿಗೆ ಓಂಕಾರ ಹಾಕಿದ ಉಪೇಂದ್ರ, ಸೆಂಟಿಮೆಂಟ್ ಡೈರೆಕ್ಟರ್ ಚಂದ್ರು ಇಬ್ಬರೂ ಜೊತೆ ಸೇರಿದ್ದರಿಂದಲೇ ಈ ಒಂದು ಅದ್ಭುತ ಸಾಧನೆಗೆ ಕಾರಣವಾಯಿತು. ಚಂದ್ರು ಅವರ ಕನಸು ತುಂಬಾ ದೊಡ್ಡದು. ಇಷ್ಟೊಂದು ದೊಡ್ಡ ಮಟ್ಟದಲ್ಲಿ ಸಿನಿಮಾ ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದರು.





ರಾಣಾನ ಗಲ್ಲಿಬಾಯ್ ಹಾಡಿಗೆ ಜೋಗಿಪ್ರೇಮ್ ಚಾಲನೆ



ಮೊಗರು ಖ್ಯಾತಿಯ ನಂದಕಿಶೋರ್ ನಿರ್ದೇಶನದ, ಶ್ರೇಯಸ್ ಕೆ.ಮಂಜು ನಾಯಕನಾಗಿ ನಟಿಸಿರುವ, "ರಾಣ" ಚಿತ್ರದ ಗಲ್ಲಿಬಾಯ್ ಹಾಡನ್ನು ಜೋಗಿ ಪ್ರೇಮ್ ಬಿಡುಗಡೆ ಮಾಡಿದರು. ಚಂದನ್‌ಶೆಟ್ಟಿ ಬರೆದು ಸಂಗೀತ ನೀಡಿರುವ ಈ ಹಾಡಿಗೆ ಅನಿರುದ್‌ಶಾಸ್ತ್ರಿ ಹಾಗೂ ಅದಿತಿಸಾಗರ್ ದನಿಯಾಗಿದ್ದಾರೆ. ಹಾಡನ್ನು ಮೆಚ್ಚಿ ಮಾತನಾಡಿದ ಪ್ರೇಮ್, ಶ್ರೇಯಸ್ ಹಾಗೂ ರೀಷ್ಮಾ ನಾಣಯ್ಯ ಇಬ್ಬರೂ ತೆರೆ ಮೇಲೆ ಮುದ್ದಾಗಿ ಕಾಣುತ್ತಾರೆ. ಅಷ್ಟೇ ಚೆನ್ನಾಗಿ ನೃತ್ಯವನ್ನೂ ಮಾಡಿದ್ದಾರೆ. ಚಂದನ್ ಶೆಟ್ಟಿ ಅವರ ಸಂಗೀತವೂ ಸುಂದರವಾಗಿದೆ. ಚಿತ್ರವು ಭರ್ಜರಿ ಯಶಸ್ಸು ಕಾಣಲಿ ಎಂದು ಹಾರೈಸಿದರು.

ನಾಯಕ ಶ್ರೇಯಸ್ ಮಾತನಾಡಿ, ನಾನಿಲ್ಲಿ ನಿಲ್ಲಲು ನನಗೆ ಸ್ಫೂರ್ತಿ ನೀಡಿದವರು ವಿಷ್ಣುವರ್ಧನ್ ಹಾಗೂ ಅಪ್ಪ. ಚಂದನ್ ಶೆಟ್ಟಿ ಎಲ್ಲರ ಮನಸಿಗೆ ಹತ್ತಿರವಾಗುವಂತಹ ಸಾಹಿತ್ಯ ಬರೆದಿದ್ದಾರೆ. ಅಷ್ಟೇ ಚೆನ್ನಾಗಿ ಸಂಗೀತ ನೀಡಿದ್ದಾರೆ. ರೀಷ್ಮಾ ನಾಣಯ್ಯ ಒಳ್ಳೆಯ ನೃತ್ಯಗಾರ್ತಿ. ಈ ಚಿತ್ರಕ್ಕಾಗಿ ನಾನು ಸಾಕಷ್ಟು ತಯಾರಿ ಮಾಡಿಕೊಂಡು ಅಭಿನಯಿಸಿದ್ದೇನೆ. ನವೆಂಬರ್ 11ರಂದು ಚಿತ್ರ ತೆರೆಗೆ ಬರಲಿದೆ ಎಂದರು. ಚಿತ್ರ ಚೆನ್ನಾಗಿ ಬಂದಿದೆ ಈ ಹಾಡಂತೂ ಸಖತ್ತಾಗಿದೆ ಎಂದು ನಾಯಕಿ ರೀಷ್ಮಾ ನಾಣಯ್ಯ ಹೇಳಿದರು. ನಂದಕಿಶೋರ್ ಅವರ ನಿರ್ದೇಶನದಲ್ಲಿ ಚಿತ್ರ ಚೆನ್ನಾಗಿ ಬಂದಿದೆ. ಹಾಡುಗಳು ಸುಂದರವಾಗಿದೆ. ಇದೇ ಮೊದಲಬಾರಿಗೆ ನಾನು ಚಿತ್ರಕ್ಕೆ ಹಿನ್ನೆಲೆ ಸಂಗೀತ ಕೂಡ ನೀಡಿದ್ದೇನೆ ಎಂದು ಸಂಗೀತದ ಬಗ್ಗೆ ಚಂದನ್‌ಶೆಟ್ಟಿ ಮಾಹಿತಿ ನೀಡಿದರು. ಚಿತ್ರದಲ್ಲಿ ಅಭಿನಯಿಸಿರುವ ಕೋಟೆ ಪ್ರಭಾಕರ್, ಅಶೋಕ್, ರಘು ಹಾಗೂ ಗಾಯಕ ಅನಿರುದ್ಧ್ ಶಾಸ್ತ್ರಿ ಚಿತ್ರ ಕುರಿತಂತೆ ಮಾತನಾಡಿದರು.

ಕೆಜಿಎಫ್ ತಾತ ಈಗ ನ್ಯಾನೋ ನಾರಾಯಣಪ್ಪ




ಕೆಜಿಎಫ್ ಚಿತ್ರದಲ್ಲಿ ಅಭಿನಯಿಸಿದ ನಂತರ ಕೆಜಿಎಫ್ ತಾತಾ ಎಂದೇ ಕರೆಸಿಕೊಳ್ಳೋ ಕೃಷ್ಣೋಜಿರಾವ್ ಈಗ ಬ್ಯಾಕ್ ಟು ಬ್ಯಾಕ್ ಸಿನಿಮಾಗಳಲ್ಲಿ ಅಭಿನಯಿಸುತ್ತಿದ್ದಾರೆ. 'ಕೆಮಿಸ್ಟ್ರಿ ಆಫ್ ಕರಿಯಪ್ಪ' ಖ್ಯಾತಿಯ ಕುಮಾರ್ ಅವರ ನಿರ್ದೇಶನದ 'ನ್ಯಾನೋ ನಾರಾಯಣಪ್ಪ' ಸಿನಿಮಾದಲ್ಲಿ ಅವರು ಲೀಡ್‌ರೋಲ್ ಮಾಡುತ್ತಿದ್ದು ಆ ಚಿತ್ರದ ಟ್ರೈಲರ್ ಬಿಡುಗಡೆ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

'ಕೆಮಿಸ್ಟ್ರಿ ಆಫ್ ಕರಿಯಪ್ಪ', 'ಕ್ರಿಟಿಕಲ್ ಕೀರ್ತನೆಗಳು' ಚಿತ್ರಗಳ ನಂತರ ಕುಮಾರ್ ನಿರ್ದೇಶನದ ಮೂರನೇ ಚಿತ್ರ ಇದಾಗಿದ್ದು, ಫಸ್ಟ್‌ಲುಕ್ ಪೋಸ್ಟರ್, ಟೈಟಲ್ ಮೂಲಕ ಗಮನ ಸೆಳೆದ ಚಿತ್ರತಂಡ ಈಗ ಟ್ರೇಲರ್ ಬಿಡುಗಡೆ ಮಾಡುವ ಮೂಲಕ ನಿರೀಕ್ಷೆಯನ್ನು ಹೆಚ್ಚಿಸಿದೆ. ಕೆಜಿಎಫ್‌ನಲ್ಲಿ ಪುಟ್ಟ ಪಾತ್ರದ ಮೂಲಕ ಮಿಂಚಿದ್ದ ಕೃಷ್ಣೋಜಿರಾವ್ ಈ ಚಿತ್ರದಲ್ಲಿ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ಶಿವಶಂಕರ ಕ್ಯಾಮರಾ ನಿರ್ದೇಶನ, ಆಕಾಶ್ ಪರ್ವರ ಸಂಗೀತ ಸಂಯೋಜನೆ, ದೀಪು ಮತ್ತು ಸಿದ್ದಾರ್ಥ ನಾಯಕ ಅವರ ಸಂಕಲನವಿದೆ.

ಸಿನಿಪದಬಂಧ-026

ಆಜ಼ಾದ್ ಜಿ. ಆಚಾರ್ಯ 6361429085



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1. ಬಸವಣ್ಣವರ ಜೀವನ ಚರಿತ್ರೆ ಆಧಾರಿತ 1959ರ ಚಿತ್ರ (9)
4. ಬರೆದೆ ನೀನು ನಿನ್ನ ಹೆಸರ ನನ್ನ ಬಾಳ ಪುಟದಲೀ.. ಗೀತೆ, ಈ ಚಿತ್ರದ್ದು (2)
6. ಭೂಮಿಗೆ -- ಭಗವಂತ, 1981ರ ಚಿತ್ರ (2)
7. ಅಂಬರೀಶ್-ಅಂಬಿಕಾ ಅಭಿನಯದ 1984ರ ಚಿತ್ರ (4)
9. ಬಿ.ವಿ. ಕಾರಂತ್ ನಿರ್ದೇಶನದ ಈ 1975ರ ಚಿತ್ರ ರಾಷ್ಟ್ರಪ್ರಶಸ್ತಿ ಪಡೆದಿದೆ (5)
11. ವಿಷ್ಣುವರ್ಧನ್-ಶ್ರೀನಾಥ್ ಅಭಿನಯದ ಚಿತ್ರದಲ್ಲಿ ನಟಿ ಲಕ್ಷ್ಮೀ ದ್ವಿಪಾತ್ರ (5)
14. ವೈ.ಆರ್.ಸ್ವಾಮಿ ನಿರ್ದೇಶನದಲ್ಲಿ ಡಾ. ರಾಜ್ ಅಭಿನಯದ ಚಿತ್ರ ಹಿಂತಿರುಗಿದೆ (4)
15. ಪಿ. ಎನ್. ಸತ್ಯ ನಿರ್ದೇಶನದಲ್ಲಿ ಸುದೀಪ್ ಚಿತ್ರ (2)
16. ಅಭಿ ಚಿತ್ರದ ನಾಯಕಿ (2)
17. ಅನಂತನಾಗ್-ಊರ್ವಶಿ, ಶಶಿಕುಮಾರ್-ಸುಹಾಸಿನಿ, ಉಮಾಶ್ರೀ ಅಭಿನಯದ ಚಿತ್ರ (9)

ಮೇಲಿನಿಂದ ಕೆಳಕ್ಕೆ

1. - - - - - ರಣರಂಗ, ಧೈರ್ಯ ಇರಲಿ ನಿನ್ನ ಸಂಗ (5)
2. ಹೊಸಬೆಳಕು ಚಿತ್ರದ ನಾಯಕಿ (3)
3. ರಾಜ್-ವಿಷ್ಣು ಒಟ್ಟಾಗಿ ಅಭಿನಯಿಸಿದ ಚಿತ್ರ (5)
5. ರಾಜಕುಮಾರ್, ಅಶ್ವಥ್, ಲೀಲಾವತಿ ಮತ್ತು ಜಯಂತಿ ಅಭಿನಯದ ಚಿತ್ರ (4)
8. - - ನೀನು ಆಗಸದಿಂದ ಮರೆಯಾಗಿ ಹೋಗದೆ ನಿಲ್ಲು (2)
10. ಆಲಿಸು ಓ ಇನಿಯಾ ನನ್ನೆದೆಯಾ ಕರೆಯಾ ಗೀತೆಯ ಚಿತ್ರ ಕೆಳಗಿನಿಂದ ಮೇಲೇರಿದೆ (4)
11. - - - - - ಗಯ್ಯಾಳಿಗಳು, 2016ರ ಚಿತ್ರ (5)
12. - - ಮಾಧವ ರಾಘವ, 2007ರ ಚಿತ್ರ (2)
13. ಪುಟ್ಟಣ್ಣ ಕಣಗಾಲ್ ನಿರ್ದೇಶನದಲ್ಲಿ ಶ್ರೀನಾಥ್-ಆರತಿ ಅಭಿನಯದ ಚಿತ್ರ (5)
16. - - - ಸುಳ್ಳು, ರವಿಚಂದ್ರನ್ ಚಿತ್ರ, ಕೆಳಗಿನಿಂದ ಮೇಲೇರಿದೆ (3)

ದೀರ್ಘ ಬಾಳಿಕೆಯ, ಎಲ್ಲಾ ವಿಧದ
ವಿಶ್ವಾಸಾರ್ಹ ಬ್ಯಾಗ್‌ಗಳಿಗೆ ಸಂಪರ್ಕಿಸಿ



ನಂ.87, ಡಿ.ದೇವರಾಜ ಅರಸ್ ರಸ್ತೆ, ಮೈಸೂರು

ಸಿನಿ ಪದಬಂಧ 025ರ ಸರಿ ಉತ್ತರ

	ಚಂ	ಡಿ	ಚಾ	ಮುಂ	ಡಿ		ಗ	ಟ್ಟಿ	ಮೇ	ಳ
	ದ್ರಿ			ಗಾ			ರು			ಮೇ
	ಕಾ	ಡು		ರು	ದ್ರ	ತಾಂ	ಡ	ವ		ಟ್ಟಿ
		ಗಂ		ಮ						ಬಿ
ಅಂ	ದ	ದ		ಳೆ				ಬ		
		ಜ						ನ		
		ಅಂ				ಅ		ಶಂ	ಕ	ರ್
ಲಿ						ಜ್ಞಾ		ಕ		
ಗ		ಹೃ	ದ	ಯ	ವಂ	ತ		ರಿ	ಗೋ	
ಡು			ಸೋ			ವಾ			ಕು	
ಗಂ	ಗೆ	ಗೌ	ರಿ		ವ	ಸಂ	ತ	ಕಾ	ಲ	

ವಿಜೇತರು: ಶಿವಣ್ಣ
ವಿಜಯನಗರ,
2ನೇ ಹಂತ, ಮೈಸೂರು

ಐವರು ಸ್ಲಂ ಹುಡುಗರ ಕಥೆ ರಕ್ತದೋಕುಳಿ



ಐವರು ಸ್ಲಂ ಹುಡುಗರ ಕಥೆಯನ್ನು ಇಟ್ಟುಕೊಂಡು ಎನ್.ಎನ್.ಜಾಕಿ ಈಡಿಗರ ನಿರ್ದೇಶನ ಮಾಡಿರುವ ಚಿತ್ರ 'ರಕ್ತದೋಕುಳಿ'. ಎಂ.ನಾಗರಾಜು ಅವರ ನಿರ್ಮಾಣದಲ್ಲಿ ಮೂಡಿಬಂದಿರುವ ಈ ಚಿತ್ರದ ಟೀಸರ್ ಬಿಡುಗಡೆ ಕಾರ್ಯಕ್ರಮ ಕಲಾವಿದರ ಸಂಘದ ಆವರಣದಲ್ಲಿ ನೆರವೇರಿತು. ಇದೇ ಸಂದರ್ಭದಲ್ಲಿ ನಿರ್ಮಾಪಕರ ಹುಟ್ಟುಹಬ್ಬ ಆಚರಣೆಯೂ ನೆರವೇರಿತು. ಶಿವ 143 ನಾಯಕ ಧೀರನ್ ರಾಮ್ ಕುಮಾರ್ ಅವರು ಚಿತ್ರದ ಟೀಸರ್ ಬಿಡುಗಡೆಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಚಿತ್ರಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿರುವ ಜಾಕಿ ಈಡಿಗರ ಮಾತನಾಡುತ್ತ, ನನ್ನ ನಿರ್ದೇಶನದ ಮೊದಲ ಚಿತ್ರವಿದು. ಬೆಂಗಳೂರಿನ ಪ್ರತಿ ಸ್ಲಮ್‌ಗಳಲ್ಲಿ ನಡೆಯೋ ಕಥೆ. ನಾನು ಹಲವಾರು ಸ್ಲಂಗಳಲ್ಲಿ ತಿರುಗಾಡಿ ಅಲ್ಲಿನ ಹುಡುಗರು ಹೇಗಿರ್ತಾರೆ, ಅವರುಗಳು ತಪ್ಪು ದಾರಿ ಹಿಡಿಯಲು ಕಾರಣಗಳೇನು ಎಂಬುದನ್ನು ಅರಿತುಕೊಂಡು ಈ ಸ್ಕ್ರಿಪ್ಟ್ ಮಾಡಿಕೊಂಡಿದ್ದೇನೆ. 5 ಜನ ಸ್ಲಂ ಹುಡುಗರ ಲೈಫ್ ಜರ್ನಿ ಕಥೆ ಈ ಚಿತ್ರದಲ್ಲಿದೆ. ಚಿತ್ರಕ್ಕೆ ಬೆಂಗಳೂರು ಸುತ್ತಮುತ್ತ ಬಹುತೇಕ ಚಿತ್ರೀಕರಣ ನಡೆಸಿದ್ದೇವೆ. ಕೊಚ್ಚಿ ಹಾಕುವುದು, ಚುಚ್ಚುವುದು ಚಿತ್ರದಲ್ಲಿ ಹೆಚ್ಚಾಗಿರುವುದರಿಂದ ಚಿತ್ರಕ್ಕೆ ರಕ್ತದೋಕುಳಿ ಎಂಬ ಹೆಸರನ್ನಿಟ್ಟಿದ್ದೇವೆ. ನಾರ್ಮಲ್ ಆಗಿ ಲೈಫ್‌ಲೀಡ್ ಮಾಡುತ್ತಿದ್ದ ಈ ಹುಡುಗರು ಒಂದು ಹಂತದಲ್ಲಿ ಹೇಗೆ ದಾರಿ ತಪ್ಪುತ್ತಾರೆ ಎಂದು ಹೇಳಿದ್ದೇನೆ. ಇದೊಂದು ಎಂಟರ್‌ಟೈನ್‌ಮೆಂಟ್ ಸಿನಿಮಾ, ಯಾರೂ ಸಹ ಕ್ರೈಮ್ ಮಾಡಬೇಡಿ ಎಂದು ಚಿತ್ರದ ಮೂಲಕ ಸಂದೇಶ ಹೇಳಿದ್ದೇವೆ ಎಂದರು. ನಿರ್ಮಾಪಕ ನಾಗರಾಜು ಮಾತನಾಡುತ್ತ, ಜಾಕಿ ಬಂದು ಈ ಕಥೆ ಹೇಳಿದಾಗ ಕಥೆಯಲ್ಲಿನ ಸಾಕಷ್ಟು ಅಂಶಗಳು ಇಷ್ಟವಾಯ್ತು. ಹಾಗಾಗಿ ನಿರ್ಮಾಣಕ್ಕೆ ಮುಂದಾದೆ. ಚಿತ್ರದಲ್ಲಿ ನಾನೂ ಒಂದು ಪಾತ್ರ ಮಾಡಿದ್ದು, ಒಬ್ಬ ಆಟೋಡ್ರೈವರ್ ಆಗಿ ಕಾಣಿಸಿಕೊಂಡಿದ್ದೇನೆ ಎಂದು ಹೇಳಿದರು. ಈ ಚಿತ್ರಕ್ಕೆ ಅನಿಲ್ ಸಿಜೆ ಅವರ ಸಂಗೀತ ನಿರ್ದೇಶನವಿದೆ.

ಕಲಾವಿದರ ಬದುಕು-ಬವಣೆಯ ಸುತ್ತ ಮಹಾನ್ ಕಲಾವಿದ



'ಹಿಟ್ಲರ್‌ಕಲ್ಯಾಣ' ಧಾರಾವಾಹಿಯ ಮೂಲಕ ಕಿರುತೆರೆ ವೀಕ್ಷಕರ ಮನಗೆದ್ದಿರುವ ನಟ ದಿಲೀಪ್‌ರಾಜ್ ಈಗ ಮಹಾನ್ ಕಲಾವಿದ ಎನ್ನುವ ಚಿತ್ರದಲ್ಲಿ ನಾಯಕನಾಗಿ ನಟಿಸುತ್ತಿದ್ದಾರೆ. ಪತ್ರಕರ್ತ ದಿ.ಸುರೇಶ್ಚಂದ್ರ ಅವರ ಪುತ್ರ ಅಭಯ್‌ಚಂದ್ರ ಅವರ ನಿರ್ದೇಶನದಲ್ಲಿ ಹೊರಬರುತ್ತಿರುವ ಎರಡನೇ ಚಿತ್ರವಿದು. ಇತ್ತೀಚೆಗೆ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ಬಗ್ಗೆ ಕೆಲ ಮಾಹಿತಿಗಳನ್ನು ಚಿತ್ರತಂಡ ಹಂಚಿಕೊಂಡಿತು.

ಮೊದಲು ಮಾತು ಆರಂಭಿಸಿದ ನಿರ್ದೇಶಕ ಅಭಯಚಂದ್ರ, ನಾನು ಈ ಕಥೆಯನ್ನು ರೆಡಿ ಮಾಡಿಕೊಂಡ ಮೇಲೆ ಕಲಾವಿದ ಎನ್ನುವ ಶೀರ್ಷಿಕೆಯಿಟ್ಟೆ. ಈ ವಿಷಯವನ್ನು ರವಿಚಂದ್ರನ್ ಅವರಿಗೆ ತಿಳಿಸಿದಾಗ ಅವರು ಧಾರಾಳವಾಗಿ ಈ ಶೀರ್ಷಿಕೆ ಬಳಸಿಕೋ. ಆದರೆ ಬರೀ ಕಲಾವಿದ ಅಂತ ಬೇಡ ಏನಾದೂ ಸೇರಿಸು ಅಂದರು. ನಂತರ ಮಹಾನ್ ಕಲಾವಿದ ಎನ್ನುವ ಟೈಟಲ್ ಫೈನಲ್ ಮಾಡಿದೆ. ಕಲಾವಿದನೊಬ್ಬನ ಜೀವನದ ಬದುಕು, ಬವಣೆಗಳನ್ನು ತೋರಿಸುವಂಥ ಕಥೆ ಇರುವ ಚಿತ್ರವಿದು. ನಾನು ಚಿತ್ರ ಕಥೆಯಲ್ಲಿ ನಾಯಕನ ಪಾತ್ರವನ್ನು ಬರೆಯುವಾಗಲೇ ದಿಲೀಪ್‌ರಾಜ್ ಅವರೇ ಇದಕ್ಕೆ ಸೂಕ್ತ ಎಂದುಕೊಂಡಿದ್ದೆ. ಅವರೇ ಈ ಚಿತ್ರದ ನಾಯಕರಾದರು. ಜಾಹ್ನವಿ ರಾಯಲ ಹಾಗೂ ಪಲ್ಲವಿರಾಜು ಚಿತ್ರದಲ್ಲಿ ನಾಯಕಿಯರಾಗಿ ಅಭಿನಯಿಸಿದ್ದಾರೆ. ಲಾಕ್‌ಡೌನ್ ಸಮಯದಲ್ಲಿ ಆನ್‌ಲೈನ್‌ನಲ್ಲಿ ಸಿಕ್ಕ ಗೆಳೆಯ ಭರತ್ ಬಿ.ಗೌಡ ಅವರು ಕಥೆಯನ್ನು ಇಷ್ಟಪಟ್ಟು ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಕಿರಣ್‌ಗಜ ಚಿತ್ರದ ಛಾಯಾಗ್ರಾಹಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಈಗಾಗಲೇ ಎರಡು ಹಂತದ ಚಿತ್ರೀಕರಣವನ್ನು ಮುಗಿಸಿಕೊಂಡು ಮುಂದಿನ ಹಂತಕ್ಕೆ ಸಿದ್ಧರಾಗುತ್ತಿದ್ದೇವೆ ಎಂದು ತಿಳಿಸಿದರು.

ನಾಯಕ ದಿಲೀಪ್‌ರಾಜ್ ಮಾತನಾಡಿ, ಬಹಳ ದಿನಗಳ ನಂತರ ಚಿತ್ರವೊಂದರಲ್ಲಿ ನಟಿಸುತ್ತಿದ್ದೇನೆ. ಅಭಯ್‌ಚಂದ್ರ ಉತ್ತಮ ಕಥೆಯನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಈಗಾಗಲೇ ಎರಡು ಹಂತಗಳ ಚಿತ್ರೀಕರಣ ಮುಗಿದಿದೆ. ಕಲಾವಿದ ಮಾಡುವ ನಟನೆ ಮೊದಲು ನಿರ್ದೇಶಕರಿಗೆ ಮೆಚ್ಚುಗೆಯಾಗಬೇಕು. ನನ್ನ ನಟನೆಯ ಬಗ್ಗೆ ಮೊದಲು ಅಭಯ್ ಹೇಳಬೇಕು. ನಾನು ಸಹ ಈ ಚಿತ್ರವನ್ನು ನೋಡಲು ಕಾತುರದಿಂದ ಕಾಯುತ್ತಿರುವುದಾಗಿ ಹೇಳಿದರು.

ಈ ಚಿತ್ರದಲ್ಲಿ ನಾಯಕ ದಿಲೀಪ್‌ರಾಜ್ ಅವರ ಪತ್ನಿಯ ಪಾತ್ರ ಮಾಡುತ್ತಿರುವುದಾಗಿ ನಟಿ ಜಾಹ್ನವಿ ರಾಯಲ ಅವರು ತಿಳಿಸಿದರು. ಪ್ರಮುಖ ಪಾತ್ರ ನಿರ್ವಹಿಸಿರುವ ನಟಿ ಪಲ್ಲವಿ ರಾಜು ಮಾತನಾಡುತ್ತ, ಚಿತ್ರದಲ್ಲಿ ನನ್ನ ಪಾತ್ರ ಕೂಡ ತುಂಬಾ ಚೆನ್ನಾಗಿದೆ ಎಂದು ಹೇಳಿದರು. ಚಿತ್ರದ ನಿರ್ಮಾಪಕ ಭರತ್ ಬಿ. ಗೌಡ ಮಾತನಾಡುತ್ತ ನಾನು ಮೂಲತಃ ಹಾಸನದವನು. ಅಪ್ಪ-ಅಮ್ಮನ ಸಹಕಾರದಿಂದ ಮೊದಲ ಬಾರಿಗೆ ನಿರ್ಮಾಪಕನಾಗಿದ್ದೇನೆ ಎಂದು ಹೇಳಿದರು.

ಸಕ್ಕರೆ ಕಾರ್ಖಾನೆಯೇ ಸರ್ಕಾರ ನಿಗದಿಪಡಿಸಿರುವ ಕಬ್ಬು ಸರಬರಾಜು ವೆಚ್ಚ ಭರಿಸಲು ಆಗ್ರಹಿಸಿ

ಲಾರಿ, ಟ್ರಾಕ್ಟರ್ ಮಾಲೀಕರ ಸಂಘದಿಂದ ಪ್ರತಿಭಟನೆ



ಪಾಂಡವಪುರ, ಸೆ.22– ಸಕ್ಕರೆ ಕಾರ್ಖಾನೆಗಳಿಗೆ ಲಾರಿ ಮತ್ತು ಟ್ರಾಕ್ಟರ್ ಮೂಲಕ ಕಬ್ಬು ಸಾಗಣೆ ಮಾಡಲು ಸರ್ಕಾರ ನಿಗದಿಪಡಿಸಿರುವ ದರವನ್ನು ಕಾರ್ಖಾನೆಯೇ ನೀಡುವಂತೆ ಒತ್ತಾಯಿಸಿ ಲಾರಿ ಮಾಲೀಕರ ಸಂಘದಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು.

ಪಿಎಸ್‌ಎಸ್‌ಕೆ ಕಾರ್ಖಾನೆ ಮುಂಭಾಗ ಜಮಾಯಿಸಿದ ದಕ್ಷಿಣ ಕರ್ನಾಟಕ ಕಬ್ಬು ಸಾಗಾಣಿಕೆ ಲಾರಿ ಮಾಲೀಕರ ಸಂಘಗಳ ಒಕ್ಕೂಟ, ಶ್ರೀಲಕ್ಷ್ಮಿ ನಾರಾಯಣಸ್ವಾಮಿ ಲಾರಿ, ಟ್ರಾಕ್ಟರ್ ಮಾಲೀಕರು ಹಾಗೂ ಚಾಲಕರ ಸಂಘದ ಕಾರ್ಯಕರ್ತರು ಕಾರ್ಖಾನೆ ಆಡಳಿತ ಮಂಡಳಿ ಧೋರಣೆ ವಿರುದ್ಧ ಆಕ್ರೋಶ ಹೊರ ಹಾಕಿದರು.

ಸಕ್ಕರೆ ಇಲಾಖೆ ಆಯುಕ್ತರು ಮತ್ತು ಜಿಲ್ಲಾಧಿಕಾರಿಗಳು ಲಾರಿ, ಟ್ರಾಕ್ಟರ್‌ಗಳ ಮೂಲಕ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸಾಗಾಣಿಕೆ ಮಾಡಲು ನಿಗದಿಪಡಿಸಿರುವ ದರವನ್ನು ಕಾರ್ಖಾನೆ ಆಡಳಿತ ಮಂಡಳಿ ನೀಡುತ್ತಿಲ್ಲ. ಅಧಿಕಾರಿಗಳು ನಿಗದಿ ಪಡಿಸಿರುವ ದರಕ್ಕಿಂತ ಕಡಿಮೆ ದರ ನೀಡುವ ಮೂಲಕ ಆಯುಕ್ತರು ಹಾಗೂ ಜಿಲ್ಲಾಧಿಕಾರಿ ಆದೇಶ ಧಿಕ್ಕರಿಸುತ್ತಿದ್ದಾರೆ. ಇದರಿಂದ ಲಾರಿ ಹಾಗೂ ಟ್ರಾಕ್ಟರ್ ಮಾಲೀಕರಿಗೆ ಸಾಕಷ್ಟು ತೊಂದರೆಯಾಗುತ್ತಿದೆ ಹಾಗಾಗಿ ಎಲ್ಲಾ ಸಕ್ಕರೆ ಕಾರ್ಖಾನೆಯ ಮಾಲೀಕರು, ಆಡಳಿತ ಮಂಡಳಿಯವರು ಸರ್ಕಾರದ ಆದೇಶ ಪಾಲನೆ ಮಾಡಬೇಕು ಎಂದು ಆಗ್ರಹಿಸಿದರು.

ನಮ್ಮ ಹೋರಾಟ ಕೇವಲ ಸರ್ಕಾರ ನಿಗದಿಪಡಿಸಿರುವ ಕಬ್ಬು ಸಾಗಣೆ ದರ ನೀಡುವಂತೆಯೇ ಹೊರತು ಕಾರ್ಖಾನೆಗಳ ವಿರುದ್ಧವಾಗಲಿ ಅಲ್ಲ. ಆಡಳಿತ ಮಂಡಳಿಯವರು ಲಾರಿ ಮಾಲೀಕರ ಸಮಸ್ಯೆಗಳನ್ನು ಆಲಿಸುವ ಕೆಲಸ ಮಾಡಬೇಕು. ರಾಜ್ಯ ಸರ್ಕಾರ ಕಾರ್ಖಾನೆಗೆ ಕಬ್ಬು ಸಾಗಾಣಿಕೆ ಮಾಡುವ ಲಾರಿ, ಟ್ರಾಕ್ಟರ್ ಬಾಡಿಗೆಯನ್ನು 1ರಿಂದ 5 ಕಿ.ಮೀವರೆಗೆ ಪ್ರತಿಟನ್‌ಗೆ 208 ರೂ. 1ರಿಂದ 30 ಕಿ.ಮೀವರೆಗೆ 326 ರೂ. ನೀಡುವಂತೆ ಆದೇಶ ನೀಡಿದೆ. ಆದರೆ, ಕಾರ್ಖಾನೆಯಲ್ಲಿ 1ರಿಂದ 10 ಕಿಮೀ ವರೆಗೆ 162 ರೂ. ಹಾಗೂ 1ರಿಂದ 30 ಕಿ.ಮೀವರೆಗೆ 289 ರೂ. ನೀಡುತ್ತಿದೆ. ಇದರಿಂದ ಲಾರಿ ಮಾಲೀಕರಿಗೆ ಸಮಸ್ಯೆಯಾಗುತ್ತಿದೆ. ಹಾಗಾಗಿ ಸರ್ಕಾರದ ಆದೇಶ ಪಾಲನೆ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನಾ ಸ್ಥಳಕ್ಕೆ ಉಪತಹಶೀಲ್ದಾರ್ ವರುಣ್ ಆಗಮಿಸಿ ಪ್ರತಿಭಟನಾಕಾರರೊಂದಿಗೆ ಚರ್ಚಿಸಿ ಬಳಿಕ ಜಿಲ್ಲಾಧಿಕಾರಿಗಳೊಂದಿಗೆ ಚರ್ಚಿಸಲು ಅವಕಾಶ ಮಾಡಿಕೊಟ್ಟರು. ಮುಂದಿನ ಬುಧವಾರದ ಒಳಗಾಗಿ ಲಾರಿ ಮಾಲೀಕರ ಸಮಸ್ಯೆ ಬಗೆಹರಿಸುವಂತೆ ಮನವಿ ಮಾಡಿದರು. ಪ್ರತಿಭಟನೆಯಲ್ಲಿ ಶ್ರೀಲಕ್ಷ್ಮಿ ನಾರಾಯಣಸ್ವಾಮಿ ಲಾರಿ ಟ್ರಾಕ್ಟರ್ ಮಾಲೀಕರು ಹಾಗೂ ಚಾಲಕರ ಸಂಘದ ಅಧ್ಯಕ್ಷ ಕೆ.ಎಸ್.ವೇಣುಗೋಪಾಲ್, ಉಪಾಧ್ಯಕ್ಷ ತಮ್ಮಣ್ಣ, ಜಗ್ಗಿ, ಸದಸ್ಯರಾದ ಚಿಕ್ಕರಾಮೇಗೌಡ, ಗುರುಲಿಂಗಪ್ಪ, ನವೀನ್ ಕುಮಾರ್, ಮಹೇಶ್, ರಫಿಕ್, ದಿವಾಕರ, ಗಿರೀಶ ಸೇರಿದಂತೆ ಇತರರಿದ್ದರು.

40% ಕಮಿಷನ್ ಆರೋಪಕ್ಕೆ ನನ್ನ ಬಳಿ ದಾಖಲೆ ಇದೆ

ಮದ್ದೂರು ಮೂಲದ ಗುತ್ತಿಗೆದಾರ ಕುಮಾರ್



ಮಂಡ್ಯ, ಸೆ.22– ಸರ್ಕಾರದ ವಿರುದ್ಧ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಮಾಡಿರುವ ಶೇ.40 ಕಮಿಷನ್ ಆರೋಪ ಸತ್ಯ. ಅದಕ್ಕೆ ಪೂರಕ ದಾಖಲೆ ಒದಗಿಸುತ್ತೇನೆ. ಮುಖ್ಯಮಂತ್ರಿಗಳು ಭ್ರಷ್ಟಾಚಾರ ತಡೆ ಕಾಯ್ದೆಯಡಿ ತನಿಖೆ ನಡೆಸಬೇಕು ಎಂದು ಮದ್ದೂರಿನ ಗುತ್ತಿಗೆದಾರ ಎಂ.ಕೆ.ಕುಮಾರ್ ಆಗ್ರಹಿಸಿದರು.

ರಾಜ್ಯ ಹೆದ್ದಾರಿ ಯೋಜನೆ ಹಂತ–4ರಲ್ಲಿ 4500 ಕೋಟಿ ರೂ. ಮೊತ್ತದ 160 ಪ್ಯಾಕೇಜ್ ಕಾಮಗಾರಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ ಟೆಂಡರ್ ಸಲ್ಲಿಸುವ ಮೊದಲೇ ನಿರ್ಧರಿಸಿದ ಗುತ್ತಿಗೆದಾರರಿಗೆ ಹೆಚ್ಚು ದರಗಳಿಗೆ ಟೆಂಡರ್ ವಹಿಸಿದ್ದಾರೆ ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ದಾಖಲೆ ಬಿಡುಗಡೆ ಮಾಡಿ, ಗಂಭೀರ ಆರೋಪ ಮಾಡಿದರು.

ಅಕ್ರಮಗಳ ಬಗ್ಗೆ 2019ರ ಅಕ್ಟೋಬರ್‌ನಲ್ಲಿ ಅಂದಿನ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಲೋಕೋಪಯೋಗಿ ಇಲಾಖೆ ಕಾರ್ಯದರ್ಶಿ, ರಾಜ್ಯ ಹೆದ್ದಾರಿ ಯೋಜನೆ ಹಂತ–4ರ ಮುಖ್ಯ ಯೋಜನಾಧಿಕಾರಿ, ಆರ್ಥಿಕ ಇಲಾಖೆ, ಎಸಿಬಿ ಹಾಗೂ ಲೋಕಾಯುಕ್ತರಿಗೆ ದೂರು ಸಲ್ಲಿಸಿದ್ದೇನೆ. ಈ ಯೋಜನೆಯಲ್ಲಿ ಸರ್ಕಾರಕ್ಕೆ 1200 ಕೋಟಿ ರೂ.ವರೆಗೆ ನಷ್ಟವಾಗಿದೆ ಎಂದರು.

ಟೆಂಡರ್ ವಿಚಾರವಾಗಿ ಸಿಟಿ ಸಿವಿಲ್ ಕೋರ್ಟ್–23ರ ನ್ಯಾಯಾಲಯದಲ್ಲಿ ತನಿಖೆ ಮಾಡಲು ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ದೂರು ದಾಖಲಿಸಿದ್ದೆ. ಆದರೆ ಟೆಂಡರ್‌ಗಳಲ್ಲಿ ಭಾಗವಹಿಸದಿರುವ ಕಾರಣ ಉಲ್ಲೇಖಿಸಿ ದೂರು ವಜಾ ಮಾಡಲಾಯಿತು. ನಂತರ ನಾನು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದಾಗ ನ್ಯಾಯಾಲಯ ಟೆಂಡರ್‌ಗಳಲ್ಲಿ ಗುತ್ತಿಗೆದಾರರು ಭಾಗವಹಿಸದೆ ಇದ್ದರೂ ಅವರು ಸಲ್ಲಿಸಿರುವ ಟೆಂಡರ್‌ಗಳಲ್ಲಿ ನಡೆಸುವ ಅಕ್ರಮಗಳ ಬಗ್ಗೆ ಸಾಕಷ್ಟು ದಾಖಲೆ ಸಹಿತ ದೂರನ್ನು ಕೊಟ್ಟಿರುವುದರಿಂದ ಕೆಳ ನ್ಯಾಯಾಲಯ ದೂರನ್ನು ಏಕಾಏಕಿ ವಜಾಗೊಳಿಸಿರುವುದು ಗಂಭೀರವಾದುದು. ಇದು ಸಾರ್ವಜನಿಕ ಹಿತಾಸಕ್ತಿಗೆ ಹಾನಿ ಉಂಟು ಮಾಡುತ್ತದೆ. ಆದ್ದರಿಂದ ಕೆಳ ನ್ಯಾಯಾಲಯದ ಆದೇಶ ರದ್ದುಗೊಳಿಸಿ ತನಿಖೆಗೆ ಆದೇಶ ಮಾಡಲು ದಾಖಲೆಗಳನ್ನು ಮತ್ತೊಮ್ಮೆ ಪರಿಶೀಲಿಸುವಂತೆ ಆದೇಶ ನೀಡಿದೆ ಎಂದರು.

ನಂತರ ಸಿಟಿ ಸಿವಿಲ್ ನ್ಯಾಯಾಲಯ ನನ್ನಿಂದ ಪ್ರಾಮಾಣೀಕೃತ ಹೇಳಿಕೆ ದಾಖಲಿಸಿಕೊಂಡು ಎಸಿಬಿ ಡಿವೈಎಸ್ಪಿಯಂತಹ ಅಧಿಕಾರಿಯಿಂದ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಕಳೆದ ಏ.13ರಂದು ಆದೇಶ ಮಾಡಿದೆ. ಆದರೆ ಇದುವರೆಗೂ ಎಸಿಬಿ ಅಧಿಕಾರಿಗಳು ಯಾವುದೇ ಕ್ರಮ ಕೈಗೊಂಡಿಲ್ಲ. ತನಿಖೆ ಮಾಡಲು ಎಸಿಬಿಗೆ ಸರ್ಕಾರದ ಪೂರ್ವಾನುಮತಿ ಬೇಕಿದೆ ಅದಕ್ಕಾಗಿ ಪತ್ರ ಬರೆದು ಸುಮ್ಮನಾಗಿದ್ದೆ ಅಲ್ಲದೆ, ಸರ್ಕಾರದಿಂದ ಪೂರ್ವಾನುಮತಿ ದೊರೆಯಲಿಲ್ಲ ಎಂದು ಹೇಳಿ 2 ಬಾರಿ ದಿನಾಂಕ ಪಡೆದಿತ್ತು. ಈಗ ಇದೇ ತಿಂಗಳ 29ರಂದು ಮತ್ತೊಂದು ದಿನಾಂಕ ಪಡೆದುಕೊಂಡಿದೆ. ಪ್ರಕರಣದ ತನಿಖೆ ಮಾಡಲು ಪೂರ್ವಾನುಮತಿ ಕೊಡಿಸಲು ಸಿಎಂ ಬಸವರಾಜ ಬೊಮ್ಮಾಯಿ, ಆರ್ಥಿಕ ಇಲಾಖೆ ಕಾರ್ಯದರ್ಶಿ ಪಿ.ಸಿ. ಜಾಫರ್ ಅವರಿಗೆ ಜೂ.17ರಂದು ಪತ್ರ ಬರೆಯಲಾಗಿದೆ. ಆದರೆ ಇದುವರೆಗೂ ಪೂರ್ವಾನುಮತಿ ನೀಡಿಲ್ಲ. ಕೂಡಲೇ ಬಸವರಾಜ ಬೊಮ್ಮಾಯಿ ಅವರು ಪೂರ್ವಾನುಮತಿ ನೀಡಿ ನ್ಯಾಯಾಲಯ ನೀಡಿರುವ ಆದೇಶದಂತೆ ಭ್ರಷ್ಟಾಚಾರ ತಡೆ ಕಾಯ್ದೆ ಅಡಿ ತನಿಖೆ ನಡೆಸಬೇಕು. ಇಲ್ಲದಿದ್ದರೆ ನ್ಯಾಯಾಲಯ ಆದೇಶ ಉಲ್ಲಂಘನೆ ಮಾಡಿದ್ದಾರೆ ಎಂದು ನ್ಯಾಯಾಲಯದ ಮೊರೆ ಹೋಗುವುದಾಗಿ ಎಚ್ಚರಿಸಿದರು.

ಆನೆಗೊಳ ಗ್ರಾಪಂಗೆ ರಮೇಶ್ ಉಪಾಧ್ಯಕ್ಷ



ಕಿಕ್ಕೇರಿ, ಸೆ.22– ಇಲ್ಲಿನ ಆನೆಗೊಳ ಗ್ರಾಪಂ ಉಪಾಧ್ಯಕ್ಷರಾಗಿ ಬಡಬೆಮ್ಮಿಗೆ ರಮೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. 17 ಸದಸ್ಯ ಬಲದ ಗ್ರಾಪಂನಲ್ಲಿ ಈ ಹಿಂದಿನ ಉಪಾಧ್ಯಕ್ಷೆ ನಾಗಮ್ಮ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ರಮೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾಧಿಕಾರಿ ಮಂಜುನಾಥ್ ಅವಿರೋಧ ಆಯ್ಕೆಯನ್ನು ಘೋಷಿಸಿದರು.

ಈ ವೇಳೆ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳಿ ನಿರ್ದೇಶಕ ಸಿ.ಎನ್.ಪುಟ್ಟಸ್ವಾಮಿಗೌಡ, ಮನ್‌ಮುಲ್ ನಿರ್ದೇಶಕ ಹೆಚ್.ಟಿ.ಮಂಜು, ಟಿಎಪಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಜೆಡಿಎಸ್ ಮುಖಂಡ ಬಿ.ಎಂ.ಕಿರಣ್, ಎಪಿಎಂಸಿ ಮಾಜಿ ಅಧ್ಯಕ್ಷ ಮಲ್ಲೇಶ್, ಗ್ರಾಪಂ ಅಧ್ಯಕ್ಷೆ ಅನುಸೂಯ, ಸದಸ್ಯರಾದ ಯೋಗೇಶ್, ನಂಜೇಶ್, ರಕ್ಷಿತ್, ಗಂಗಾಧರ್, ಜಗನ್ನಾಥ್, ಮಂಜುಶೆಟ್ಟಿ, ಪ್ರಕಾಶ್, ಧನಲಕ್ಷ್ಮೀ, ರಂಜಿತಾ, ಮಹಾಲಕ್ಷ್ಮಿ, ನಾಗಮ್ಮ, ಭಾಗ್ಯಮ್ಮ, ಲಕ್ಷ್ಮಿ, ಪಿಡಿಓ ಕುಮಾರ್ ಇದ್ದರು.

ಮಂಟೇಸ್ವಾಮಿ ಬಸವಪ್ಪನ ಅದ್ದೂರಿ ಮೆರವಣಿಗೆ



ಭಾರತೀನಗರ, ಸೆ22– ವಿಶ್ವಕರ್ಮ ಜಯಂತೋತ್ಸವದ ಅಂಗವಾಗಿ ಭಾರತೀನಗರದಲ್ಲಿ ಮಠದ ಹೊನ್ನಾಯಕನಹಳ್ಳಿ ಶ್ರೀಮಂಟೇಸ್ವಾಮಿ ಬಸವಪ್ಪನನ್ನು ಅದ್ಧೂರಿಯಾಗಿ ಮೆರವಣಿಗೆ ಮಾಡಲಾಯಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು, ಅಖಿಲ ಕರ್ನಾಟಕ ವಿಶ್ವಕರ್ಮ ಮಹಾಸಭಾ ಕೆ.ಎಂ.ದೊಡ್ಡಿ ಘಟಕದಿಂದ ಏರ್ಪಡಿಸಿದ್ದ 7ನೇ ವರ್ಷದ ವಿಶ್ವಕರ್ಮ ಜಯಂತೋತ್ಸವದ ಅಂಗವಾಗಿ ಮಂಟೇಸ್ವಾಮಿ ಬಸವಪ್ಪನನ್ನು ಭಾರತೀನಗರದ ಮದ್ದೂರು–ಮಳವಳ್ಳಿ ಹೆದ್ದಾರಿಯಲ್ಲಿ ತಮಟೆ, ನಗಾರಿ, ಪೂಜಾ ಕುಣಿತಗಳೊಂದಿಗೆ ಮೆರವಣಿಗೆ ಮಾಡಿ ಭಾರೀ ಗಾತ್ರದ ಹೂವಿನ ಹಾರವನ್ನು ಕ್ರೇನ್ ಮೂಲಕ ಹಾಕಲಾಯಿತು.

ಇದಕ್ಕೂ ಮೊದಲು ಚಾಂಷುಗರ್ ಕಾರ್ಖಾನೆ ಆವರಣದಲ್ಲಿರುವ ಶ್ರೀಚಾಮುಂಡೇಶ್ವರಿ ದೇವಾಲಯದಲ್ಲಿ ಹೂ ಹೊಂಬಾಳೆ ಪೂಜೆ ಸಲ್ಲಿಸಿ ನಂತರ ಹೊನ್ನಾಯಕನಹಳ್ಳಿ, ಮೆಣಸಗೆರೆ, ಅಜ್ಜಹಳ್ಳಿ ಕಂಡಾಯದೊಂದಿಗೆ ಬಸವಪ್ಪನನ್ನು ಮೆರವಣಿಗೆ ಮಾಡಿ ಹಲಗೂರು ವೃತ್ತಕ್ಕೆ ಕರೆತಂದು ಕೆಲವು ಭಕ್ತರು ಜೆಸಿಬಿ ಮೂಲಕ ಹೂವನ್ನು ಬಸವಪ್ಪನಿಗೆ ಹಾಕಿದರೆ ಇನ್ನೂ ಕೆಲವು ಭಕ್ತರು ಕ್ರೇನ್ ಮೂಲಕ ಭಾರಿ ಗಾತ್ರದ ಹೂವಿನಹಾರ ಹಾಕಿ ಸಂಭ್ರಮಿಸಿದ್ದು ಎಲ್ಲರ ಗಮನ ಸೆಳೆಯಿತು.

ಕಾರ್ಯಕ್ರಮದ ನಂತರ ಊಟದ ವ್ಯವಸ್ಥೆ ಏರ್ಪಡಿಸಲಾಗಿತ್ತು. ಕೆ.ಎಂ.ದೊಡ್ಡಿ ವಿಶ್ವಕರ್ಮ ಬಳಗದವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

ಶ್ರೀರಂಗಪಟ್ಟಣ ದಸರಾ ಸಿದ್ಧತೆ ವೀಕ್ಷಿಸಿದ ಡಿಸಿ

ಶ್ರೀರಂಗಪಟ್ಟಣ, ಸೆ.22– ಶ್ರೀರಂಗಪಟ್ಟಣ ದಸರಾ ಮಹೋತ್ಸವದ ಹಿನ್ನೆಲೆಯಲ್ಲಿ ಪಟ್ಟಣದ ಕಿರಂಗೂರು ಬನ್ನಿಮಂಟಪ ಬಳಿ ಪಿಡಬ್ಲ್ಯೂಡಿ ಇಲಾಖೆ ವತಿಯಿಂದ ನಡೆಯುತ್ತಿದ್ದ ಸಿದ್ಧತೆಯನ್ನು ಜಿಲ್ಲಾಧಿಕಾರಿ ಎಸ್.ಅಶ್ವಥಿ ವೀಕ್ಷಿಸಿದರು.



ನಂತರ ಮಾತನಾಡಿದ ಅವರು, ಈ ಬಾರಿ ದಸರಾ ಮಹೋತ್ಸವ ಸೆ.28ರಿಂದ ಅ.2ರವರೆಗೆ ಅತ್ಯಂತ ವಿಜೃಂಭಣೆಯಿಂದ ನಡೆಯಲಿದೆ. ದಸರಾವನ್ನು ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಲಿದ್ದು, ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ಮಾತನಾಡಿ, ಈ ಬಾರಿ ದಸರಾಕ್ಕೆ ಹೆಚ್ಚಿನ ಜನರು ಆಗಮಿಸಲಿದ್ದು, ಸೂಕ್ತ ಬಂದೋಬಸ್ತ್ ಕೈಗೊಳ್ಳಲಾಗುವುದು. ಉದ್ಘಾಟನೆ ವೇಳೆ ವೀಕ್ಷಕರ ಗ್ಯಾಲರಿ ಜೊತೆಗೆ, ವಿಐಪಿ ಗ್ಯಾಲರಿಯನ್ನು ನಿರ್ಮಿಸಲಾಗುತ್ತಿರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ಭದ್ರತೆ ಒದಗಿಸಲಾಗುತ್ತದೆ ಎಂದರು. ಈ ವೇಳೆ ಎಸಿ ಬಿ.ಸಿ.ಶಿವಾನಂದಮೂರ್ತಿ, ತಹಸೀಲ್ದಾರ್ ಶ್ವೇತಾ ಎನ್.ರವೀಂದ್ರ, ಡಿವೈಎಸ್‌ಪಿ ಸಂದೇಶ್ ಕುಮಾರ್, ತಾಪಂ ಇಓ ವೇಣು, ಪಿಡಬ್ಲ್ಯೂಡಿ ಎಇಇ ಮಹೇಶ್, ಪುರಸಭೆ ಮುಖ್ಯಾಧಿಕಾರಿ ರಾಣಿ, ಆರ್‌ಐಗಳಾದ ಮಂಜುನಾಥ್, ಭಾಸ್ಕರ್, ಪಿಡಿಓ ಪ್ರಶಾಂತ್ ಬಾಬು ಇದ್ದರು.

ಸಿಎಸ್‌ಪಿ ಹುಟ್ಟುಹಬ್ಬ: ಉಚಿತ ಬೃಹತ್ ರಕ್ತದಾನ ಶಿಬಿರ



ಪಾಂಡವಪುರ, ಸೆ.22– ಶಾಸಕ ಸಿ.ಎಸ್.ಪುಟ್ಟರಾಜು ಹುಟ್ಟುಹಬ್ಬದ ಅಂಗವಾಗಿ ಸೆ.25ರಂದು ಬೆಳಗ್ಗೆ 9 ಗಂಟೆಗೆ ಪಟ್ಟಣದ ಕಸಾಪ ಭವನದಲ್ಲಿ ಉಚಿತ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದು ಡಿಸಿಸಿ ಬ್ಯಾಂಕ್ ನಿರ್ದೇಶಕ ಗುರುಸ್ವಾಮಿ ತಿಳಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಸಿ.ಎಸ್.ಪುಟ್ಟರಾಜು ಕೇಕ್ ಕತ್ತರಿಸಿ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿಲ್ಲ. ಹಾಗಾಗಿ ಅವರ ಹುಟ್ಟುಹಬ್ಬವನ್ನು ವಿಶೇಷವಾಗಿ ಆಚರಿಸುವ ಉದ್ದೇಶದಿಂದ ಬೃಹತ್ ರಕ್ತದಾನ ಶಿಬಿರ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 3 ಗಂಟೆವರೆಗೂ ರಕ್ತದಾನ ಶಿಬಿರ ನಡೆಯಲಿದೆ. ಜೆಡಿಎಸ್ ಮುಖಂಡರು, ಯುವಕರು, ಶಾಸಕ ಸಿ.ಎಸ್.ಪುಟ್ಟರಾಜು ಅಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶಿಬಿರ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಡಿಸಿಸಿ ಬ್ಯಾಂಕ್ ನಿರ್ದೇಶಕ ಚಲುವರಾಜು, ಮಧುಸೂದನ್, ಅಶೋಕ್, ಮನು, ಜೆ.ದೇವೇಗೌಡ ಇದ್ದರು.

ಅರ್ಜಿ ಆಹ್ವಾನ

ಮಂಡ್ಯ, ಸೆ.22– ಪರಿಶಿಷ್ಟ ಜಾತಿಗೆ ಸೇರಿದ ಡಾ.ಬಿ.ಆರ್.ಅಂಬೇಡ್ಕರ್ ಅನುಯಾಯಿಗಳು ಅ.3 ರಿಂದ 5 ರವರೆಗೆ ಮಹಾರಾಷ್ಟ್ರದ ನಾಗಪುರದ ದೀಕ್ಷಾ ಭೂಮಿಯಲ್ಲಿ ನಡೆಯುವ ದಮ್ಮ ಚಕ್ಕ ಪವತ್ತನ ದಿನ ಕಾರ್ಯಕ್ರಮಕ್ಕೆ ತೆರಳಲು ಸಮಾಜ ಕಲ್ಯಾಣ ಇಲಾಖೆಯಿಂದ ಒಬ್ಬರಿಗೆ 5 ಸಾವಿರ ರೂ. ಧನಸಹಾಯ ನೀಡಲಾಗುತ್ತಿದ್ದು, ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು. ಆಸಕ್ತರು ವೆಬ್‌ಸೈಟ್ www.sw.kar.nic.in ನಲ್ಲಿ Deeksha Bhoomi Yathra ಲಿಂಕ್ ಬಳಕೆ ಮಾಡಿ ಸೆ.26 ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ ಸಂ.08232–298168 ಸಂಪರ್ಕಿಸಿ.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಶ್ರೀರಂಗಪಟ್ಟಣ, ಸೆ22–ತಾಲೂಕಿನ ಪಾಲಹಳ್ಳಿಯ ಸೆಂಟ್ ಆನ್ಸ್ ವಿದ್ಯಾಸಂಸ್ಥೆ ಆವರಣದಲ್ಲಿ ನಿರ್ಮಲ ಆರೋಗ್ಯ ಕೇಂದ್ರದಿಂದ ಸೆ.25ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಐಎ, ಈಡಿಯಿಂದ ಕಿರುಕುಳ ಆರೋಪ

ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಪ್ರತಿಭಟನೆ

ಚಾಮರಾಜನಗರ, ಸೆ.22– ಸಂಘಟನೆಯ ರಾಷ್ಟ್ರೀಯ ಮತ್ತು ರಾಜ್ಯ ನಾಯಕರಿಗೆ ಎನ್‌ಐಎ ಹಾಗೂ ಇಡಿ ದಾಳಿ ನಡೆಸುವ ಮೂಲಕ ಕಿರುಕುಳ ನೀಡುತ್ತಿದೆ ಎಂದು ಆರೋಪಿಸಿ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಜಿಲ್ಲಾ ಸಮಿತಿ ವತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಸುಲ್ತಾನ್ ಷರೀಫ್ ವೃತ್ತದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು ಎನ್‌ಐಎ, ಇಡಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಜಿಲ್ಲಾ ಕಾರ್ಯದರ್ಶಿ ಶುಯೇಬ್ ಖಾನ್ ಮಾತನಾಡಿ, ದೇಶಾದ್ಯಂತ ಎನ್‌ಐಎ–ಇಡಿ ದಾಳಿಗಳು, ರಾಷ್ಟ್ರೀಯ ಹಾಗೂ ರಾಜ್ಯ ನಾಯಕರ ಅನ್ಯಾಯದ ಬಂಧನ ಮತ್ತು ಕಿರುಕುಳವನ್ನು ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯ ತೀವ್ರವಾಗಿ ಖಂಡಿಸಿದೆ. ಎನ್‌ಐಎಯ ನಿರಾಧಾರ ವಾದಗಳು ಮತ್ತು ಸಂವೇದನಾತ್ಮಕಗೊಳಿಸುವ ಕಾರ್ಯವು ಭೀತಿಯ ವಾತಾವರಣ ಸೃಷ್ಟಿಸುವ ಉದ್ದೇಶವನ್ನಷ್ಟೇ ಹೊಂದಿದೆ ಎಂದರು.

ಕೇಂದ್ರೀಯ ಏಜೆನ್ಸಿಗಳನ್ನು ತನ್ನ ಕೈಗೊಂಬೆಗಳನ್ನಾಗಿ ಬಳಸುವ ಮೂಲಕ ಸರ್ವಾಧಿಕಾರಿ ಆಡಳಿತ ನಡೆಸುತ್ತಿರುವ ಇಂತಹ ಭೀತಿಯ ತಂತ್ರಗಳಿಗೆ ಪಾಪ್ಯುಲರ್ ಫ್ರಂಟ್ ಎಂದೂ ಬೆದರುವುದಿಲ್ಲ. ಸಂಘಟನೆಯು ತನ್ನ ನಿಲುವಿನಲ್ಲಿ ಬದ್ಧವಾಗಿದೆ ಮತ್ತು ನಮ್ಮ ಪ್ರೀತಿಯ ದೇಶದ ಸಾಂವಿಧಾನಿಕ ಸ್ಫೂರ್ತಿ ಹಾಗೂ ಮೌಲ್ಯಗಳನ್ನು ಪುನಃಸ್ಥಾಪಿಸುವ ಹೋರಾಟದಲ್ಲಿ ದೃಢವಾಗಿ ನಿಲ್ಲಲಿದೆ ಎಂದರು.

ಪ್ರತಿಭಟನೆಯಲ್ಲಿ ಪಿಎಫ್‌ಐ ಜಿಲ್ಲಾ ಅಧ್ಯಕ್ಷ ಕಫೀಲ್ ಅಹಮದ್, ಜಿಲ್ಲಾ ಕಾರ್ಯದರ್ಶಿ ಶುಯೇಬ್ ಖಾನ್, ಎಸ್‌ಡಿಪಿಐ ಜಿಲ್ಲಾ ಅಧ್ಯಕ್ಷ ಅಬ್ರಾರ್ ಅಹಮದ್, ಆಲ್ ಇಂಡಿಯಾ ಇಮಾಮ್ಸ್ ಕೌನ್ಸಿಲ್ ಜಿಲ್ಲಾ ಕಾರ್ಯದರ್ಶಿ ಮೌಲಾನ ಹಫೀಜ್ ಜಾವೀದ್, ಎನ್‌ಡಬ್ಲ್ಯುಎಫ್ ಜಿಲ್ಲಾ ಅಧ್ಯಕ್ಷೆ ನೂರ್ ಅಸ್ಮ, ಎಸ್‌ಡಿಪಿಐ ನಗರಸಭೆ ಸದಸ್ಯರು ಹಾಗೂ ಸಂಘಟನೆಯ ಕಾರ್ಯಕರ್ತರು ಭಾಗವಹಿಸಿದ್ದರು.



ಪ್ರತಿಭಟನೆ ನಡೆಸುತ್ತಿರುವ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ ಕಾರ್ಯಕರ್ತರು.

ರೈತರಿಗೆ ಕಿರುಕುಳ ಆರೋಪ: ಎಸಿಎಫ್ ಅಮಾನತಿಗೆ ಆಗ್ರಹಿಸಿ ಪ್ರತಿಭಟನೆ



ಗುಂಡ್ಲುಪೇಟೆ, ಸೆ22– ಎಸಿಎಫ್ ರವೀಂದ್ರ ಅವರು ರೈತರಿಗೆ ತೊಂದರೆ ಕೊಡುತ್ತಿದ್ದು, ತಕ್ಷಣ ಅವರನ್ನು ಅಮಾನತು ಪಡಿಸುವಂತೆ ಒತ್ತಾಯಿಸಿ ರೈತ ಸಂಘದ ಕಾರ್ಯಕರ್ತರು ಪಟ್ಟಣದ ಅರಣ್ಯ ಇಲಾಖೆಯ ಕಚೇರಿ ಎದುರು ಪ್ರತಿಭಟನೆ ನಡೆಸುತ್ತಿದ್ದಾರೆ.

ಅರಣ್ಯ ಇಲಾಖೆ ಕಚೇರಿ ಎದುರು ಸಮಾವೇಶಗೊಂಡ ರೈತ ಮುಖಂಡರು ಮತ್ತು ಕಾರ್ಯಕರ್ತರು ಪಟ್ಟಣದ ಅರಣ್ಯ ಕಚೇರಿಗೆ ಹೊಸದಾಗಿ ಬಂದಿರುವ ಎಸಿಎಫ್ ರವೀಂದ್ರ ರೈತರಿಗೆ ವಿನಾಕಾರಣ ತೊಂದರೆ ನೀಡುತ್ತಿದ್ದಾರೆ. ಈ ಬಗ್ಗೆ ಹಿಂದೆಯೇ ಪ್ರತಿಭಟನೆ ನಡೆಸಿದಾಗ ತಮ್ಮ ವರ್ತನೆಯನ್ನು ತಿದ್ದಿಕೊಳ್ಳುವುದಾಗಿ ಹೇಳಿದ್ದರು. ಆದರೆ ಅವರು ಬದಲಾಯಿಸಿಕೊಳ್ಳದೆ ಹಾಗೆ ಮುಂದುವರೆದಿದ್ದಾರೆ ಎಂದರು. ರೈತರ ಜಮೀನುಗಳಲ್ಲಿ ಬೆಳೆದಿರುವ ಮರಗಳನ್ನು ಕತ್ತರಿಸಲು ಲೈಸೆನ್ಸ್ ನೀಡದೆ ಕಿರುಕುಳ ಕೊಡುತ್ತಿರುವುದರಿಂದ ಅಂಕಹಳ್ಳಿ ಗ್ರಾಮದ ಉಮೇಶ್ ಎಂಬ ರೈತ ಆತ್ಮಹತ್ಯೆಗೆ ಮುಂದಾಗಿ ಆಸ್ಪತ್ರೆಯಲ್ಲಿ ಸಾವು–ಬದುಕಿನ ನಡುವೆ ಹೋರಾಡುತ್ತಿದ್ದಾರೆ. ರೈತರ ಪ್ರಾಣಕ್ಕೆ ಬೆಲೆ ಇಲ್ಲವೇ ಎಂದು ಆಕ್ರೋಶ ವ್ಯಕ್ತಪಡಿಸಿದರಲ್ಲದೆ ಕೂಡಲೇ ರವೀಂದ್ರ ಅವರನ್ನು ಅಮಾನತು ಮಾಡಬೇಕೆಂದು ಪಟ್ಟು ಹಿಡಿದರು.

ಸುದ್ದಿ ತಿಳಿದು ಸ್ಥಳಕ್ಕೆ ಆಗಮಿಸಿದ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್ ಕುಮಾರ್, ಹಿರಿಯ ಅಧಿಕಾರಿಗಳಿಗೆ ಈ ಬಗ್ಗೆ ಪತ್ರ ಬರೆದು ಅಮಾನತು ಮಾಡಲಾಗುವುದು ಎಂದು ಪ್ರತಿಭಟನಾಕಾರರಿಗೆ ತಿಳಿಸಿದರು. ಆದರೆ ಪ್ರತಿಭಟನಾಕಾರರು ಇದಕ್ಕೆ ಮಣಿಯದೆ, ಪ್ರತಿಭಟನೆ ಮುಂದುವರೆಸಿದ್ದಾರೆ.

ಆಸ್ಪತ್ರೆಯಲ್ಲಿರುವ ರೈತ ಉಮೇಶ್ ಅವರ ಚಿಕಿತ್ಸಾ ವೆಚ್ಚ ಭರಿಸುವುದರ ಜತೆಗೆ ಎಸಿಎಫ್ ಅಮಾನತಿಗೆ ಶಿಫಾರಸು ಮಾಡುವುದಾಗಿ ಡಾ.ರಮೇಶ್ ಕುಮಾರ್ ಹೇಳಿದರೂ ಅಮಾನತು ಆದೇಶ ಬರುವವರೆಗೆ ಪ್ರತಿಭಟನೆ ಕೈಬಿಡುವುದಿಲ್ಲ ಎಂದು ಪ್ರತಿಭಟನೆ ಮುಂದುವರೆಸಿದ್ದಾರೆ. ಪ್ರತಿಭಟನೆಯಲ್ಲಿ ರೈತ ಮುಖಂಡ ಸಂಪತ್ತು, ಮಹದೇವಪ್ಪ ಹಾಗೂ ರೈತ ಸಂಘದ ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಚಾಮರಾಜನಗರ, ಸೆ.22– ಜಿಲ್ಲಾ ಉಪ್ಪಾರ ಸಂಘದ ವತಿಯಿಂದ 2021–22ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು ಉತ್ತೀರ್ಣರಾಗಿರುವ ಜಿಲ್ಲೆಯ ಉಪ್ಪಾರ ಸಮಾಜದ ವಿದ್ಯಾರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಅರ್ಜಿ ಪಡೆದು, ಅಂಕಪಟ್ಟಿ, ಜಾತಿ ಪ್ರಮಾಣ ಪತ್ರದ ಜೆರಾಕ್ಸ್, ಒಂದು ಭಾವಚಿತ್ರ ಸಲ್ಲಿಸಬೇಕು. ಅರ್ಜಿಯಲ್ಲಿ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ಬರೆಯಬೇಕು. ಅರ್ಜಿಯನ್ನು ಸೆ.30ರೊಳಗೆ ಇವರ ಬಳಿ ತಲುಪಿಸುವಂತೆ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಚಿಕ್ಕಮಹದೇವ ಕೋರಿದ್ದಾರೆ.

ಚಾ.ನಗರ– ಸೋಮಣ್ಣ (ಮೊ.98868–24852), ಯಳಂದೂರು–ರಾಚಣ್ಣ (ಮೊ.9964156517), ಗುಂಡ್ಲುಪೇಟೆ– ಮಲ್ಲು (ಮೊ.9164898310), ಮಾದೇಶ್– ಹನೂರು (ಮೊ.9972835089) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ. ಮೊ.9945898796, 9902038341.

ಕೆರೆಗೆ ಕಾಲು ಜಾರಿ ಬಿದ್ದು ಯುವಕ ಸಾವು



ಬೇಗೂರು (ಗುಂಡ್ಲುಪೇಟೆ), ಸೆ.22– ಯುವಕನೋರ್ವ ಕೆರೆಯಲ್ಲಿ ಕಾಲು ಜಾರಿ ಬಿದ್ದು ಸಾವನ್ನಪ್ಪಿರುವ ಘಟನೆ ಸಮೀಪದ ಚಿಕ್ಕಾಟಿ ಗ್ರಾಮದಲ್ಲಿ ಸಂಭವಿಸಿದೆ. ಚಿಕ್ಕಾಟಿ ಗ್ರಾಮದ ಮಂಜು (28) ಕೆರೆಗೆ ಹೋದಾಗ ಕಾಲು ಜಾರಿ ಬಿದ್ದು ಸಾವನ್ನಪ್ಪಿದ್ದ ಯುವಕ. ಈ ಬಗ್ಗೆ ಬೇಗೂರು ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಮುಂದಿನ ತನಿಖೆ ಕೈಗೊಂಡಿದ್ದಾರೆ.

ಮಹಿಳೆ ನಾಪತ್ತೆ



ಚಾಮರಾಜನಗರ, ಸೆ.22– ಉಗನೇದಹುಂಡಿ ಗ್ರಾಮದ ಚೈತ್ರಾ ಎಂಬುವವರು ಕಾಣೆಯಾಗಿದ್ದು, ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. 28 ವರ್ಷದ ಚೈತ್ರಾ ಕಾಣೆಯಾದವರು. ಇವರ ಸುಳಿವು ದೊರೆತಲ್ಲಿ ಚಾಮರಾಜನಗರ ಜಿಲ್ಲಾ ಪೊಲೀಸ್ ಅಧೀಕ್ಷಕರು 08226–222243, ಗ್ರಾಮಾಂತರ ಪೊಲೀಸ್ ಠಾಣೆ 08226–222092, ಜಿಲ್ಲಾ ಪೊಲೀಸ್ ಕಂಟ್ರೋಲ್ ರೂಂ. 08226–222383, ಚಾಮರಾಜನಗರ ಗ್ರಾಮಾಂತರ ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ 9480804646 ಗೆ ಮಾಹಿತಿ ನೀಡುವಂತೆ ಪ್ರಕಟಣೆ ತಿಳಿಸಿದೆ.

ನೇಮಕ

ಚಾಮರಾಜನಗರ, ಸೆ.22– ಛಲವಾದಿ ಮಹಾಸಭಾ ಜಿಲ್ಲಾ ಅಧ್ಯಕ್ಷರಾಗಿ ಆರ್. ರಮೇಶ್ ಅವರು ನೇಮಕವಾಗಿದ್ದಾರೆ ಎಂದು ಮಹಾಸಭಾದ ರಾಜ್ಯ ಅಧ್ಯಕ್ಷ ಕೆ. ಶಿವರಾಮು ತಿಳಿಸಿದ್ದಾರೆ.

ಪಂಡಿತ್ ದೀನದಯಾಳ್ ಉಪಾಧ್ಯಾಯ ಜನ್ಮದಿನಾಚರಣೆ

ಚಾಮರಾಜನಗರ, ಸೆ.22– ನೆಹರು ಯುವ ಕೇಂದ್ರ, ಭಾರತ ಸರ್ಕಾರದ ಯುವ ಕಾರ್ಯ ಹಾಗೂ ಕ್ರೀಡಾ ಸಚಿವಾಲಯ, ಡಾ. ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ರಾಷ್ಟ್ರೀಯ ಸೇವಾ ಯೋಜನೆ, ಜೈ ಭುವನೇಶ್ವರಿ ಕನ್ನಡ ವೇದಿಕೆಯ ಸಹಯೋಗದೊಂದಿಗೆ ಪಂಡಿತ್ ದೀನದಯಾಳ್ ಉಪಾಧ್ಯಾಯ ಜನ್ಮದಿನಾಚರಣೆ ಕಾರ್ಯಕ್ರಮವನ್ನು ಸೆ.24ರಂದು ಬೆಳಿಗ್ಗೆ 11 ಗಂಟೆಗೆ ಡಾ.ಬಿ.ಆರ್. ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರದ ಸುವರ್ಣ ಗಂಗೋತ್ರಿ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮೈಸೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯರಾದ ಪ್ರದೀಪ್‌ಕುಮಾರ್ ದೀಕ್ಷಿತ್ ಕಾರ್ಯಕ್ರಮ ಉದ್ಘಾಟಿಸುವರು. ಸ್ನಾತಕೋತ್ತರ ಕೇಂದ್ರದ ನಿರ್ದೇಶಕ ಆರ್. ಮಹೇಶ್ ಅವರು ಅಧ್ಯಕ್ಷತೆ ವಹಿಸುವರು.

ಕೋವಿಡ್ ವಾರಿಯರ್ಸ್‌ಗಳ ನೇಮಕಕ್ಕೆ ಆಗ್ರಹಿಸಿ ಧರಣಿ



ಚಾಮರಾಜನಗರ, ಸೆ.22– ಕೋವಿಡ್ ಮಂಚೂಣಿ ಕಾರ್ಯಕರ್ತರು ಮತ್ತು ಕೋವಿಡ್ ವಾರಿಯರ್ಸ್‌ಗಳನ್ನು ಆಸ್ಪತ್ರೆಗಳಿಗೆ ನೇಮಿಸುವಂತೆ ಒತ್ತಾಯಿಸಿ ಹಾಗೂ ಆರೋಗ್ಯ ಇಲಾಖೆಯಲ್ಲಿ ನಡೆದಿದೆ ಎನ್ನಲಾದ ಅಕ್ರಮಗಳ ಬಗ್ಗೆ ಸೂಕ್ತ ತನಿಖೆ ನಡೆಸಿ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ನಗರದಲ್ಲಿ ಗುರುವಾರದಿಂದ ಅನಿರ್ದಿಷ್ಟಾವಧಿ ಧರಣಿ ಪ್ರಾರಂಭಿಸಲಾಯಿತು.

ಕೋವಿಡ್ ಮುಂಚೂಣಿ ಕಾರ್ಯಕರ್ತರ ಒಕ್ಕೂಟ(ಜಿಡಿಎ) ಮತ್ತು ಕೋವಿಡ್ ವಾರಿಯರ್ಸ್ ಒಕ್ಕೂಟದ ಆಶ್ರಯದಲ್ಲಿ ಇಲ್ಲಿನ ಜಿಲ್ಲಾಡಳಿತ ಭವನದ ಮುಂಭಾಗ ಧರಣಿ ನಡೆಸಲಾಗುತ್ತಿದೆ. ಕೋವಿಡ್ ಮೊದಲನೇ ಹಾಗೂ ಎರಡನೇ ಅಲೆಯಲ್ಲಿ ಆರೋಗ್ಯ ಇಲಾಖೆ ನಮ್ಮನ್ನು ನೇಮಕ ಮಾಡಿಕೊಂಡು ಸಾಕಷ್ಟು ಸೇವೆಯನ್ನು ಪಡೆದಿದೆ. ನಂತರ ಸರ್ಕಾರ ಕೋವಿಡ್ ವಾರಿಯರ್ಸ್‌ರನ್ನು ಬಿಡುಗಡೆ ಮಾಡಿವೆ. ಮತ್ತೆ ಮತ್ತೊಂದು ಆದೇಶದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಕೋವಿಡ್ ವಾರಿಯರ್ಸ್‌ಗಳಾಗಿ ಸೇವೆ ಸಲ್ಲಿಸಿದವರಿಗೆ ಪ್ರಥಮ ಆದ್ಯತೆ ನೀಡುವಂತೆ ತಿಳಿಸಲಾಗಿದೆ.

ಇದನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಗಾಳಿಗೆ ತೂರಿದ್ದಾರೆ ಎಂದು ಪ್ರತಿಭಟನಾಕಾರರು ದೂರಿದರು. ಕೋವಿಡ್ ಸಂಕಷ್ಟದ ವೇಳೆ ಜೀವನೋಪಾಯ ಇಲಾಖೆಯಿಂದ ರಾಜ್ಯದಲ್ಲಿ ಪ್ರಥಮ ಬಾರಿಗೆ ಜಿಲ್ಲೆಯನ್ನು ಆಯ್ಕೆ ಮಾಡಿಕೊಂಡು 6 ಬಗೆಯ ವಿವಿಧ ತರಬೇತಿ ನೀಡಿ ವಿವಿಧ ಆಸ್ಪತ್ರೆಯಲ್ಲಿ ಸೇವೆಗೆ ತೆಗೆದುಕೊಳ್ಳಲಾಗಿದೆ. ಜಿಡಿಎ ಎಂಬ ತರಬೇತಿಯು ಅದರಲ್ಲಿ ಪ್ರಮುಖವಾಗಿದೆ.

ಇಂದು ಸ್ವಂತ ಖರ್ಚಿನಲ್ಲಿ ತರಬೇತಿ ಕೇಂದ್ರಕ್ಕೆ ಬಂದು, ಕೆಲಸ ನಿರ್ವಹಿಸಿ ಸಾಲಗಾರರಾಗಿದ್ದಾರೆ. ನಿಯಮದ ಪ್ರಕಾರ ತರಬೇತಿ ಅವಧಿಯಲ್ಲಿ ಭತ್ಯೆ ಮತ್ತು ಸೇವಾ ಭತ್ಯೆಯನ್ನು ನೀಡಿಲ್ಲ ಅವಶ್ಯ ಇರುವ ಅಭ್ಯರ್ಥಿಗಳಿಗೆ ವಸತಿ ಊಟ ಪುಸ್ತಕ ಹಾಗೂ ವಿವಿಧ ಸಲಕರಣೆಯನ್ನು ನೀಡದೆ ವಂಚಿಸಲಾಗಿದೆ ಎಂದು ದೂರಿದರು. ಕೆಲಸಕ್ಕೆ ತೆಗೆದುಕೊಳ್ಳುವುದಾಗಿ ಸುಳ್ಳು ಭರವಸೆ ನೀಡಿ, ಏಜೆಂಟರ ಮುಖಾಂತರ ಅಭ್ಯರ್ಥಿಗಳಿಂದ ಸಾಕಷ್ಟು ಹಣವನ್ನು ಸಂಗ್ರಹಿಸಲಾಗಿದೆ. ಈಗ ಹಣವೂ ಇಲ್ಲದೆ, ಉದ್ಯೋಗವೂ ಇಲ್ಲದೆ ಬೀದಿಗೆ ಬಂದಿದ್ದೇವೆ. ಆದ್ದರಿಂದ ಆರೋಗ್ಯ ಇಲಾಖೆಯ ಅಕ್ರಮಗಳ ಬಗ್ಗೆ ಸೂಕ್ತ ತನಿಖೆ ನಡೆಸುವಂತೆ ಒತ್ತಾಯಿಸಿದರು.

ಮುಖಂಡರಾದ ಎನ್. ಅಂಬರೀಶ್, ಸಿ.ಎಂ. ಕೃಷ್ಣಮೂರ್ತಿ, ನಮ್ಮನೆ ಪ್ರಶಾಂತ್, ನಿಜಧ್ವನಿ ಗೋವಿಂದರಾಜು, ಸಂದೇಶ್ ನಾಗ್, ಜನಶಕ್ತಿ ಸುರೇಶ್, ಬಂಗಾರಸ್ವಾಮಿ, ಜಿತೇಂದ್ರ, ಕೆಂಪರಾಜು, ಬಸವಣ್ಣ, ಶಿವಸ್ವಾಮಿ, ಅಭ್ಯರ್ಥಿಗಳಾದ ಶೃಂಗಾರ, ಸಿದ್ದರಾಜು, ಮಹದೇವಮ್ಮ, ಈಶ್ವರಿ, ರಶ್ಮಿ, ಮಮತಾ, ಪಾರ್ವತಿ, ಶಿವಕುಮಾರಸ್ವಾಮಿ, ಭಾಗ್ಯಲಕ್ಷ್ಮಿ, ಗಂಗಾಮಣಿ, ದ್ರಾಕ್ಷಾಯಿಣಿ, ಸುಗುಣ, ಕೌಸಿಯಾ, ಸೌಮ್ಯ, ಮಹೇಂದ್ರ, ಈಶ್ವರಿ, ಮಂಗಳಮ್ಮ, ವಿಶ್ವಾಸ್, ಜೀವನ್, ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಸೆ.22– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ ವತಿಯಿಂದ ಸೆ.23ರ ಶುಕ್ರವಾರ ತುರ್ತು ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಳ್ಳಲಾಗಿದ್ದು, ಈ ಸಂಬಂಧ ನಾಚನಹಳ್ಳಿ ಪಾಳ್ಯ, ಡಿ–ಬ್ಲಾಕ್, ನವೋದಯ ಬಡಾವಣೆ, ಜೆ.ಪಿ ನಗರ ಕೊನೆಯ ಬಸ್ ನಿಲ್ದಾಣ, ಪೊಲೀಸ್ ಬೂತ್ ಸರ್ಕಲ್, ಕವಿತಾ ಬೇಕರಿ ಹತ್ತಿರ ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆಯವರೆಗೆ ವಿದ್ಯುತ್ ನಿಲುಗಡೆಯಾಗಲಿದೆ ಎಂದು ನ.ರಾ.ಮೊಹಲ್ಲಾ ಕಾರ್ಯ ಮತ್ತು ಪಾಲನೆ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರ ಡಿ.ಬಸವಯ್ಯ ನಿಧನ



ಚಾಮರಾಜನಗರ, ಸೆ22– ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ತಾಲೂಕಿನ ಕಾಗಲವಾಡಿ ಗ್ರಾಮದ ಡಿ.ಬಸವಯ್ಯ(95) ಗುರುವಾರ ವಯೋ ಸಹಜ ಅನಾರೋಗ್ಯದಿಂದ ಮೈಸೂರಿನ ಪುತ್ರನ ಮನೆಯಲ್ಲಿ ನಿಧನರಾದರು. ಮೃತರು ಪತ್ನಿ ಕಮಲಮ್ಮ ಹಾಗೂ ಮೂವರು ಪುತ್ರರು, ಓರ್ವ ಪುತ್ರಿಯನ್ನು ಅಗಲಿದ್ದಾರೆ. ಮೈಸೂರಿನ ಗೌರಿಶಂಕರನಗರದಲ್ಲಿ ಪುತ್ರ ಕೆ.ಬಿ. ಓಂಪ್ರಕಾಶ್ ಅವರ ಜೊತೆ ವಾಸವಿದ್ದರು. ಎರಡು ತಿಂಗಳಿಂದ ವಯೋಸಹಜ ಅನಾರೋಗ್ಯದಿಂದ ಬಳಲುತ್ತಿದ್ದರು. ಗುರುವಾರ ಸಂಜೆ 4 ಗಂಟೆಯಲ್ಲಿ ನಿಧನರಾದರು. ಮೃತರ ಅಂತ್ಯಕ್ರಿಯೆ ಅವರ ಸ್ವಗ್ರಾಮ ಕಾಗಲವಾಡಿಯಲ್ಲಿ ಶುಕ್ರವಾರ ಸರ್ಕಾರಿ ಗೌರವಗಳೊಂದಿಗೆ ನಡೆಯಲಿದೆ.

ಬಸವಯ್ಯ ಅವರು, ಪ್ರೌಢಶಾಲೆಯಲ್ಲಿದ್ದಾಗಲೇ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಗಾಂಧೀಜಿಯವರು ಬದನವಾಳಿಗೆ ಬಂದಿದ್ದಾಗ ಅವರನ್ನು ಭೇಟಿಯಾಗಿದ್ದರು.

ಚಂದ್ರಮ್ಮ



ಚಾಮರಾಜನಗರ, ಸೆ.22– ತಾಲೂಕಿನ ಆಲೂರು ಗ್ರಾಮದ ದಿವಂಗತ ಗದ್ದಿಗೆ ಮನೆ ಮಹದೇವಪ್ಪ ಅವರ ಧರ್ಮಪತ್ನಿ ಚಂದ್ರಮ್ಮ (80) ಗುರುವಾರ ನಿಧನರಾದರು.

ಮೃತರು ಪುತ್ರರಾದ ಗ್ರಾಪಂ ಮಾಜಿ ಸದಸ್ಯ ಎ.ಎಂ. ಲಿಂಗಣ್ಣ, ಎ.ಎಂ. ಕಾಶಿ, ಎ.ಎಂ.ಬಸವಣ್ಣ ಹಾಗೂ ಬಿಜೆಪಿ ಮುಖಂಡ ಮತ್ತು ಜಿಲ್ಲಾ ರೈತ ಹಿತರಕ್ಷಣಾ ಸಮಿತಿಯ ಅಧ್ಯಕ್ಷ ಆಲೂರು ಮಲ್ಲು ಅವರನ್ನು ಅಗಲಿದ್ದಾರೆ.

ಮೃತರ ಅಂತ್ಯಕ್ರಿಯೆ ಸ್ವಗ್ರಾಮ ಆಲೂರಿನ ಅವರ ತೋಟದಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಡ್ಡಾದಿಡ್ಡಿ ಬೈಕ್ ರೈಡಿಂಗ್ ಪ್ರಶ್ನಿಸಿದ ವೈದ್ಯರ ಮೇಲೆ ಹಲ್ಲೆ

ಮೈಸೂರಿನ ಬೋಗಾದಿ ಬಳಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಘಟನೆ

ಮೈಸೂರು, ಸೆ.22(ಆರ್‌ಕೆ)–ಅಡ್ಡಾದಿಡ್ಡಿ ಬೈಕ್ ಚಾಲಿಸಿಕೊಂಡು ಬಂದು ಕಾರಿಗೆ ಡಿಕ್ಕಿ ಹೊಡೆದಿದ್ದನ್ನು ಪ್ರಶ್ನಿಸಿದ ವೈದ್ಯರ ಮೇಲೆ ವಿದ್ಯಾರ್ಥಿಗಳಿಬ್ಬರು ಹಲ್ಲೆ ನಡೆಸಿರುವ ಘಟನೆ ಮೈಸೂರಿನ ಬೋಗಾದಿ ಬಳಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಇಂದು ಮಧ್ಯಾಹ್ನ ಸಂಭವಿಸಿದೆ.

ಮೈಸೂರಿನ ಬೋಗಾದಿ ಬಳಿಯ ಟೆಲಿಫೋನ್ ಲೇಔಟ್ ನಿವಾಸಿಯಾದ ವೈದ್ಯ ಡಾ. ಗುರುಪ್ರಸಾದ್ ಹಲ್ಲೆಗೊಳಗಾದವರು. ಎಸ್‌ಬಿಎಂ ಬಡಾವಣೆ ಕಡೆಯಿಂದ ಕಾರಿನಲ್ಲಿ ಬರುತ್ತಿದ್ದ ವೇಳೆ ಹಿಂದಿನಿಂದ ವೇಗವಾಗಿ ಬಂದ ಬೈಕ್ ಸವಾರರು, ಅಡ್ಡಾದಿಡ್ಡಿಯಾಗಿ ಚಾಲನೆ ಮಾಡಿಕೊಂಡು ಬಂದು ಮಧ್ಯಾಹ್ನ ಸುಮಾರು 2.30 ಗಂಟೆಯಲ್ಲಿ ಡಿಕ್ಕಿ ಹೊಡೆದರು.

ಅದನ್ನು ಪ್ರಶ್ನಿಸಿದ ಡಾ. ಗುರುಪ್ರಸಾದ್, 'ನಿಮ್ಮಿಂದ ಇತರೆ ವಾಹನ ಸವಾರರಿಗೆ ತೊಂದರೆಯಾಗುತ್ತದೆ. ನಿಧಾನವಾಗಿ ಹೋಗಕಾಗಲ್ವಾ... ಎಂದರು. ಅಷ್ಟಕ್ಕೇ ಕೋಪಗೊಂಡ ಯುವಕರು, ಬೈಕ್ ಅಡ್ಡಗಟ್ಟಿ ಕಾರು ತಡೆದು ಗಲಾಟೆ ಮಾಡಿದರಲ್ಲದೆ, ಹಲ್ಲೆ ಮಾಡಿದರು ಎಂದು ವೈದ್ಯ ಪೊಲೀಸರಿಗೆ ದೂರು ನೀಡಿದ್ದಾರೆ.

ಅನುಚಿತವಾಗಿ ವರ್ತಿಸಿ ಏಕವಚನದಿಂದ ನಿಂದಿಸಿ ಹಲ್ಲೆ ನಡೆಸಿ ಪರಾರಿಯಾದವರು ಪ್ರತಿಷ್ಠಿತ ಕಾಲೇಜೊಂದರ ವಿದ್ಯಾರ್ಥಿಗಳಾಗಿದ್ದು, ಅವರನ್ನು ಕರೆತಂದರೆ ನಾನು ಗುರುತಿಸಬಲ್ಲೆ ಎಂದು ಡಾ. ಗುರುಪ್ರಸಾದ್ ತಿಳಿಸಿದ್ದಾರೆ. ಈ ಕುರಿತು ದೂರು ಸ್ವೀಕರಿಸಿರುವ ಸರಸ್ವತಿಪುರಂ ಠಾಣೆ ಪೊಲೀಸರು, ಹುಡುಗರನ್ನು ಪತ್ತೆ ಮಾಡಲೆತ್ನಿಸಿದ್ದಾರೆ. ಆದರೆ ಪ್ರಕರಣ ದಾಖಲಿಸಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಮನೆ ಕೆಲಸದಾಕೆಯಿಂದ ಒಡತಿಯ ಚಿನ್ನದ ಬಳೆ ಕಳವು

ಕ್ರೈಂ ಬಾಕ್ಸ್

ಮೈಸೂರು, ಸೆ.22– ಮನೆಯೊಡತಿಯ ಚಿನ್ನದ ಬಳೆಗಳನ್ನು ಕೆಲಸದಾಕೆ ಕಳವು ಮಾಡಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಹೊಸಬಂಡಿಕೇರಿ ನಿವಾಸಿ ಉಷಾ(40) ಆರೋಪಕ್ಕೆ ಗುರಿಯಾಗಿರುವವರು. ಈಕೆ ತಾನು ಕದ್ದ ಬಳೆಗಳನ್ನು ಕೆ.ಜಿ.ಕೊಪ್ಪಲಿನ ಜುವೆಲರಿ ವೊಂದರಲ್ಲಿ ಗಿರವಿ ಇಟ್ಟಿದ್ದಾರೆ ಎಂದು ಹೇಳಲಾಗಿದೆ.

ವಿವರ: ಮೈಸೂರಿನ ಕೇರ್ಗಳ್ಳಿಯಲ್ಲಿರುವ ನ್ಯಾಯಾಂಗ ಬಡಾವಣೆ ನಿವಾಸಿ ಸಾಫ್ಟ್‌ವೇರ್ ಇಂಜಿನಿಯರ್ ಆರ್.ಚೇತನ್ ರಾಜ್ ಪತ್ನಿ ಗೀತಾ ಅವರಿಗೆ ಒಂದೂವರೆ ವರ್ಷದ ಹಿಂದೆ ಅವಳಿ ಮಕ್ಕಳು ಜನಿಸಿದ್ದವು. ಮಕ್ಕಳ ಪಾಲನೆಗಾಗಿ ಕಳೆದ ಮಾರ್ಚ್ ತಿಂಗಳಿನಲ್ಲಿ ಚೇತನ್ ರಾಜ್ ಅವರು ಏಜೆಂಟ್ ಮೂಲಕ ಉಷಾ ಅವರನ್ನು ನೇಮಿಸಿಕೊಂಡಿದ್ದರು. ಈಕೆ ಕಳೆದ ಏ.20ರಂದು ಮನೆಯೊಡತಿ ಗೀತಾ ಅವರ 26 ಗ್ರಾಂ ತೂಕದ ಚಿನ್ನದ ಬಳೆಗಳನ್ನು ಕಳವು ಮಾಡಿ, ಅವುಗಳಿದ್ದ ಸ್ಥಳದಲ್ಲಿ ನಕಲಿ ಬಳೆಗಳನ್ನು ಇಟ್ಟಿದ್ದರು.

ಈ ವಿಷಯ ತಿಳಿಯುತ್ತಿದ್ದಂತೆ ಆಕೆ ತನಗೆ ಮನೆಯಲ್ಲಿ ಕಷ್ಟವಿದ್ದುದ್ದರಿಂದ ಬಳೆ ಕದ್ದು ಕೆ.ಜಿ.ಕೊಪ್ಪಲಿನ ಸೇಠು ಜುವೆಲರಿ ಶಾಪ್‌ನಲ್ಲಿ ಗಿರವಿ ಇಟ್ಟಿರುವುದಾಗಿಯೂ ತಾನೇ ಅದನ್ನು ಬಿಡಿಸಿ ಕೊಡುವುದಾಗಿಯೂ ಹೇಳಿದ್ದಲ್ಲದೇ ಸ್ವಲ್ಪದಿನ ಕಾಲಾವಕಾಶ ಬೇಕೆಂದು ಹೇಳಿಕೊಂಡಿದ್ದಾಳೆ ಎಂದು ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಲಾಗಿದೆ. ಜೂನ್ ತಿಂಗಳವರೆಗೂ ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದ ಉಷಾ ತಾನು ಕದ್ದು ಗಿರವಿ ಇಟ್ಟಿರುವ ಬಳೆಗಳನ್ನು ಬಿಡಿಸಿಕೊಡದೇ ಉಡಾಫೆಯಿಂದ ಮಾತನಾಡುತ್ತಿದ್ದಾಳೆ ಎಂದು ಚೇತನ್ ರಾಜ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ಜಯಪುರ ಠಾಣೆ ಪೊಲೀಸರು ತನಿಖೆ ಕೈಗೊಂಡಿದ್ದಾರೆ.

ಅನಧಿಕೃತ ಗಣಿಗಾರಿಕೆ: 34.79 ಲಕ್ಷದ ಕಲ್ಲು ಕಳವು

ಶ್ರೀರಂಗಪಟ್ಟಣ, ಸೆ.22– ಸುಮಾರು 2 ವರ್ಷಗಳ ಕಾಲ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ಗಣಿಗಾರಿಕೆ ನಡೆಸಿ 34.79 ಲಕ್ಷ ರೂ. ಮೌಲ್ಯದ 49707 ಮೆಟ್ರಿಕ್ ಟನ್ ಕಲ್ಲನ್ನು ಕಳವು ಮಾಡಲಾಗಿದೆ ಎಂದು ಅರಕೆರೆ ಠಾಣೆಯಲ್ಲಿ ದೂರು ದಾಖಲಾಗಿದೆ.

ಮಂಡ್ಯ ಹಿರಿಯ ಭೂ ವಿಜ್ಞಾನಿ ಸಿ.ಜೆ.ನಾಗಮಧು ಅವರು ಈ ಸಂಬಂಧ ದೂರು ಸಲ್ಲಿಸಿದ್ದು, ಚನ್ನಪಟ್ಟಣ ತಾಲೂಕು ವಿರೂಪಾಕ್ಷಿಪುರ ಗ್ರಾಮದವರಾದ ಟಿ.ಸುರೇಶ್ ಎಂಬಾತ ಶ್ರೀರಂಗಪಟ್ಟಣ ತಾಲೂಕು ಅರಕೆರೆ ಹೋಬಳಿ ಚಿನ್ನನಕೆರೆ ಗ್ರಾಮದ ಸರ್ವೇ ನಂ.78ರಲ್ಲಿ ಸುಮಾರು 2 ವರ್ಷಗಳ ಕಾಲ ಅಕ್ರಮವಾಗಿ ಗಣಿಗಾರಿಕೆ ನಡೆಸಿದ್ದಾರೆ. ಸದರಿ ಪ್ರದೇಶವನ್ನು ಅಳತೆ ಮಾಡಲಾಗಿ ಈತ 49707 ಮೆಟ್ರಿಕ್ ಟನ್ ಕಲ್ಲನ್ನು ಗಣಿಗಾರಿಕೆ ಮಾಡಿ ಸಾಗಿಸಿರುವುದು ದೃಢಪಟ್ಟಿದೆ. ಇದರಿಂದಾಗಿ ಸರ್ಕಾರಕ್ಕೆ ಬರಬೇಕಾದ 34,79,490 ರೂ. ರಾಜಧನವನ್ನು ವಂಚಿಸಲಾಗಿದೆ ಎಂದು ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಅರೆಕೆರೆ ಠಾಣೆ ಪೊಲೀಸರು ಸುರೇಶ್ ವಿರುದ್ಧ ಕಳವು ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರೆಸಿದ್ದಾರೆ.

ಬಾಗಿಲು ಮೀಟಿ 1.45 ಲಕ್ಷ ಮೌಲ್ಯದ ಚಿನ್ನಾಭರಣ ಕಳವು

ಶ್ರೀರಂಗಪಟ್ಟಣ, ಸೆ.22– ಹಾಡಹಗಲೇ ಮನೆ ಬಾಗಿಲು ಮೀಟಿ 10 ಸಾವಿರ ನಗದು ಸೇರಿದಂತೆ 1.45 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿರುವ ಘಟನೆ ಶ್ರೀರಂಗಪಟ್ಟಣ ತಾಲೂಕು ಬಸ್ತಿಪುರ ಗ್ರಾಮದಿಂದ ವರದಿಯಾಗಿದೆ.

ಗ್ರಾಮದ ವಿ.ವಿ.ಸಣ್ಣಸ್ವಾಮಿ ಎಂಬುವರು ಚಿನ್ನಾಭರಣ ಹಾಗೂ ನಗದು ಕಳೆದುಕೊಂಡವರಾಗಿದ್ದು, ಬ್ಯಾಂಕ್ ಉದ್ಯೋಗಿಯಾಗಿರುವ ಇವರ ಪತ್ನಿ ಶಶಿಕಲಾ ಸೆ.20ರಂದು ಬೆಳಗ್ಗೆ ಕೆಲಸಕ್ಕೆ ಹೋಗಿದ್ದರು. ಕೋಚಿಂಗ್ ಕ್ಲಾಸ್‌ಗೆ ಹೋಗಿದ್ದ ಮಗ ಸಂಜೆ 6 ಗಂಟೆ ಸುಮಾರಿನಲ್ಲಿ ಬಂದಾಗ ಮನೆ ಬಾಗಿಲು ಮೀಟಿ ಕಳವು ಮಾಡಿರುವುದು ಗೊತ್ತಾಗಿದೆ. ಖದೀಮರು ಮನೆಯ ಬೀರುವಿನಲ್ಲೇ ಇಟ್ಟಿದ್ದ ಕೀ ಮೂಲಕ ಬಾಗಿಲು ತೆರೆದು 10 ಸಾವಿರ ರೂ. ಸೇರಿದಂತೆ 1.45 ಲಕ್ಷ ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಿದ್ದಾರೆ. ಈ ಸಂಬಂಧ ಕೆಆರ್‌ಎಸ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ನಕಲಿ ಉದ್ಯೋಗ ನೇಮಕಾತಿ ಪತ್ರ ನೀಡಿ ವಂಚನೆ

ಹಾಸನ, ಸೆ.22– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ನಕಲಿ ನೇಮಕಾತಿ ಪತ್ರ ತೋರಿಸಿ ಬಿಬಿಎಂ ಪದವೀಧರೆಗೆ 5 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಹಾಸನದ ಕುವೆಂಪುನಗರದಲ್ಲಿ ವಾಸವಾಗಿರುವ ಹೇಮಲತಾ(27) ವಂಚನೆಗೊಳಗಾದವರಾಗಿದ್ದು, ವಿವಾಹವಾಗಿರುವ ಇವರು ಯಾವುದೇ ಕೆಲಸವಿಲ್ಲದೇ ಮನೆಯಲ್ಲಿದ್ದರು. ಇವರ ಪರಿಚಯಸ್ಥರಾದ ಮಹಿಳೆಯೋರ್ವರು, ಸಮೀರ್ ಮಲ್ಲಿಕ್ ಎಂಬುವರು ಡಿಸಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದು, ಅವರ ಸಂಪರ್ಕಿಸಿದರೆ ಸರ್ಕಾರಿ ಕೆಲಸ ಸಿಗಬಹುದು ಎಂದು ತಿಳಿಸಿದ್ದಾರೆ.

ಹೀಗಾಗಿ ಸಮೀರ್ ಮಲ್ಲಿಕ್ ಎಂಬಾತನನ್ನು ಹೇಮಲತಾ ಅವರ ಸಾಕು ತಂದೆ ಕೆಆರ್. ನಾಗರಾಜ್ ಸಂಪರ್ಕಿಸಿದಾಗ, ಅಂಗನವಾಡಿ ಸೂಪರ್‌ವೈಸರ್ ಕೆಲಸ ಖಾಲಿ ಇದೆ. ಅದನ್ನು ನಿಮ್ಮ ಮಗಳಿಗೆ ಕೊಡಿಸುತ್ತೇನೆ ಎಂದು ಸಮೀರ್ ಮಲ್ಲಿಕ್ ತಿಳಿಸಿದ್ದಾನೆ. ಸ್ವಲ್ಪ ದಿನದ ನಂತರ ಕರೆ ಮಾಡಿದ ಆತ 5 ಲಕ್ಷ ರೂ. ಅರೆಂಜ್ ಮಾಡಿಕೊಳ್ಳಿ ಕೆಲಸ ಸಿಗುತ್ತದೆ ಎಂದು ಹೇಳಿ ಮೊದಲಿಗೆ 1.5 ಲಕ್ಷ ರೂ. ತನ್ನ ಬ್ಯಾಂಕ್ ಖಾತೆಗೆ ವರ್ಗಾವಣೆ ಮಾಡಿಸಿಕೊಂಡಿದ್ದಾನೆ. ತಿಂಗಳ ನಂತರ ಮತ್ತೆ ಸಂಪರ್ಕಿಸಿದ ಆತ ಹೇಮಾವತಿ ಅವರಿಗೆ ಮಹಿಳಾ ಮತ್ತು ಅಭಿವೃದ್ಧಿ ಇಲಾಖೆಯಲ್ಲಿ ಕೆಲಸ ಆಗಿದೆ ಎಂದು ನೇಮಕಾತಿ ಪತ್ರವೊಂದನ್ನು ತೋರಿಸಿ ಉಳಿದ ಹಣವನ್ನು ಪಡೆದಿದ್ದಾನೆ. ಅಲ್ಲದೇ ಪೊಲೀಸ್ ವೆರಿಫಿಕೇಶನ್ ಕೂಡ ಮಾಡಿಸಿದ್ದಾನೆ. (ವೆರಿಫಿಕೇಶನ್ ಸಂಖ್ಯೆ ಪಿ.ಓ.0185210008378) ಆದರೆ ಅವರಿಗೆ ಕೆಲಸವಂತೂ ಸಿಕ್ಕಿಲ್ಲ. ಆತ ತಮಗೆ ತೋರಿಸಿದ್ದು ನಕಲಿ ನೇಮಕಾತಿ ಪತ್ರ ಎಂಬುದು ಮನವರಿಕೆಯಾಗಿದೆ. ಈ ಹಿನ್ನೆಲೆಯಲ್ಲಿ ಆತನ ಮನೆಗೆ ಹೋಗಿ ಕೇಳಿದಾಗ ಸಮೀರ್ ಮಲ್ಲಿಕ್, ಆತನ ಪತ್ನಿ ಶಾಫಿಯಾ, ಮಗ ಫೈಜಾನ್ ಅವರುಗಳು ನಾಗರಾಜು ಮತ್ತು ಹೇಮಾವತಿ ಅವರಿಗೆ ಬೆದರಿಕೆ ಹಾಕಿದ್ದಾರೆ ಎಂದು ನೀಡಿದ ದೂರನ್ನು ದಾಖಲಿಸಿಕೊಂಡಿರುವ ಹಾಸನ ಬಡಾವಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ಭಾರತ ಐಕ್ಯತಾ ಯಾತ್ರೆ ಸೆ.30ಕ್ಕೆ ಕರ್ನಾಟಕ ಪ್ರವೇಶ

● ಮೂರು ದಿನ ಮೈಸೂರಲ್ಲಿ ಸಂಚಾರ ● ಅ.2ರಂದು ಬದನವಾಳಲ್ಲಿ ಗಾಂಧಿ ಜಯಂತಿ



ಸುದ್ದಿಗೋಷ್ಠಿಗೂ ಮುನ್ನ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಸಭೆ ನಡೆಸಿದ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ

ಮೈಸೂರು, ಸೆ.22(ಎಸ್‌ಬಿಡಿ)– ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಜಮ್ಮು–ಕಾಶ್ಮೀರದ ಶ್ರೀನಗರದವರೆಗೆ ಹಮ್ಮಿಕೊಂಡಿರುವ 'ಭಾರತ ಐಕ್ಯತಾ(ಭಾರತ್ ಜೋಡೋ) ಯಾತ್ರೆ' ಸೆ.30ಕ್ಕೆ ಕರ್ನಾಟಕ ಪ್ರವೇಶಿಸಲಿದ್ದು, ಮೂರು ದಿನ ಮೈಸೂರು ಜಿಲ್ಲೆಯಲ್ಲಿ ಸಂಚರಿಸಲಿದೆ ಎಂದು ಯಾತ್ರೆಯ ಮೈಸೂರು ಲೋಕಸಭಾ ಕ್ಷೇತ್ರದ ಉಸ್ತುವಾರಿ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಗುರುವಾರ ಪಕ್ಷದ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಪ್ರಮುಖರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಐಕ್ಯತಾ ಯಾತ್ರೆ ಕೇರಳದ ನೀಲಂಬೂರ್‌ನಿಂದ ಸೆ30ರಂದು ಗುಂಡ್ಲುಪೇಟೆ ಮೂಲಕ ಕರ್ನಾಟಕ ಪ್ರವೇಶಿಸಲಿದೆ. ಅ.1ರಂದು ತಾಂಡವಪುರಕ್ಕೆ ಆಗಮಿಸಲಿದ್ದು, ಅ.2ರಂದು ಬದನವಾಳು ಖಾದಿ ಗ್ರಾಮೋದ್ಯೋಗ ಕೇಂದ್ರದಲ್ಲಿ ಗಾಂಧಿ ಜಯಂತಿ ಆಚರಣೆ ನಂತರ ಸಂಜೆ ತಾಂಡವಪುರದಲ್ಲಿ ಪಾದಯಾತ್ರೆ ನಡೆಸಿ ಅಲ್ಲಿಯೇ ವಾಸ್ತವ್ಯ ಹೂಡಲಾಗುವುದು. ಅ.3ರಂದು ಮೈಸೂರಿಗೆ ಆಗಮಿಸಿ ಸುಮಾರು 14 ಕಿ.ಮೀ. ಪಾದಯಾತ್ರೆ ಬಳಿಕ ಯಾತ್ರೆಯು ಶ್ರೀರಂಗಪಟ್ಟಣಕ್ಕೆ ತೆರಳಲಿದೆ ಮೈಸೂರಿನಲ್ಲಿ ಒಟ್ಟು 3 ದಿನ ಯಾತ್ರೆ ಸಂಚರಿಸಲಿದ್ದು, ಜಿಲ್ಲೆಯ 30 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಭಾಗಿಯಾಗಲಿದ್ದಾರೆ. ಯಾತ್ರೆಯ ಯಶಸ್ಸಿಗೆ ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ ಎಂದು ವಿವರಿಸಿದರು.

ಕಾಂಗ್ರೆಸ್ ಅಧಿಕಾರಕ್ಕಾಗಿ ಈ ಐಕ್ಯತಾ ಯಾತ್ರೆ ನಡೆಸುತ್ತಿಲ್ಲ. ಸಂವಿಧಾನ ಹಾಗೂ ಪ್ರಜಾಪ್ರಭುತ್ವಕ್ಕಿರುವ ಅಪಾಯದ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುವ ಉದ್ದೇಶದಿಂದ ಆರಂಭಿಸಲಾಗಿದೆ. ಕೇಂದ್ರ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಿಜೆಪಿಗೆ ಸಾಮಾಜಿಕ ಬದ್ಧತೆ, ಸಂವಿಧಾನದ ಮೇಲೆ ಗೌರವವಿಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೀಡಿದ ಯಾವ ಭರವಸೆಯೂ ಈವರೆಗೂ ಈಡೇರಿಲ್ಲ. ದೇಶದ ರೈತರ ಆದಾಯ ದ್ವಿಗುಣಗೊಳಿಸುವುದಾಗಿ ಹೇಳಿದ್ದರು. ಆದರೆ ರೈತರ ಆರ್ಥಿಕ ಸಂಕಷ್ಟ ಹೆಚ್ಚಾಗಿದೆ. ಹೀಗೆ ಸುಳ್ಳು ಭರವಸೆ ನೀಡಿ ಜನರ ಹಾದಿ ತಪ್ಪಿಸಲಾಗುತ್ತಿದೆ. ಅಭಿವೃದ್ಧಿ ವಿಚಾರವನ್ನು ಮರೆಮಾಚುವ ಸಲುವಾಗಿ ಭಾವನಾತ್ಮಕ ವಿಷಯಗಳನ್ನು ಮುನ್ನೆಲೆಗೆ ತರುತ್ತಿದ್ದಾರೆ. ದೇಶದ ಪ್ರಧಾನಿ ಹಾಗೂ ರಾಜ್ಯದ ಮುಖ್ಯಮಂತ್ರಿ ಆರ್‌ಎಸ್‌ಎಸ್ ಕಚೇರಿಗೆ ವಿಧೇಯರಾಗಿದ್ದಾರೆ ಹೊರತು ಆಡಳಿತ ನಡೆಸಲು ಪ್ರಬಲರಾಗಿಲ್ಲ. ಜನ ಇಂತಹ ಸರ್ಕಾರವನ್ನು ಮೊದಲು ಕಿತ್ತೊಗೆಯಬೇಕು ಎಂದರು.

ಈಶ್ವರಪ್ಪ ವಿರುದ್ಧ ಕಿಡಿ: ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಸೇರಿದಂತೆ ಬಿಜೆಪಿಯ ಹಲವು ನಾಯಕರ ಹೇಳಿಕೆಗಳನ್ನು ಗಮನಿಸಿದರೆ ಆ ಪಕ್ಷ ದಲಿತ ವಿರೋಧಿ ಎನ್ನುವುದು ಮತ್ತೆ ಸಾಬೀತಾಗುತ್ತದೆ. ದಲಿತರಲ್ಲಿ ಸಬಲರಾದವರಿಗೆ ಏಕೆ ಮೀಸಲಾತಿ ಬೇಕು? ಎಂದು ಈಶ್ವರಪ್ಪ ಪ್ರಶ್ನಿಸಿದ್ದಾರೆ. ಹಾಗಾದರೆ ಗೋವಿಂದ ಕಾರಜೋಳ, ರಮೇಶ್ ಜಿಗಜಿಣಗಿ ಅವರನ್ನೇಕೆ ಪಕ್ಷದಲ್ಲಿ ಇಟ್ಟುಕೊಂಡಿದ್ದಾರೆ?. ಕೋಲಾರದ ಮಾಲೂರಿನಲ್ಲಿ ದೇವರ ಕೋಲು ಮುಟ್ಟಿದ ಎಂಬ ಕಾರಣಕ್ಕೆ ಬಾಲಕನಿಗೆ ಥಳಿಸಿ, ದಂಡ ವಿಧಿಸಲಾಗಿದೆ. ಅಸ್ಪೃಶ್ಯತೆ ಇನ್ನೂ ಜೀವಂತವಾಗಿದೆ. ಈ ವಿಷಯದಲ್ಲಿ ಮಾನವ ಹಕ್ಕು ಉಲ್ಲಂಘನೆಯಾಗಿದೆ. ಬೇರೆ ಧರ್ಮಕ್ಕೆ ಮತಾಂತರವಾದ ದಲಿತರ ಸ್ಥಿತಿಗತಿ ಅವಲೋಕಿಸಲು ಸಮಿತಿ ರಚಿಸಬೇಕು ಎನ್ನುವ ಸರ್ಕಾರ, ಮೊದಲು ಹಿಂದೂ ಧರ್ಮದಲ್ಲಿರುವ ದಲಿತರ ಪರಿಸ್ಥಿತಿಯನ್ನು ಮನದಟ್ಟು ಮಾಡಿಕೊಳ್ಳಲಿ ಎಂದು ಆಗ್ರಹಿಸಿದರು.

ಮಾಜಿ ಶಾಸಕರಾದ ವಾಸು, ಎಂ.ಕೆ. ಸೋಮಶೇಖರ್, ಮಾಜಿ ಸಚಿವೆ ಉಮಾಶ್ರೀ, ಕಾಂಗ್ರೆಸ್ ನಗರಾಧ್ಯಕ್ಷ ಆರ್.ಮೂರ್ತಿ, ಗ್ರಾಮಾಂತರ ಜಿಲ್ಲಾ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರಮೌಳಿ, ಕೆಪಿಸಿಸಿ ವಕ್ತಾರ ಹೆಚ್.ಎ.ವೆಂಕಟೇಶ್, ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಮಂಜುಳಾ ಮಾನಸ, ಮುಖಂಡರಾದ ಮೋದಾಮಣಿ, ಬಿ.ಕೆ.ಪ್ರಕಾಶ್, ಅನಂತು, ಆರಿಫ್ ಹುಸೇನ್, ನಾರಾಯಣ, ಪುಷ್ಪಲತಾ ಚಿಕ್ಕಣ್ಣ, ಬಿ.ಎಂ.ರಾಮು, ಎಂ.ಶಿವಣ್ಣ, ಭಾಸ್ಕರ್ ಎಲ್.ಗೌಡ, ಈಶ್ವರ್ ಚಕ್ಕಡಿ, ಕೆ.ಮಹೇಶ್, ಎಚ್.ಎಂ.ಶಾಂತಕುಮಾರಿ, ಎಂ.ಪ್ರದೀಪ್‌ಕುಮಾರ್, ವರುಣಾ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

ಕೆಜಿ ಕೊಪ್ಪಲು, ಸರಸ್ವತಿಪುರಂನ ವಿವಿಧ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ

ಒಟ್ಟು 2.74 ಕೋಟಿ ವೆಚ್ಚದ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ ಶಾಸಕ ಎಲ್.ನಾಗೇಂದ್ರ



ಮೈಸೂರು,ಸೆ.22(ಪಿಎಂ)– ಮೈಸೂರಿನ ಚಾಮರಾಜ ಕ್ಷೇತ್ರದ ಸರಸ್ವತಿಪುರಂನ ವಿವಿಧ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಲ್.ನಾಗೇಂದ್ರ ಗುರುವಾರ ಚಾಲನೆ ನೀಡಿದರು.

ಕೆಜಿ ಕೊಪ್ಪಲಿನ ಸರಸ್ವತಿ ಟಾಕೀಸ್ ರಸ್ತೆಯ ಶ್ರೀ ಚಂದ್ರಮೌಳೇಶ್ವರ ದೇವಸ್ಥಾನದ ಬಳಿ ಹಾಗೂ ಸರಸ್ವತಿಪುರಂನ 14ನೇ ಮೇನ್‌ನ ಬೇಕ್ ಪಾಯಿಂಟ್ ಸಮೀಪ ಕಾಮಗಾರಿಗೆ ಚಾಲನೆ ನೀಡಲಾಯಿತು.

ಶಾಸಕರ ವಿವೇಚನಾ ಎಸ್‌ಎಫ್‌ಸಿ ಯೋಜನೆಯ ವಿಶೇಷ ಪ್ಯಾಕೇಜ್ ಅನುದಾನದ 2.74 ಕೋಟಿ ರೂ. ವೆಚ್ಚದಲ್ಲಿ ಮಹಾನಗರ ಪಾಲಿಕೆ ವತಿಯಿಂದ ಕಾಮಗಾರಿ ಕೈಗೆತ್ತಿಗೊಳ್ಳಲಾಗಿದೆ. ಕೆಜಿ ಕೊಪ್ಪಲಿನಲ್ಲಿ ವಿವಿಧ ರಸ್ತೆಗಳ ಅಭಿವೃದ್ಧಿ, ಚರಂಡಿ ನಿರ್ಮಾಣ ಹಾಗೂ ಸರಸ್ವತಿ ಪುರಂ 5,6,7 ಮತ್ತು 16ನೇ ಮುಖ್ಯರಸ್ತೆಗಳು, ಸರಸ್ವತಿಪುರಂನ 1 ಮತ್ತು 2ನೇ ಮೇನ್ ರಸ್ತೆಗಳು, 5 ಮತ್ತು 6ನೇ ಅಡ್ಡರಸ್ತೆ ಹಾಗೂ ಕ್ಲಬ್ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕರು ಚಾಲನೆ ನೀಡಿದರು.

ಪಾಲಿಕೆ ಸದಸ್ಯ ಶಿವಕುಮಾರ್, ಪಾಲಿಕೆ ಉಪ ಆಯುಕ್ತ ಮಹೇಶ್, ಚಾಮರಾಜ ಕ್ಷೇತ್ರದ ಬಿಜೆಪಿ ಉಪಾಧ್ಯಕ್ಷ ಶಿವಕುಮಾರ್, ಪ್ರಧಾನ ಕಾರ್ಯದರ್ಶಿ ರಮೇಶ್, ನಗರ ರೈತ ಮೋರ್ಚಾ ಅಧ್ಯಕ್ಷ ದೇವರಾಜ್, ವಾರ್ಡ್ ಅಧ್ಯಕ್ಷ ಕೃಷ್ಣಪ್ಪ, ಕೆಜಿ ಕೊಪ್ಪಲಿನ ಮುಖಂಡರಾದ ಸಂಜೀವ ಕೃಷ್ಣ ಮಂಜುನಾಥ್, ಚೌಡಪ್ಪ, ಅವಿನಾಶ್, ರವಿ, ಗೋಪಾಲ್, ಗುತ್ತಿಗೆದಾರ ಅರವಿಂದ್, ಪಾಲಿಕೆ ಅಭಿವೃದ್ಧಿ ಅಧಿಕಾರಿ ಸತ್ಯಮೂರ್ತಿ, ಇಂಜಿನಿಯರ್ ವೆಂಕಟೇಶ್ ಮತ್ತಿತರರು ಹಾಜರಿದ್ದರು.

ಭಾರತ್ ಜೋಡೋ ಪಾದಯಾತ್ರೆ ಐತಿಹಾಸಿಕವಾದುದು

ಮೈಸೂರು ಜಿಪಂ ಮಾಜಿ ಅಧ್ಯಕ್ಷ ಕೆ.ಮರೀಗೌಡ ಅಭಿಮತ



ಮೈಸೂರು, ಸೆ.22– ರಾಹುಲ್‌ಗಾಂಧಿಯವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಕೈಗೊಂಡಿರುವ 3700 ಕಿ.ಮೀ. ಭಾರತ್ ಜೋಡೋ ಪಾದಯಾತ್ರೆ ಐತಿಹಾಸಿಕ ಪಾದಯಾತ್ರೆಯಾಗಿದೆ ಎಂದು ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷ ಕೆ. ಮರೀಗೌಡ ತಿಳಿಸಿದರು.

ಚಾಮುಂಡೇಶ್ವರಿ ಕ್ಷೇತ್ರದ ದೂರ, ಸಿಂಧುವಳ್ಳಿಗಳಲ್ಲಿ ಭಾರತ್ ಜೋಡೋ ಯಾತ್ರೆ ಹಾಗೂ ಬೂತ್‌ಮಟ್ಟದ ಪದಾಧಿಕಾರಿಗಳ ಆಯ್ಕೆಯ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಭಾರತದ ಇತಿಹಾಸದಲ್ಲಿಯೇ ಇದುವರೆಗೆ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಯಾವ ಪಕ್ಷದ ಮುಖಂಡರು ಪಾದಯಾತ್ರೆ ಮಾಡಿಲ್ಲ. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರಗಳು ದೇಶದಲ್ಲಿ ಹಿಂದು ಮತ್ತು ಮುಸ್ಲಿಂ ಜನಾಂಗಗಳ ನಡುವೆ ಸಂಘರ್ಷ ಉಂಟುಮಾಡಿ, ಜಾತಿಜಾತಿಗಳ ನಡುವೆ ವಿಷಬೀಜ ಬಿತ್ತುತ್ತ ಅಶಾಂತಿ ಮೂಡಿಸುತ್ತಿದೆ. ಭ್ರಷ್ಟ ಬಿಜೆಪಿ ಸರ್ಕಾರದ ವಿರುದ್ಧ ಜನಜಾಗೃತಿ ಮೂಡಿಸಲು ರಾಹುಲ್‌ಗಾಂಧಿಯವರು ತಮಿಳುನಾಡು, ಕೇರಳ ಪಾದಯಾತ್ರೆ ಮುಗಿಸಿ ಕರ್ನಾಟಕದತ್ತ ಬರುತ್ತಿದ್ದು ಅಕ್ಟೋಬರ್ 2ರ ಗಾಂಧಿಜಯಂತಿಯ ದಿನ ಬದನವಾಳಿಗೆ ಭೇಟಿ ನೀಡಿ ನಂತರ ಕಡಕೊಳದಲ್ಲಿ ಸಭೆ ನಡೆಸಲಿದ್ದಾರೆ. ಈ ಬೃಹತ್ ಪಾದಯಾತ್ರೆಗೆ 20 ಸಾವಿರಕ್ಕೂ ಹೆಚ್ಚು ಜನರು ಆಗಮಿಸುತ್ತಿದ್ದು, ಎಲ್ಲರಿಗೂ ಊಟದ ವ್ಯವಸ್ಥೆ ಮಾಡಲಾಗುತ್ತಿದೆ. ಈ ಪಾದಯಾತ್ರೆಯಿಂದ ಕಾಂಗ್ರೆಸ್ ಪಕ್ಷ ಬಲಿಷ್ಠವಾಗಲಿದ್ದು, 2023ರ ಚುನಾವಣೆಯಲ್ಲಿ ರಾಜ್ಯದಲ್ಲಿ, 2024ಕ್ಕೆ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುವುದು ಖಚಿತವಾಗಿದ್ದು, ಅದಕ್ಕೆ ನಿಮ್ಮೆಲ್ಲರ ಸಹಕಾರಬೇಕಿದೆ. ಈ ಭಾರತ್ ಜೋಡೋ ಯಾತ್ರೆಯನ್ನು ಎಲ್ಲರೂ ಒಟ್ಟುಗೂಡಿ ಯಶಸ್ವಿಗೊಳಿಸಬೇಕೆಂದು ಮನವಿ ಮಾಡಿದರು.

ಸಭೆಯಲ್ಲಿ ಪಿ.ಎಲ್.ಡಿ. ಬ್ಯಾಂಕ್ ಅಧ್ಯಕ್ಷ ಡಿ.ಬಿ. ನಾಗರಾಜ್, ಗ್ರಾಪಂ. ಅಧ್ಯಕ್ಷೆ ಮಂಗಳಗೌರಿ, ಮಹಾದೇವಸ್ವಾಮಿ, ಗ್ರಾಪಂ. ಮಾಜಿ ಅಧ್ಯಕ್ಷ ನಂಜುಂಡಸ್ವಾಮಿ, ಗ್ರಾಪಂ. ಉಪಾಧ್ಯಕ್ಷ ಮಹಾದೇವಸ್ವಾಮಿ, ಅಸಂಘಟಿತ ಕಾರ್ಮಿಕ ಸಂಘದ ಅಧ್ಯಕ್ಷ ಕೆರೆಹುಂಡಿ ಮಹೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಗುರುಸ್ವಾಮಿ, ಎನ್.ಎಸ್.ಯು.ಐ. ಅಧ್ಯಕ್ಷ ಕೋಟೆಹುಂಡಿ ಮನೋಜ್, ಮುಖಂಡರಾದ ಟಿ.ಎಸ್. ನಂಜುಂಡಸ್ವಾಮಿ, ನಂದೀಶ್, ಡಿ.ಎಂ. ಮಂಜು, ಸಿದ್ದನಾಯ್ಕ, ಚಿನ್ನಂಕನಾಯ್ಕ, ಡಿ.ಎಂ. ಅವಿನಾಶ್ ಕುಬೇರ, ಮಹಾದೇವಸ್ವಾಮಿ, ಶಿವನಾಗು, ಪುಟ್ಟಸ್ವಾಮಿ, ಚಾಮುಂಡಿ ಉಪಸ್ಥಿತರಿದ್ದರು.

ಎನ್‌ಐಎ, ಇಡಿ ದಾಳಿಗೆ ಎಸ್‌ಡಿಪಿಐ ಖಂಡನೆ



ಮೈಸೂರು, ಸೆ.22(ಜಿಎ)– ಮಂಗಳೂರಿನ ಎಸ್‌ಡಿಪಿಐ ಜಿಲ್ಲಾ ಕಚೇರಿ ಸೇರಿದಂತೆ ದೇಶಾದ್ಯಂತ ಇಂದು ಮುಂಜಾನೆಯೇ ಪಿಎಫ್‌ಐ ನಾಯಕರ ಕಚೇರಿ, ಮನೆಗಳ ಮೇಲೆ ದಾಳಿ ಮಾಡಿ ಕೆಲವರನ್ನು ಬಂಧಿಸಿರುವುದನ್ನು ಡೆಮಾಕ್ರಟಿಕ್ ಪಾರ್ಟಿ ಆಫ್ ಇಂಡಿಯಾ (ಎಸ್‌ಡಿಪಿಐ) ತೀವ್ರವಾಗಿ ಖಂಡಿಸುತ್ತದೆ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಹೇಳಿದರು.

ನಗರದ ಉದಯಗಿರಿಯಲ್ಲಿರುವ ಎಸ್‌ಡಿಪಿಐ ಕಚೇರಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರವು ಕಳೆದ ಎಂಟು ವರ್ಷಜ ಆಡಳಿತಾವಧಿಯಲ್ಲಿ ನಿರುದ್ಯೋಗ, ಆರ್ಥಿಕ ದುಸ್ಥಿತಿ ಸೇರಿದಂತೆ ಅನೇಕ ಸಮಸ್ಯೆಗಳಿಂದ ದೇಶದ ಪರಿಸ್ಥಿತಿ ಹದಗೆಟ್ಟಿದೆ. ಇದನ್ನು ಪ್ರಶ್ನಿಸುವವರನ್ನು ಹತ್ತಿಕ್ಕುವ ಕೆಲಸಗಳು ದೇಶದಲ್ಲಿ ನಡೆಯುತ್ತಿದ್ದು, ಸರ್ಕಾರವು ತನಿಖಾ ಸಂಸ್ಥೆಗಳನ್ನು ಬಳಸಿಕೊಂಡು ದೇಶದಲ್ಲಿ ಭಯದ ವಾತಾವರಣ ಸೃಷ್ಟಿಸುತ್ತಿದೆ. ಸರ್ಕಾರದ ವಿರುದ್ಧ ಮಾತನಾಡುವ ಭಿನ್ನಧ್ವನಿಯನ್ನು ಹತ್ತಿಕ್ಕುವ ಕೆಲಸವನ್ನು ಸರ್ಕಾರ ಮಾಡುತ್ತಿದೆ ಎಂದರು.

ಸರ್ಕಾರವು ತನ್ನ ರಾಜಕೀಯ ವಿರೋಧಿಗಳನ್ನು ಹೆದರಿಸುವ ಉದ್ದೇಶದಿಂದ ಎನ್‌ಐಎ ಮತ್ತು ಇಡಿಯನ್ನು ಬಳಸಿಕೊಂಡು ನಾಯಕರ ಮನೆಗಳ ಮೇಲೆ ದಾಳಿ ಮಾಡಿ ಅವರನ್ನು ಬಂಧಿಸಲಾಗಿದೆ. ಈ ರೀತಿಯ ಪ್ರಜಾಪ್ರಭುತ್ವ ವಿರೋಧಿ ಚಟುವಟಿಕೆಗಳನ್ನು ನಡೆಸುತ್ತಿದ್ದರೂ ವಿರೋಧ ಪಕ್ಷಗಳು ಧ್ವನಿ ಎತ್ತದಿರುವುದು ವಿಷಾದದ ಸಂಗತಿ ಎಂದರು.

ಎಸ್‌ಡಿಪಿಐ ಸಂಸ್ಥೆಯು ಭಾರತದ ಸಂವಿಧಾನ ಮತ್ತು ಚುನಾವಣಾ ಆಯೋಗದ ನಿಯಮಗಳಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಮುಕ್ತವಾಗಿ ಯಾರು ಬೇಕಾದರೂ ಭೇಟಿ ನೀಡಿ ಪರಿಶೀಲನೆ ಮಾಡಬಹುದಾಗಿದೆ. ಇವರು ಬರುತ್ತಾರೆ ಎಂದು ತಿಳಿಸಿದ್ದರೆ, ನಾವೇ ಸ್ವಯಂಪ್ರೇರಣೆಯಿಂದ ಅವರಿಗೆ ಬಾಗಿಲು ತೆಗೆದು ಬರಮಾಡಿಕೊಳ್ಳುತ್ತಿದ್ದೆವು. ಆದರೆ, ಯಾವುದೇ ಮಾಹಿತಿ ನೀಡದೆ ಬೆಳಗಿನ ಜಾವ ಏಕಾಏಕಿ ಕಚೇರಿಯ ಬಾಗಿಲನ್ನು ಒಡೆದು ಪರಿಶೀಲಿಸಿರುವುದು ಸಂವಿಧಾನದ ವಿರೋಧಿಯಾಗಿದೆ.

ಕೇಂದ್ರ ಸರ್ಕಾರದ ಆಡಳಿತ ನೀತಿಗಳನ್ನು ವಿರೋಧಿಸಿ ಧ್ವನಿ ಎತ್ತಿದವರಿಗೆ ಬೆದರಿಸುತ್ತಾರೆ ಅಥವಾ ಖರೀದಿಗೆ ಮುಂದಾಗುತ್ತಾರೆ. ಅವರ ಬೆದರಿಕೆಗೆ ಬಗ್ಗದ ಹಿನ್ನೆಲೆಯಲ್ಲಿ ನಮ್ಮ ಮೇಲೆ ದಾಳಿ ನಡೆದಿದೆ. ನಮಗೆ ದೇಶದ ನ್ಯಾಯಾಂಗ ವ್ಯವಸ್ಥೆಯ ಮೇಲೆ ನಂಬಿಕೆ ಇದ್ದು, ಸಂವಿಧಾನದ ಪ್ರಕಾರ ಮುನ್ನಡೆಯುತ್ತೇವೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ರಫತ್ ಖಾನ್, ಜಿಲ್ಲಾ ಉಪಾಧ್ಯಕ್ಷ ಎನ್.ಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೊಹಮ್ಮದ್ ಸಫಿ ಉಲ್ಲ ಉಪಸ್ಥಿತರಿದ್ದರು.


ಇಂದು ಕಾರಂತರ ನೆನಪಿನಲ್ಲಿ... ವಿಚಾರ ಸಂಕಿರಣ

ಮೈಸೂರು, ಸೆ. 22– ರಂಗಾಯಣ ಮೈಸೂರು ವತಿಯಿಂದ ಭಾರತೀಯ ರಂಗ ಸಂಗೀತೋತ್ಸವದ ಅಂಗವಾಗಿ ಭೂಮಿಗೀತದಲ್ಲಿ ನಾಳೆ ಮಧ್ಯಾಹ್ನ 3.30ಕ್ಕೆ ಕಾರಂತರ ನೆನಪಿನಲ್ಲಿ... ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿದೆ.

ಅಧ್ಯಕ್ಷತೆಯನ್ನು ಹಿರಿಯ ರಂಗಕರ್ಮಿ ಗುರುರಾಜ ಮಾರ್ಪಳ್ಳಿ ವಹಿಸಲಿದ್ದಾರೆ. ರಂಗಭೂಮಿ ಆಸ್ತಿ ಬಿ.ವಿ. ಕಾರಂತ ಕುರಿತು ರಂಗಚಿಂತಕರು, ವಿಮರ್ಶಕರಾದ ನಾರಾಯಣ ರಾಯಚೂರ್, ಗಡಿಯಾಚೆ ಕಾರಂತ ರಂಗ ಚಳುವಳಿ ಕುರಿತು ರಂಗ ನಿರ್ದೇಶಕ ಕಾಸರಗೋಡು ಚಿನ್ನಾ ಮಾತನಾಡಲಿದ್ದಾರೆ.

ಮೈಸೂರಲ್ಲಿ ಚಲನಚಿತ್ರ ನಿರ್ಮಾಣ ಪೂರ್ವ ತಯಾರಿ ಕಾರ್ಯಾಗಾರ ಆರಂಭ

ಚಿತ್ರನಟ, ನಿರ್ದೇಶಕರಿಂದ ಉದ್ಘಾಟನೆ



ಮೈಸೂರು, ಸೆ.22(ಆರ್‌ಕೆ)–ಮೈಸೂರಿನ ಮಾನಸ ಗಂಗೋತ್ರಿಯಲ್ಲಿರುವ ರಾಣಿಬಹದ್ದೂರ್ ಸಭಾಂಗಣದಲ್ಲಿ 'ಚಿತ್ರ ನಿರ್ಮಾಣ ಪೂರ್ವ ತಯಾರಿ' ಕುರಿತ ಮೂರು ದಿನಗಳ ಕಾರ್ಯಾಗಾರ ಇಂದಿನಿಂದ ಆರಂಭವಾಯಿತು.

ದಸರಾ ಚಲನಚಿತ್ರೋತ್ಸವ ಉಪ ಸಮಿತಿ ವತಿಯಿಂದ ಆಯೋಜಿಸಿರುವ ಕಾರ್ಯಾಗಾರವನ್ನು ಖ್ಯಾತ ಹಿರಿಯ ನಟ, ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್ ಅವರು ಉದ್ಘಾಟಿಸಿದರು. ನಂತರ ಕಲಾವಿದರು, ಚಲನಚಿತ್ರ ನಿರ್ದೇಶನದಲ್ಲಿ ಆಸಕ್ತಿ ಹೊಂದಿರುವವರನ್ನುದ್ದೇಶಿಸಿ ಮಾತನಾಡಿದ ಅವರು, ಸಿನೆಮಾ ನಟನೆ, ನಿರ್ದೇಶನ ಸಂಬಂಧ ಕಲ್ಪಿಸುವ ಯಾವುದೇ ವೇದಿಕೆ ಇರಲಿ, ಅದನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡರೆ ಮಾತ್ರ ನಿಮ್ಮ ಗುರಿ, ಉದ್ದೇಶ ತಲುಪಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಕೇವಲ 3 ದಿನದಲ್ಲಿ ಸಿನೆಮಾ ತಯಾರಿಸಲು ತರಬೇತಿ ಪಡೆದರೆ ಸಾಕು ಎಂಬ ಮನೋಭಾವನೆ ಸರಿಯಲ್ಲ. ನಿರಂತರ ಕಲಿಕೆ, ಅಭ್ಯಾಸ ಹಾಗೂ ಆಸಕ್ತಿ ಬೇಕು. ಬೆಂಗಳೂರಲ್ಲಿ ನಾನೂ ಸಹ ಒಂದು ಸಿನೆಮಾ ತರಬೇತಿ ಶಾಲೆ ನಡೆಸುತ್ತಿದ್ದೇನೆ. ಅದರ ಕಷ್ಟ–ನಷ್ಟಗಳ ಅರಿವಿದೆ ಎಂದ ಅವರು, ಎಲ್ಲೆಲ್ಲಿ ಕಲಿಯಲು ಅವಕಾಶವಿದೆಯೋ ಆ ವೇದಿಕೆಗಳನ್ನು ಬಳಸಿಕೊಂಡು ತರಬೇತಿ ಪಡೆಯಬೇಕೆಂದು ಕರೆ ನೀಡಿದರು.

ಪ್ರತಿಭೆ ಎಂಬುದು ವ್ಯಕ್ತಿಗತವಾದದ್ದು. ಸುಪ್ತವಾಗಿ ಅಡಗಿರುವ ಕಲೆಯನ್ನು ಆಸಕ್ತಿಯಿಂದ ಹೊರ ಹಾಕಿದರೆ ಪರಿಪಕ್ವ ಕಲಾವಿದನಾಗಬಹುದು. ಪ್ರತಿಭೆಯನ್ನು ಯಾರಿಂದಲೂ ಕಿತ್ತುಕೊಳ್ಳಲಾಗುವುದಿಲ್ಲ. ಸೃಜನಶೀಲತೆಯಿಂದ ಅದನ್ನು ಹೊರ ಹಾಕಬೇಕು. ಸಮಾಜದೊಂದಿಗೆ ಒಡನಾಟವಿರಿಸಿಕೊಂಡು ಜನರೊಟ್ಟಿಗೇ ಕಲಿತರೆ ಮಾತ್ರ ಒಳ್ಳೆಯ ನಟ, ರಂಗಭೂಮಿ ಕಲಾವಿದನಾಗಲು ಸಾಧ್ಯ ಎಂದು ನಾಗತಿಹಳ್ಳಿ ಚಂದ್ರಶೇಖರ್ ಇದೇ ಸಂದರ್ಭ ನುಡಿದರು.

ಸಿನೆಮಾ ಎಂಬುದು ಸಾಹಿತ್ಯ, ಸಂಗೀತ, ನೃತ್ಯ, ಸಾಹಸಗಳ ಸಂಗಮ. ಅದೊಂದು ಪ್ರಭಾವಶಾಲಿ ಮಾಧ್ಯಮವೂ ಆಗಿದ್ದು, ಇತ್ತೀಚಿನ ದಿನಗಳಲ್ಲಿ ವೆಬ್ ಸೀರೀಸ್, ಕಿರುಚಿತ್ರ, ಡಾಕ್ಯುಮೆಂಟರಿಗಳೂ ಸಹ ಮುನ್ನೆಲೆಗೆ ಬರುತ್ತಿವೆ. ಅವುಗಳ ಮೂಲಕ ಬೆಳೆಯಲು ನಿಮಗೆ ವಿಫುಲ ಅವಕಾಶಗಳಿವೆ. ಅದೇ ರೀತಿ ವ್ಯಾಪಕ ಸ್ಪರ್ಧೆಯೂ ಇರುವುದರಿಂದ ಅದರಲ್ಲಿ ಯಶಸ್ಸು ಪಡೆಯಬೇಕಾದರೆ ಶ್ರಮ ಪಡಲೇಬೇಕು ಎಂದು ನುಡಿದರು.

ಸಿನೆಮಾ ಒಂದು ವಿಭಿನ್ನ ಮಾಧ್ಯಮ. ಇದು ಸಾಹಿತ್ಯ, ಸಂಗೀತ, ನೃತ್ಯ, ಶಿಲ್ಪಕಲೆ, ಚಿತ್ರಕಲೆಗಳಿಗಿಂತ ಹೊಸತನ್ನು ಕಲಿಸುವ, ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ, ವಿಶೇಷ ಸಂಪರ್ಕ ಸಾಧಿಸುವ ಹಾಗೂ ಬಹು ಪ್ರತಿಭೆಗಳನ್ನು ಬೆಳಕಿಗೆ ತರುವ ಸಾಧನವೂ ಆಗಿರುವುದರಿಂದ ಯುವ ಕಲಾಸಕ್ತರು ಲಭ್ಯವಿರುವ ಎಲ್ಲಾ ಅವಕಾಶಗಳನ್ನು ಬಳಸಿಕೊಂಡು ಬೆಳೆಯಬೇಕೆಂದು ನಾಗತಿಹಳ್ಳಿ ಚಂದ್ರಶೇಖರ್ ಇದೇ ಸಂದರ್ಭ ಕರೆ ನೀಡಿದರು.

ದಸರಾ ಚಲನ ಚಿತ್ರೋತ್ಸವ ಉಪ ಸಮಿತಿ ವಿಶೇಷಾಧಿಕಾರಿ ಆರ್.ಶೇಷ, ಕಾರ್ಯದರ್ಶಿ ಟಿ.ಕೆ.ಹರೀಶ್, ಮಂಸೂರೆ, ಪ್ರವೀಣ್ ಕೃಪಾಕರ್ ಸೇರಿದಂತೆ ಹಲವರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

ಅರಮನೆ, ಗಜಪಡೆ ಸಿಬ್ಬಂದಿಗೆ ಉಚಿತ ಆರೋಗ್ಯ ತಪಾಸಣೆ

ಅರಮನೆ ಮಂಡಳಿ, ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ ಸಹಯೋಗದಲ್ಲಿ ಶಿಬಿರ



ಮೈಸೂರು,ಸೆ.22(ಪಿಎಂ)– ದಸರಾ ಪ್ರಯುಕ್ತ ವಿಜಯನಗರ 3ನೇ ಹಂತದ ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ ಹಾಗೂ ಅರಮನೆ ಮಂಡಳಿ ಜಂಟಿ ಆಶ್ರಯದಲ್ಲಿ ಅರಮನೆ ಸಿಬ್ಬಂದಿ, ಮಾವುತರು, ಕಾವಾಡಿಗಳಿಗಾಗಿ ಬುಧವಾರ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಉದ್ಘಾಟಿಸಿದರು.

ಮೈಸೂರು ಅರಮನೆ ಮಂಡಳಿ ಆವರಣದಲ್ಲಿ ಶಿಬಿರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ವರ್ಷಪೂರ್ತಿ ಕಾಡಿನಲ್ಲಿರುವ ಮಾವುತರು, ಕಾವಾಡಿಗಳೂ ಮುಂಚೂಣಿಯಲ್ಲಿ ದುಡಿಯುವ ಶ್ರಮಜೀವಿಗಳಾಗಿದ್ದಾರೆ. ಇವರ ಆರೋಗ್ಯ ಕಾಪಾಡುವುದು ಅತಿ ಮುಖ್ಯವಾಗಿದೆ. ಇವರಿಗೆ ವರ್ಷಪೂರ್ತಿ ಆರೋಗ್ಯ ಸೇವೆ ನೀಡಬೇಕೆಂದು ಸಲಹೆ ನೀಡಿದರು.

ಕ್ಲಿಯರ್‌ಮೆಡಿ ರೇಡಿಯಂಟ್ ಆಸ್ಪತ್ರೆ ಮುಖ್ಯ ವ್ಯವಸ್ಥಾಪಕ ಎ.ಆರ್.ಮಂಜುನಾಥ್ ಮಾತನಾಡಿ, ಕೋವಿಡ್‌ನಂತಹ ಸಾಂಕ್ರಾಮಿಕ ಸೋಂಕು ಇನ್ನೂ ಸಂಪೂರ್ಣ ದೂರವಾಗಿಲ್ಲ ಹಾಗಾಗಿ ಪ್ರತಿಯೊಬ್ಬರು ಮುನ್ನೆಚ್ಚರಿಕೆ ಕ್ರಮಗಳಿಗೆ ಆದ್ಯತೆ ನೀಡಬೇಕು ಎಂದರು.

ಆಸ್ಪತ್ರೆ ವತಿಯಿಂದ ಅರಮನೆ ಸಿಬ್ಬಂದಿ, ಮಾವುತರು, ಕಾವಾಡಿಗಳಿಗೆ ಉಚಿತ ಆರೋಗ್ಯ ತಪಾಸಣೆ ಮಾಡಿಸಲಾಗುತ್ತಿದೆ. ನಾಡದೇವತೆ ಚಾಮುಂಡೇಶ್ವರಿ ತಾಯಿ ಹೊತ್ತ ಜಂಬೂಸವಾರಿ ಸುಗಮವಾಗಿ ಸಾಗಬೇಕಾದರೆ ಹಾಗೂ ನವರಾತ್ರಿ ವಿಶೇಷ ಪೂಜೆಗಳು ನಿರ್ವಿಘ್ನವಾಗಿ ನಡೆಯಬೇಕಾದರೆ ಈ ಶ್ರಮಜೀವಿಗಳ ಸೇವೆ ಮುಖ್ಯವಾಗಿದೆ ಹೀಗಾಗಿ ಇವರ ಆರೋಗ್ಯ ಕಾಪಾಡುವ ನಿಟ್ಟಿನಲ್ಲಿ ಈ ತಪಾಸಣಾ ಶಿಬಿರ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಬೆಳಗ್ಗೆ 9.30ರಿಂದ ಮಧ್ಯಾಹ್ನ 3ರವರೆಗೆ ಅರಮನೆ ಮಂಡಳಿ ಕಚೇರಿ ಆವರಣದಲ್ಲಿ ರಕ್ತದೊತ್ತಡ, ಮಧುಮೇಹ, ಇಸಿಜಿ, ಎಕೊ, ಕಣ್ಣು, ಡೆಂಟಲ್, ಜನರಲ್ ಫಿಜಿಷಿಯನ್, ಮೂಳೆ, ಕಿಡ್ನಿಗೆ ಸಂಬಂಧಿಸಿದ ಪರೀಕ್ಷೆಗಳನ್ನು ಮಾಡಲಾಯಿತು.

ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ ಸೇರಿದಂತೆ ಮತ್ತಿತರರು ಹಾಜರಿದ್ದರು. ಜನರಲ್ ಫಿಜಿಷಿಯನ್ ಡಾ. ಶ್ರೀನಿವಾಸ್ ವೆಂಕಟರಾಮ್, ಮೆಡಿಕಲ್ ಅಂಕಾಲಜಿಸ್ಟ್ ಡಾ.ಅವಿನಾಶ್, ಡಾ.ಪಿ.ಶ್ರೀನಿವಾಸನ್, ಡಾ.ರಾಮಕೃಷ್ಣ, ಸರ್ಜಿಕಲ್ ಅಂಕಾಲಜಿಸ್ಟ್ ಡಾ.ನಿಶ್ಚಲ್‌ರಾಜ್, ಮೂಳೆರೋಗ ತಜ್ಞ ಡಾ.ಉಮೇಶ್ ಚೌಡಯ್ಯ, ಎಮರ್ಜೆನ್ಸಿ ಫಿಜಿಷಿಯನ್ ಡಾ.ಸಯ್ಯದ್ ತಪಾಸಣೆ ನಡೆಸಿದರು.

ಚೀತಾ ಪ್ರಾಜೆಕ್ಟ್‌ನ ಮುಖ್ಯ ತಂಡದಲ್ಲಿ ಕೊಡಗಿನ ವನ್ಯಜೀವಿ ಜೀವಶಾಸ್ತ್ರಜ್ಞ


ವಿಶೇಷ ವಿಮಾನದಲ್ಲಿ ಭಾರತಕ್ಕೆ ಸ್ಥಳಾಂತರಿಸುವ ಮುನ್ನ ವನ್ಯಜೀವಿ ಜೀವಶಾಸ್ತ್ರಜ್ಞ ಸಿ.ಎಂ.ಬಿಪಿನ್ ಹಾಗೂ ಅವರ ಸಹೋದ್ಯೋಗಿ ಚೀತಾಗೆ ಲಸಿಕೆ ನೀಡಿದರು.

ಮೈಸೂರು, ಸೆ.22– ನಮೀಬಿಯಾದಿಂದ ತಂದ 8 ಚೀತಾಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಸೆ.17 ರಂದು ತಮ್ಮ ಹುಟ್ಟುಹಬ್ಬದ ಸಂದರ್ಭದಲ್ಲಿ ಮಧ್ಯಪ್ರದೇಶದ ಕುನೋ ನ್ಯಾಷನಲ್ ಪಾರ್ಕ್‌ಗೆ ಬಿಡುಗಡೆ ಮಾಡಿದ ಪ್ರಾಜೆಕ್ಟ್ ಚೀತಾ ತಂಡದಲ್ಲಿ ಕೊಡಗಿನ ವನ್ಯಜೀವಿ ಜೀವಶಾಸ್ತ್ರಜ್ಞ ಮತ್ತು ಪರಿಸರ ತಜ್ಞರೊಬ್ಬರು ಕೂಡ ಪ್ರಮುಖ ಪಾತ್ರ ವಹಿಸಿದ್ದರು.

ಚೀತಾ ಯೋಜನೆಯ ಪ್ರಮುಖ ವಿಜ್ಞಾನಿ ಮತ್ತು ಭಾರತದ ವನ್ಯಜೀವಿ ಸಂಸ್ಥೆಯ ಡೀನ್ ಡಾ. ಯದ್ವೇಂದ್ರದೇವ್ ವಿಕ್ರಮಸಿನ್ಹ್ ಝಾಲಾ ನೇತೃತ್ವದ ತಂಡದಲ್ಲಿ ಕೊಡಗು ಜಿಲ್ಲೆ ಕಾನೂರಿನ ವಾಸಿ ಸಿ.ಎಂ. ಬಿಪಿನ್ ಅವರು ಪ್ರಮುಖ ನಿರ್ವಹಣಾ ತಂಡದ ಭಾಗವಾಗಿದ್ದಾರೆ.

ಪ್ರಾಜೆಕ್ಟ್ ಚೀತಾವು ಪ್ರಪಂಚದ ಮೊದಲ ಅಂತರ್–ಖಂಡಗಳ ದೊಡ್ಡ ಮಾಂಸಾಹಾರಿ ವನ್ಯಜೀವಿಗಳ ಸ್ಥಳಾಂತರ ಯೋಜನೆಯಾಗಿದ್ದು, ಅಳಿವಿನಂಚಿನಲ್ಲಿರುವ ಚೀತಾಗಳನ್ನು ಭಾರತದಲ್ಲಿ ಮತ್ತೆ ಪರಿಚಯಿಸುವ ಮುನ್ನ ಅವರು ಕ್ಷೇತ್ರ ಕಾರ್ಯಾಚರಣೆ ಮತ್ತು ನೆಲದ ಕುರಿತು ವ್ಯಾಪಕ ಅಧ್ಯಯನ ನಡೆಸಿದರು.

ಪರಿಸರ ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದ ಅಡಿಯಲ್ಲಿ ಕಾರ್ಯ ನಿರ್ವಹಿಸುವ ಡೆಹ್ರಾಡೂನ್‌ನಲ್ಲಿರುವ ವನ್ಯಜೀವಿ ಸಂಶೋಧನೆ ಮತ್ತು ನೈಸರ್ಗಿಕ ಸಂಪನ್ಮೂಲ ಸೇವಾ ಸ್ವಾಯತ್ತ ಸಂಸ್ಥೆಯಲ್ಲಿ ಪ್ರಾಜೆಕ್ಟ್ ಅಸೋಸಿಯೇಟ್ ಆಗಿ ಬಿಪಿನ್ ಅವರು ಚೀತಾ ಯೋಜನೆಯಡಿ 2011ರಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ. ಬಿಪಿನ್ ಅವರ ಹೆಸರು ಪ್ರಾಜೆಕ್ಟ್‌ನ ಸಮೀಕ್ಷಾ ತಂಡದಲ್ಲಿ ಪ್ರಮುಖವಾಗಿದೆ.

ದಕ್ಷಿಣ ಕೊಡಗಿನ ಪೊನ್ನಂಪೇಟೆ ಸಮೀಪದ ಕಾನೂರು ಗ್ರಾಮದವರಾದ ಬಿಪಿನ್ ಅವರು ಇಂಡಸ್ಟ್ರಿಯಲ್ ಇಂಜಿನಿಯರಿಂಗ್ ಮ್ಯಾನೇಜ್‌ಮೆಂಟ್‌ನಲ್ಲಿ ಪದವೀಧರರಾಗಿದ್ದು, ವನ್ಯಜೀವಿ ಮತ್ತು ಪರಿಸರವನ್ನು ತಮ್ಮ ಹವ್ಯಾಸವಾಗಿ ಮುಂದುವರಿಸಿದ್ದಾರೆ. ಬಿಪಿನ್ ಅವರು ತಮ್ಮ ಶಾಲಾ ಶಿಕ್ಷಣವನ್ನು ವಿರಾಜಪೇಟೆಯ ಸೇಂಟ್ ಆನ್ಸ್ ಶಾಲೆಯಲ್ಲಿ ಮತ್ತು ಕಾಲೇಜು ಶಿಕ್ಷಣವನ್ನು ಅಲೈಕೆಯಲ್ಲಿನ ಸತ್ಯ ಸೇವಾ ಲೋಕ ಸೇವಾ ಟ್ರಸ್ಟ್‌ನಲ್ಲಿ ಪೂರೈಸಿದ್ದಾರೆ. ಇವರ ತಂದೆ ಮೊನ್ನಪ್ಪ ಮತ್ತು ತಾಯಿ ತಾರಾ ಮೊನ್ನಪ್ಪ (ನಿವೃತ್ತ ಉಪಾಧ್ಯಾಯರು) ಕಾನೂರಿನಲ್ಲಿ ವಾಸವಾಗಿದ್ದಾರೆ. ಸಹೋದರ ಸಿ.ಎಂ. ಬಿಷನ್ ಮೊನ್ನಪ್ಪ ಆರ್ಥೋಪೆಡಿಕ್ ಡಾಕ್ಟರ್ ಆಗಿದ್ದಾರೆ.

ಇಂಜಿನಿಯರ್‌ನಿಂದ ಪರಿಸರ ವಿಜ್ಞಾನಿ

ಮಧ್ಯಪ್ರದೇಶದ ಕುನೋ ನ್ಯಾಷನಲ್ ಪಾರ್ಕ್‌ನಲ್ಲಿ ಚೀತಾಗಳ ನಿರ್ವಹಣೆ ಮಾಡುತ್ತಿರುವ ಬಿಪಿನ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಬೆಂಗಳೂರಿನ ಆರ್.ವಿ. ಕಾಲೇಜಿನಲ್ಲಿ ಇಂಜಿನಿಯರಿಂಗ್ ಪದವಿ ಮುಗಿಸಿದ ನಂತರ ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಕಂಪನಿಯೊಂದರಲ್ಲಿ ಕಾರ್ಯ ನಿರ್ವಹಿಸಿದ್ದರೂ, ಪರಿಸರ ಮತ್ತು ವನ್ಯಜೀವಿ ನನ್ನ ಹವ್ಯಾಸವಾಗಿತ್ತು. ನಾನು ಕಾರ್ಯ ನಿರ್ವಹಿಸುತ್ತಿದ್ದ ಎಲೆಕ್ಟ್ರಾನಿಕ್ಸ್ ಕಂಪನಿಯಲ್ಲಿನ ಉಸಿರುಗಟ್ಟಿದ ವಾತಾವರಣದಿಂದಾಗಿ ಆ ಕೆಲಸವನ್ನು ಬಿಟ್ಟು 2004ರಲ್ಲಿ ಬೆಂಗಳೂರಿನ ವನ್ಯಜೀವಿ ಅಧ್ಯಯನ ಕೇಂದ್ರದಲ್ಲಿ ಸಂರಕ್ಷಣಾ ಮತ್ತು ಪರಿಸರ ತಂಡವನ್ನು ಸೇರಿಕೊಂಡು, ಕರ್ನಾಟಕದಲ್ಲಿ ಹುಲಿಗಳ ನಿರ್ವಹಣೆ ಮತ್ತು ಅದರ ಸಂಖ್ಯೆ ಹೆಚ್ಚಳದ ಬಗ್ಗೆ ಕೆಲಸವನ್ನು ಆರಂಭಿಸಿದೆ. ಈ ಅವಧಿಯಲ್ಲಿ, ವನ್ಯಜೀವಿ ವಿಜ್ಞಾನ ಮತ್ತು ಪ್ರಕೃತಿ ಸಂರಕ್ಷಣೆಯಲ್ಲಿ ಶಿಕ್ಷಣ, ಉತ್ತಮ–ಸಜ್ಜುಗೊಳಿಸುವಿಕೆ ಮತ್ತು ತರಬೇತಿಯ ಅಗತ್ಯವನ್ನು ಅರಿತುಕೊಂಡು ವನ್ಯಜೀವಿ ಜೀವಶಾಸ್ತ್ರದಲ್ಲಿ ಎಂ.ಎಸ್ಸಿ ಪದವಿ ಪೂರ್ಣಗೊಳಿಸಿದೆ ಎಂದು ಬಿಪಿನ್ ಹೇಳಿದರು.

ಬಳಿಕ 2008ರಲ್ಲಿ ಮಾಸ್ಟರ್ ಪದವಿಗಾಗಿ ಬಿಪಿನ್ ಅವರು ಬೆಂಗಳೂರಿನ ನ್ಯಾಷನಲ್ ಸೆಂಟರ್ ಫಾರ್ ಬಯೋಲಾಜಿಕಲ್ ಸೈನ್ಸ್ ಸಂಸ್ಥೆಗೆ ಸೇರಿಕೊಂಡರು. ತರುವಾಯ 2011ರಲ್ಲಿ ಡೆಹ್ರಾಡೂನ್ ವೈಲ್ಡ್‌ಲೈಫ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾಗೆ ಸೇರಿಕೊಂಡು ಪ್ರಾಜೆಕ್ಟ್ ಚೀತಾ ಯೋಜನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರು.


ಸಿ.ಎಂ. ಬಿಪಿನ್

ಯೋಜನೆಯ ಭಾಗವಾಗಿ ಬಿಪಿನ್ ಅವರು ರಾಜಸ್ಥಾನ್, ಗುಜರಾತ್, ಚತ್ತೀಸ್‌ಘಡ್, ಉತ್ತರಪ್ರದೇಶ ಮತ್ತು ಮಧ್ಯಪ್ರದೇಶ ರಾಜ್ಯಗಳ ಭೂ ಪ್ರದೇಶಗಳ ಅಧ್ಯಯನ ಮಾಡಿದರು. ಭಾರತದಲ್ಲಿ ಚೀತಾ ಪುನಃ ಪರಿಚಯಿಸಲು 10 ಸೂಕ್ತ ಪ್ರದೇಶಗಳು ಗುರುತಿಸಿ, ಮಧ್ಯ ಪ್ರದೇಶದ ಕುನೋ ನ್ಯಾಷನಲ್ ಪಾರ್ಕ್, ರಾಜಸ್ಥಾನದ ಶಾಗರ್ ಲ್ಯಾಂಡ್‌ಸ್ಕೇಪ್ ಮತ್ತು ಮುಕುಂದರ ಹಿಲ್ಸ್ ಟೈಗರ್ ರಿಸರ್ವ್ ಮತ್ತು ಮಧ್ಯ ಪ್ರದೇಶದ ನೌರ್‌ದೇಹಿ ವೈಲ್ಡ್‌ಲೈಫ್ ಸೆಂಕ್ಚುರಿ ಸೇರಿದಂತೆ ಐದು ಪ್ರದೇಶಗಳನ್ನು ಆದ್ಯತೆಯಾಗಿ ಗುರುತಿಸಲಾಯಿತು ಎಂದು ಬಿಪಿನ್ ಬಹಿರಂಗಪಡಿಸಿದರು.

ನ್ಯಾಯಾಲಯದ ಪ್ರಕರಣ

2012ರ ಮೇ ನಲ್ಲಿ ಯೋಜನೆ ಪ್ರಾರಂಭವಾದಾಗ, ಸಿಂಹಗಳನ್ನು ಅದೇ ಅಭಯಾರಣ್ಯಕ್ಕೆ ಮರುಪರಿಚಯಿಸುವ ಯೋಜನೆಯೊಂದಿಗೆ ಸಂಘರ್ಷಕ್ಕೆ ಬರಬಹುದು ಎಂಬ ಆತಂಕದಿಂದ ಚೀತಾಗಳನ್ನು ಕುನೋ ಅಭಯಾರಣ್ಯಕ್ಕೆ ಮರು ಪರಿಚಯಿಸುವ ಯೋಜನೆಗೆ ಸುಪ್ರೀಂ ಕೋರ್ಟ್ ತಡೆ ನೀಡಿತ್ತು.

ನ್ಯಾಷನಲ್ ಟೈಗರ್ ಕನ್ಸರ್‌ವೇಷನ್ ಅಥಾರಿಟಿ (ಎನ್‌ಟಿಸಿಎ)ಯ ಆರ್ಕಿಟೆಕ್ಟ್ ವೈಲ್ಡ್ ಪ್ರೊಟೆಕ್ಷನ್ ಆಕ್ಟ್‌ನ ತಜ್ಞ ಸಮಿತಿ ಮುಖ್ಯಸ್ಥ ಡಾ. ಎಂ.ಕೆ. ರಂಜಿತ್ ಸಿನ್ಹಾ ಅವರ ಮಾರ್ಗದರ್ಶನದ ಮೇರೆಗೆ ಅಫಿಡೆವಿಟ್ ಸಲ್ಲಿಸಿದ ನಂತರ ಈ ಯೋಜನೆಗೆ ಸುಪ್ರೀಂಕೋರ್ಟ್ ವಿಧಿಸಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿತು. ಇದರಿಂದ ಆಫ್ರಿಕಾದ ಚೀತಾಗಳನ್ನು ಭಾರತಕ್ಕೆ ತರುವ ಯೋಜನೆ ಕಾರ್ಯಗತವಾಗಲು ಸಾಧ್ಯವಾಯಿತು ಎಂದು ಅವರು ವಿವರಿಸಿದರು.

ಅಳಿವಿನಂಚಿನಲ್ಲಿರುವ ಭಾರತೀಯ ಬಸ್ಟರ್ಡ್‌ನ ಸಂಖ್ಯೆಯ ಚೇತರಿಕೆ ಮತ್ತು ಆವಾಸಸ್ಥಾನದ ಸುಧಾರಣೆಯ ಕೆಲಸವನ್ನು ನಾನು ಪ್ರಾರಂಭಿಸಿದೆ. ಹುಲ್ಲುಗಾವಲು ಮತ್ತು ತೆರೆದ ಅರಣ್ಯಗಳ ಆವಾಸಸ್ಥಾನವು ಚೀತಾಗಳಿಗೆ ಸೂಕ್ತವಾಗಿದೆ ಎಂದು ಮನಗಂಡು ನ್ಯಾಯಾಲಯದ ಅನುಮತಿ ದೊರೆತ ನಂತರ ನಾನು ಮತ್ತೆ ಚೀತಾ ಯೋಜನೆಗೆ ಸೇರಿಕೊಂಡೆ ಎಂದು ಅವರು ಹೇಳಿದರು.

ಉತ್ತಮ ಬೇಟೆಯ ನೆಲೆ

ಕುನೊ ರಾಷ್ಟ್ರೀಯ ಉದ್ಯಾನವನವು ವಿಂಧ್ಯಾಚಲ ಪರ್ವತ ಶ್ರೇಣಿಗಳ ಉತ್ತರ ಭಾಗದಲ್ಲಿ ನೆಲೆಗೊಂಡಿದೆ. 748 ಚದರ ಕಿಲೋಮೀಟರ್ ಪ್ರದೇಶದಲ್ಲಿ 35 ಚಿರತೆಗಳನ್ನು ನಿರ್ವಹಿಸಬಹುದು. ಅಲ್ಲಿ ಸುತ್ತಮುತ್ತಲು 6,800 ಚ.ಕಿ.ಮೀ ವರೆಗೆ ಚಿರತೆಗಳು ಸೂಕ್ತವಾದ ಪ್ರದೇಶವನ್ನು ಹೊಂದಿವೆ. ಮುಂದಿನ ಐದು ವರ್ಷಗಳಲ್ಲಿ ಆಫ್ರಿಕಾದಿಂದ 50 ಚೀತಾಗಳನ್ನು ಭಾರತಕ್ಕೆ ತರುವ ಯೋಜನೆ ಇದೆ. ನಾವು ಕುನೋ ನ್ಯಾಷನಲ್ ಪಾರ್ಕ್ ಹೊರತುಪಡಿಸಿ ಇತರ ನಾಲ್ಕು ಸ್ಥಳಗಳನ್ನು ಗುರುತಿಸಲಾಗಿ ದೀರ್ಘಾವಧಿಯಲ್ಲಿ ಚೀತಾ ಮೆಟಾ ಪೋಪ್ಯುಲೇಷನ್ ದೇಶವೆಂದು ಸ್ಥಾಪಿಸುತ್ತದೆ ಅವರು ಹೇಳಿದರು.

ಕುನೋ ರಾಷ್ಟ್ರೀಯ ಉದ್ಯಾನವನ ಚಿರತೆಗಳಿಗೆ ಉತ್ತಮ ಬೇಟೆಯ ನೆಲೆ ಇದ್ದು, ಪಾರ್ಕ್ ನಾಲ್ಕು ಕೊಂಬಿನ ಟೆಲೋಪ್, ಚಿಂಕಾರ, ನೀಲಗೈ, ಕಾಡು ಹಂದಿ, ಮಚ್ಚೆಯುಳ್ಳ ಜಿಂಕೆ ಮತ್ತು ಸಾಂಬಾರ್ ಒಳಗೊಂಡಿದೆ.

ಭಾರತದಲ್ಲಿ ತೆರೆದ ಅರಣ್ಯ ಪ್ರದೇಶ ಮತ್ತು ಹುಲ್ಲುಗಾವಲು ಪರಿಸರ ವ್ಯವಸ್ಥೆಯು ಚೀತಾಗಳು ಮತ್ತು ಕ್ಷೀಣಿಸುತ್ತಿರುವ ವನ್ಯಜೀವಿಗಳನ್ನು ಪುನರ್ ಸ್ಥಾಪಿಸಲು ಸಹಾಯ ಮಾಡುತ್ತದೆ. ಇದು ಜೀವವೈವಿಧ್ಯತೆಯನ್ನು ಕಾಪಾಡಲು, ಕ್ರೋಢೀಕರಿಸಲು ಸಹಾಯ ಮಾಡುತ್ತದೆ ಮತ್ತು ಪರಿಸರ ವ್ಯವಸ್ಥೆಯನ್ನು ಹೆಚ್ಚಿಸಿ, ಹವಾಮಾನ ಬದಲಾವಣೆಯನ್ನು ತಗ್ಗಿಸಲು ಮತ್ತು ಸ್ಥಳೀಯ ಆರ್ಥಿಕತೆಯನ್ನು ಹೆಚ್ಚಿಸಿ ವಿವಿಧ ಜೀವನೋಪಾಯದ ಅವಕಾಶಗಳನ್ನು ಕಲ್ಪಿಸುತ್ತದೆ ಎಂದು ಅವರು ಹೇಳಿದರು.

'ಆಫ್ರಿಕನ್ ಚೀತಾ ಭಾರತದಲ್ಲಿ ಪರಿಚಯ ಯೋಜನೆ'ಯನ್ನು ವೈಲ್ಡ್‌ಲೈಫ್ ಟ್ರಸ್ಟ್ ಆಫ್ ಇಂಡಿಯಾ 2009ರಲ್ಲಿ ಕೈಗೆತ್ತಿಕೊಂಡಿತು. ಅಂತಿಮವಾಗಿ ಅತ್ಯಂತ ವೇಗದ ಪ್ರಾಣಿ ಚೀತಾಗಳನ್ನು ಭಾರತದ ನೆಲಕ್ಕೆ ತರುವಲ್ಲಿ ಯಶಸ್ವಿಯಾಯಿತು ಎಂದು ಅವರು ವಿವರಿಸಿದರು.

ತಾಯಿ ಸಂತೋಷ

ಪ್ರಾಜೆಕ್ಟ್ ಚೀತಾ ಕೋರ್ ತಂಡದಲ್ಲಿ ನನ್ನ ಮಗ ಸೇರಿರುವುದು ತುಂಬಾ ಸಂತೋಷವಾಗಿದ್ದು, ಕುಟುಂಬದ ಸದಸ್ಯರು ಬಿಪಿನ್ ಸಾಧನೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಿದ್ದಾರೆ ಎಂದು ಬಿಪಿನ್ ತಾಯಿ ತಾರಾ ಮೊನ್ನಪ್ಪ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ. ಬಿಪಿನ್‌ಗೆ ಬಾಲ್ಯದಿಂದಲೂ ಪ್ರಕೃತಿಯ ಬಗ್ಗೆ ಒಲವು ಇದ್ದುದರಿಂದ ಈ ಸಾಧನೆ ಮಾಡಲು ಸಾಧ್ಯವಾಯಿತು. ಇದರ ಬಗ್ಗೆ ವರ್ಣಿಸಲು ನನ್ನ ಬಳಿ ಯಾವುದೇ ಪದಗಳಿಲ್ಲ ಎಂದು ಹೇಳಿದ ಅವರು, ಮಗನ ಈ ಉತ್ಸಾಹ ಪೂರ್ಣವಾಗಿ ಮುಂದುವರಿಸಲಿ ಎಂದು ಆಶಿಸಿದರು.

ಬಿಪಿನ್ ಅವರ ಪತ್ನಿ ಅಮೃತಾ ಅವರು ಒಬ್ಬ ಸಮಾಜಶಾಸ್ತ್ರಜ್ಞೆ ಮತ್ತು ಕನ್ಸರ್‌ವೇಷನಿಸ್ಟ್ ಆಗಿದ್ದಾರೆ ಮತ್ತು ಅಸ್ಸಾಂನಲ್ಲಿರುವ ಜಾಗತಿಕ ಪರಿಸರ ಸಂಘಟನೆಯಾದ ನೇಚರ್ ಕನ್ಸರ್‌ವೆನ್ಸಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.



ನಮೀಬಿಯಾದಲ್ಲಿ ತರಬೇತಿ ವೇಳೆ ಪ್ರಾಜೆಕ್ಟ್ ಚೀತಾ ತಂಡದ ಸದಸ್ಯರೊಂದಿಗೆ ಬಿಪಿನ್ (ಬಲತುದಿ).

ನಮೀಬಿಯಾದಲ್ಲಿ ತರಬೇತಿ

ಚೀತಾ ನಿರ್ವಹಣೆ, ಆವಾಸಸ್ಥಾನ ನಿರ್ವಹಣೆ, ಸಂಶೋಧನೆ, ವಿವಿಧ ಹಂತಗಳಲ್ಲಿ ಸಂರಕ್ಷಣೆಯ ವಿಧಾನಗಳು ಮತ್ತು ಅರಣ್ಯದ ಅಂಚಿನಲ್ಲಿ ವಾಸಿಸುವ ಗ್ರಾಮಸ್ಥರೊಂದಿಗೆ ಸಂಘರ್ಷವನ್ನು ತಪ್ಪಿಸುವುದು ಹೇಗೆ? ಎಂಬ ತರಬೇತಿಗಾಗಿ ಬಿಪಿನ್ ಅವರನ್ನು ಜೂನ್ 2022 ರಲ್ಲಿ ತಂಡದೊಂದಿಗೆ ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾಕ್ಕೆ ಕಳುಹಿಸಲಾಯಿತು.

ನಾನು ನನ್ನ ತಂಡದೊಂದಿಗೆ ನೆಲದ ಅಧ್ಯಯನ ನಡೆಸಿದ ನಂತರ ತಾಂತ್ರಿಕ ಅಂಶಗಳನ್ನು ನೀಡುವುದರ ಜೊತೆಗೆ ತಂಡಕ್ಕೆ ಅಗತ್ಯವಿರುವ ಅನೇಕ ನೆರವು ನೀಡುವುದು ಸೇರಿದಂತೆ ಆಡಳಿತಾತ್ಮಕ, ಹಣಕಾಸು, ಕಾನೂನು ಮತ್ತು ನೀತಿ ವಿಷಯಗಳಿಗೆ ಸಂಬಂಧಿಸಿದಂತೆ ಮಾಹಿತಿ ಒದಗಿಸಿದೆ. ಭಾರತದಲ್ಲಿ ಮಳೆಗಾಲದ ಸಮಯದಲ್ಲಿ ಅರಣ್ಯ ಪ್ರದೇಶಗಳನ್ನು ಪ್ರವೇಶಿಸಲಾಗದ ಕಾರಣ ಮತ್ತು ಲಾಜಿಸ್ಟಿಕಲ್ ನಿರ್ಬಂಧಗಳಿಂದ ಚೀತಾಗಳನ್ನು ಬಿಡುಗಡೆ ಮಾಡಲು ಸಾಧ್ಯವಿಲ್ಲ. ಮುಂಗಾರು ಮುಗಿದ ನಂತರ ಚೀತಾ ಬಿಡುಗಡೆ ಮಾಡುವುದು ಸೂಕ್ತ ಎಂದು ಅವರು ವಿವರಿಸಿದರು.

ಚೀತಾಗಳ ಬಿಡುಗಡೆಗೆ ಸೆಪ್ಟೆಂಬರ್ ತಿಂಗಳು ಸೂಕ್ತವಾಗಿದ್ದು, ಪ್ರಧಾನಿ ನರೇಂದ್ರ ಮೋದಿಯವರ ಜನ್ಮ ದಿನ ವಿಶೇಷವಾಗಿದ್ದು, ಅಧಿಕಾರಿಗಳು ಮಧ್ಯಪ್ರದೇಶ ಅರಣ್ಯ ವಿಭಾಗ, NTCO ಮತ್ತು MoEF&CC ವಿವಿಧ ಹಂತಗಳಲ್ಲಿ ಸಮನ್ವಯ, ಪರಿಣಾಮಕಾರಿ ಹಾಗೂ ಸೂಕ್ಷ್ಮವಾಗಿ ತಮ್ಮ ಕಾರ್ಯಗಳನ್ನು ನಿರ್ವಹಿಸಿ ಚೀತಾ ಪ್ರಾಜೆಕ್ಟ್ ಯೋಜನೆಯನ್ನು ಯಶಸ್ವಿಗೊಳಿಸಿದರು ಎಂದು ಬಿಪಿನ್ ತಿಳಿಸಿದರು.


ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲೂ ಇದೇ ರೀತಿಯ ಭೂಪ್ರದೇಶ ಗುರುತಿಸಲಾಗಿದೆ.


ಭಾರತಕ್ಕೆ ಕರೆತರುವ ಮುನ್ನ ನಮೀಬಿಯಾದಲ್ಲಿ ಚೀತಾಗೆ ವನ್ಯಜೀವಿ ಜೀವಶಾಸ್ತ್ರಜ್ಞ ಸಿ.ಎಂ.ಬಿಪಿನ್ ಔಷಧೋಪಚಾರ ಮಾಡಿದರು.

ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ಹಲಸು ಮರದ ನಾಟಗಳ ವಶ

ವಿರಾಜಪೇಟೆ ಅರಣ್ಯ ಸಿಬ್ಬಂದಿಯಿಂದ ಮೂವರ ಬಂಧನ



ಮಡಿಕೇರಿ, ಸೆ.22– ವಿರಾಜಪೇಟೆ ತಾಲೂಕಿನ ಕುಂಬೇರಿ ಗ್ರಾಮದ ಕಾಫಿ ತೋಟವೊಂದರಲ್ಲಿ ಅಕ್ರಮವಾಗಿ ಸಂಗ್ರಹಿಸಿಡಲಾಗಿದ್ದ 2 ಲಕ್ಷ ರೂ. ಮೌಲ್ಯದ ಹಲಸು ಜಾತಿಯ ಮರದ ನಾಟಗಳನ್ನು ವಿರಾಜಪೇಟೆ ಆರಣ್ಯ ವಲಯದ ಸಿಬ್ಬಂದಿ ವಶಪಡಿಸಿಕೊಂಡಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಅಮ್ಮತ್ತಿ ಬಳಿಯ ಆನಂದಪುರ ಗ್ರಾಮದ ಚರಣ್ ರಾಜ್, ನೆಲ್ಲುಹುದಿಕೇರಿ ಗ್ರಾಮದ ರಶೀದ್ ಮತ್ತು ನೆಲ್ಲಿಹುದಿಕೇರಿ ಗ್ರಾಮದ ಹಸೆನಾರ್ ಈ.ಕೆ. ಎಂಬವರನ್ನು ಬಂಧಿಸಲಾಗಿದೆ.

ಅಮ್ಮತ್ತಿ ಬಳಿಯ ಕುಂಬೇರಿ ಗ್ರಾಮದ ಎಂ.ಮುತ್ತಪ್ಪ ಎಂಬವರ ಕಾಫಿ ತೋಟದಲ್ಲಿ 12 ಹಲಸು ಜಾತಿಯ ಮರಗಳನ್ನು ಅಕ್ರಮವಾಗಿ ಕಡಿದು ನಾಟಾಗಳಾಗಿ ಪರಿವರ್ತಿಸಿ ಮಾರಾಟ ಮಾಡುವ ಉದ್ದೇಶದಿಂದ ದಾಸ್ತಾನು ಮಾಡಲಾಗಿತ್ತು. ಇದನ್ನು ಪತ್ತೆ ಹಚ್ಚಿದ ವಿರಾಜಪೇಟೆ ಆರಣ್ಯ ವಲಯದ ಸಿಬ್ಬಂದಿ ಸ್ಥಳಕ್ಕೆ ದಾಳಿ ನಡೆಸಿ, ಮರದ ನಾಟಗಳನ್ನು ವಶಪಡಿಸಿಕೊಂಡು, ಆರೋಪಿಗಳನ್ನು ಬಂಧಿಸಿದ್ದಾರೆ.

ವಿರಾಜಪೇಟೆ ವಿಭಾಗದ ಅರಣ್ಯ ಸಂರಕ್ಷಣಾಧಿಕಾರಿಗಳಾದ ಶಿವರಾಮ್ ಬಾಬು.ಎಂ ಮತ್ತು ವಿರಾಜಪೇಟೆ ಉಪ ವಿಭಾಗದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ನೆಹರು ಮಾರ್ಗದರ್ಶನದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ವಲಯ ಅರಣ್ಯಾಧಿಕಾರಿ ಕೆ.ಎಂ. ದೇವಯ್ಯ, ವಿರಾಜಪೇಟೆ ವಲಯ ಅರಣ್ಯಾಧಿಕಾರಿಗಳಾದ ದೇಯಂಡ ಸಂಜಿತ್ ಸೋಮಯ್ಯ, ಮೋನಿಷಾ ಎಂ.ಎಸ್. ಶ್ರೀಶೈಲ ಮಲ್ಲಪ್ಪ ಮಾಲಿಗೌಡ್ರ, ಆನಂದ ಕೆ.ಆರ್, ಸಚಿನ ನಿಂಬಾಳ, ಎನ್.ಎನ್ ಅಕ್ಕಮ್ಮ, ಅನಿಲ್ ಸಿ.ಟಿ, ಅರಣ್ಯ ರಕ್ಷಕರಾದ ಆರುಣ.ಸಿ, ಚಂದ್ರಶೇಖರ ಅಮರಗೋಳ, ನಾಗರಾಜ ರಡರಟ್ಟಿ, ಮಾಲ ತೇಶ ಬಡಿಗೇರ, ಟಿ.ಎನ್.ಪ್ರಶಾಂತ್ ಕುಮಾರ್, ವಾಹನ ಚಾಲಕರಾದ ಅಚ್ಚಯ್ಯ, ಆಶೋಕ ಹಾಗೂ ವಿರಾಜಪೇಟೆ ವಲಯ ಆರ್‌ಆರ್‌ಟಿ ತಂಡದ ಸಿಬ್ಬಂದಿಗಳಾದ ಮೋಣಪ್ಪ, ಪ್ರಕಾಶ್ ಹಾಗೂ ಸಿಬ್ಬಂದಿ ಪಾಲ್ಗೊಂಡಿದ್ದರು.

ಹಸು ಕಳ್ಳತನ: ಐವರ ಬಂಧನ

ಮಡಿಕೇರಿ,ಸೆ.22– ಕಡಗದಾಳು ಗ್ರಾಮದಲ್ಲಿ ಹಸುಗಳನ್ನು ಕಳ್ಳತನ ಮಾಡಿದ ಆರೋಪದಡಿ ಐವರು ಆರೋಪಿಗಳನ್ನು ಮಡಿಕೇರಿ ಗ್ರಾಮಾಂತರ ಠಾಣಾ ಪೊಲೀಸರು ಬಂಧಿಸಿದ್ದಾರೆ. ಪೊನ್ನತ್‌ಮೊಟ್ಟೆಯ ಹುಸೇನ್(45), ಹಮೀದ್(40), ಕೊಂಡಂಗೇರಿಯ ಸಲೀಂ(31), ಕಡಗದಾಳುವಿನ ಚಂಗಪ್ಪ(40) ಹಾಗೂ ಅಭ್ಯತ್ ಮಂಗಲದ ಶ್ರೀಧರ(60) ಎಂಬುವರೇ ಬಂಧಿತ ಆರೋಪಿಗಳಾಗಿದ್ದಾರೆ. ಹಸುಗಳ ಕಳವು ಪ್ರಕರಣಕ್ಕೆ ಸಂಬಂಧಿಸಿದಂತೆ ದಿನು ಸೋಮಣ್ಣ ಹಾಗೂ ಮಂದಣ್ಣ ಎಂಬವರು ದೂರು ನೀಡಿದ್ದರು.

ರವಿ ಜಗನ್ನಾಥನ್ ನಿಧನ



ಮೈಸೂರು, ಸೆ.22– ಮೈಸೂರಿನ ಕೆಸರೆ ಬಳಿಯ ಟೀಚರ್ಸ್ ಲೇಔಟ್ ನಿವಾಸಿ ಇಂಡಿಯನ್ ಏರ್‌ಫೋರ್ಸ್‌ನ ನಿವೃತ್ತ ಜೂನಿಯರ್ ವಾರಂಟ್ ಆಫೀಸರ್ ರವಿ ಜಗನ್ನಾಥನ್(60) ಅವರು ಗುರುವಾರ ನಿಧನರಾದರು. ಮೃತರು ಪತ್ನಿ, ಪುತ್ರ ಮತ್ತು ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೆ.23ರ ಬೆಳಗ್ಗೆ 11 ಗಂಟೆಗೆ ನಗರದ ಎನ್.ಆರ್. ಮೊಹಲ್ಲಾ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದೂವರೆ ಶತಮಾನದ ಪರಂಪರೆ ಹೊಂದಿರುವ ಕರಗ

50ನೇ ಬಾರಿ ಶ್ರೀ ದಂಡಿನ ಮಾರಿಯಮ್ಮ ದೇವಿಯ ಕರಗ ಹೊರುತ್ತಿರುವ ಉಮೇಶ್

ಮಡಿಕೇರಿ,ಸೆ.22– ಶಕ್ತಿ ದೇವತೆಯ ಆರಾಧನೆಯ ನವರಾತ್ರಿ ಉತ್ಸವದ ಸಂಭ್ರಮಕ್ಕೆ ಕರಗಗಳು ಮೂಲ ಶಕ್ತಿಯಾಗಿವೆ. ಅದರಲ್ಲೂ ನಗರದ 4 ಶಕ್ತಿ ದೇವತೆಗಳಲ್ಲಿ ಒಂದಾಗಿರುವ ಶ್ರೀ ದಂಡಿನ ಮಾರಿಯಮ್ಮ ದೇವಿಯ ಕರಗವನ್ನು ಕಳೆದ 49 ವರ್ಷಗಳಿಂದ ಹೊರುತ್ತಿರುವ ಜಿ.ಎ. ಉಮೇಶ್ ಅವರು ಈ ಬಾರಿ 50ನೇ ಬಾರಿ ಕರಗ ಹೊರಲು ತಯಾರಾಗಿದ್ದಾರೆ. ಆಧ್ಯಾತ್ಮಿಕತೆ ಸಂದೇಶ ಸಾರುವ ಮಡಿಕೇರಿಯ ನಾಲ್ಕು ಶಕ್ತಿ ದೇವತೆಗಳ ಕರಗಗಳಲ್ಲಿ ಒಂದೂವರೆ ಶತಮಾನದ ಭವ್ಯ ಪರಂಪರೆ ಅಡಗಿದೆ.

ತಲೆಯ ಮೇಲೆ ದೇವಿಯನ್ನಿರಿಸಿಕೊಂಡು ಒಂಭತ್ತು ದಿನಗಳ ಕಾಲ ವ್ರತಧಾರಿಗಳು ನಡೆಸುವ ನಗರ ಪ್ರದಕ್ಷಿಣೆ, ವಾದ್ಯಕ್ಕೆ ತಕ್ಕಂತೆ ಲಾಲಿತ್ಯ ಪೂರ್ಣವಾದ ಅವರ ನರ್ತನ ಒಟ್ಟು ನವರಾತ್ರಿ ಉತ್ಸವಕ್ಕೆ ವಿಶೇಷ ಮೆರುಗು ತುಂಬುತ್ತವೆ. ಪ್ರತಿ ದಿನವೂ ವಿವಿಧ ವರ್ಣಗಳ ಹೂಗಳಿಂದ ಅಲಂಕರಿಸಿದ ಕರಗಗಳು ಮಹಾಲಯ ಅಮಾವಾಸ್ಯೆಯ ಮರುದಿನ ಸಂಪ್ರದಾಯ ಬದ್ಧವಾಗಿ, ವಿಧಿ ಪೂರ್ವಕವಾಗಿ ನಗರದ ಬನ್ನಿಮಂಟಪದಲ್ಲಿ ಕಟ್ಟಲ್ಪಟ್ಟು ದೇವಿಯ ಭಕ್ತರಿಂದ ಆರಾಧನೆಗೆ ಒಳಗಾಗುತ್ತವೆ.

ತಾಮ್ರದ ತಂಬಿಗೆಯ ಮೇಲೆ ಕಲಶವನ್ನಿರಿಸಿ, ಅದರ ಮೇಲೆ ದೇವಿಯನ್ನು ಕೂರಿಸಿ, ಹೂಗಳಿಂದ ಅಲಂಕರಿಸಿ, ಅದನ್ನು ಶಿರದ ಮೇಲಿಟ್ಟು, ಅರಶಿನ ವಸ್ತ್ರವನ್ನುಟ್ಟ ವ್ರತಧಾರಿಗಳು 'ಕರ'ಗಳನ್ನು ಬಿಟ್ಟು ಕುಣಿಯುವ ನೃತ್ಯ ಭಾವ ಪರವಶತೆಯನ್ನುಂಟು ಮಾಡುತ್ತದೆ. ಇಂತಹ ಪುಣ್ಯ ಕಾರ್ಯವನ್ನು ಕಳೆದ 49 ವರ್ಷಗಳಿಂದ ನಿರಂತರವಾಗಿ ನಡೆಸಿಕೊಂಡು ಬಂದು, 50ನೇ ವರ್ಷದ 'ಶ್ರೀ ದಂಡಿನ ಮಾರಿಯಮ್ಮ ಕರಗ'ವನ್ನು ಹೊರಲು ನಗರದ ಗೌಳಿ ಬೀದಿಯ ನಿವಾಸಿ ಮಾಜೀ ಸೈನಿಕ ಜಿ.ಎ.ಉಮೇಶ್ ವೃತಾಧಾರಿಯಾಗಿ ಸಜ್ಜಾಗಿದ್ದಾರೆ.



ತಲೆಮಾರಿನ ಪರಂಪರೆ: ನಗರದ ಶ್ರೀ ಕುಂದುರುಮೊಟ್ಟೆ ಚೌಟಿ ಮಾರಿಯಮ್ಮ, ಶ್ರೀ ಕೋಟೆ ಮಾರಿಯಮ್ಮ, ಶ್ರೀ ಕಂಚಿಕಾಮಾಕ್ಷಿಯಮ್ಮ ಮತ್ತು ಶ್ರೀ ದಂಡಿನ ಮಾರಿಯಮ್ಮ ದೇಗುಲಗಳಲ್ಲಿ ನಿತ್ಯ ಪೂಜೆಯ ಪರಂಪರೆ 'ಯಾದವ' ಸಮುದಾಯದ ಕುಟುಂಬಕ್ಕೆ ಕಳೆದ ಹಲವು ತಲೆಮಾರುಗಳಿಂದ ಹರಿದು ಬಂದಿದೆ. ಶ್ರೀ ದಂಡಿನ ಮಾರಿಯಮ್ಮ ದೇವರ ಪೂಜಾ ಕಾರ್ಯಗಳ ಜವಾಬ್ದಾರಿ ಹೊತ್ತಿರುವ ಜಿ.ಎ.ಉಮೇಶ್ ಹೇಳುವಂತೆ 'ನಮ್ಮ ಯಾದವ ಸಮುದಾಯದ ಕುಟುಂಬ ಮಡಿಕೇರಿಗೆ ಬಂದು ನೆಲೆ ನಿಂತು 400 ವರ್ಷಗಳೇ ಸಂದಿರಬಹುದು. ಕರಗ ಹೊರುವ ಪೂಜನೀಯ ಕಾರ್ಯ ತನ್ನ ತಂದೆ ಪೂಜಾರಿ ಅಣ್ಣಯ್ಯ ಅವರಿಂದ ನನಗೆ ಬಂದಿದೆ. 1974ರಲ್ಲಿ ತಾನು ಸ್ವತಂತ್ರವಾಗಿ ನನ್ನ 14ನೇ ವಯಸ್ಸಿನಲ್ಲಿ ಶ್ರೀ ದಂಡಿನ ಮಾರಿಯಮ್ಮ ದೇವರ ಕರಗನ್ನು ಹೊರಲಾ ರಂಭಿಸಿದೆ. ನನ್ನ ಅಜ್ಜ ಪೂಜಾರಿ ರಾಮಯ್ಯ ಅವರೂ ಕರಗಗಳನ್ನು ಹೊರುತ್ತಿದ್ದರು. ಇಲ್ಲಿನ 4 ಕರಗ ದೇಗುಲಗಳಲ್ಲಿಯೂ ನಮ್ಮದೇ ಕುಟುಂಬಸ್ಥರು ಪೂಜೆ ಸಲ್ಲಿಸುತ್ತಿದ್ದಾರೆ ಎಂದು ಮಾಹಿತಿ ನೀಡಿದರು. ತಲೆಯ ಮೇಲೆ ಕರಗವಿಟ್ಟು ಕೊಂಡು, ಕೈಗಳ ಆಧಾರವಿಲ್ಲದೆ ನರ್ತಿಸುವುದು ಸುಲಭದ ಮಾತಲ್ಲ. 'ನಾನು ಕರಗ ಹೊರಲು ಆರಂಭಿಸುವುದಕ್ಕೆ ಮುನ್ನ, ನನ್ನ ತಂದೆ ಪೂಜಾರಿ ಅಣ್ಣಯ್ಯ ಅವರು, ತಾಮ್ರದ ತಂಬಿಗೆ ಮರಳನ್ನು ಹಾಕಿ, ಅದರ ಮೇಲೆ ನೀರಿನಲ್ಲಿ ನೆನೆದ ಗೋಣಿಚೀಲವನ್ನು ಹಾಕಿ ನೃತ್ಯದ ಅಭ್ಯಾಸ ಮಾಡಿಸಿದ್ದರು' ಎಂದು ಉಮೇಶ್ ಸ್ಮರಿಸಿದರು.

ಸೈನಿಕನಾಗಿ ದೈವ ಸೇವೆ: ಜಿ.ಎ. ಉಮೇಶ್ ಅವರು ಬೆಂಗಳೂರಿನ ಎಂಇಜಿಗೆ 1979ರಲ್ಲಿ ಸೇರ್ಪಡೆಗೊಂಡು 1999ರವರೆಗೆ ರಾಷ್ಟ್ರದ ವಿವಿಧೆಡೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ವರ್ಷಂಪ್ರತಿ ನವರಾತ್ರಿ ಉತ್ಸವಕ್ಕೆ ಎರಡು ತಿಂಗಳ ರಜೆಯ ಮೇಲೆ ಮಡಿಕೇರಿಗೆ ಆಗಮಿಸುತ್ತಿದ್ದ ಇವರು, ಉತ್ಸವಕ್ಕೂ ಮುಂಚೆ ತಿಂಗಳ ಕಾಲ ವ್ರತನಿಷ್ಠರಾಗಿ ಕರಗವನ್ನು ಹೊತ್ತ ಅಲೌಕಿಕ ಅನುಭೂತಿಯನ್ನು ಹೊಂದುತ್ತಿದ್ದರು. ಇವರೊಂದಿಗೆ ಇವರ ಅಣ್ಣ ಜಿ.ಎ. ಲೋಕನಾಥ್(ಪಾಪಣ್ಣ) ಅವರೂ ಕರಗಗಳನ್ನು ಹೊರುತ್ತಿದ್ದರು. ಸರ್ವಾಲಂಕೃತ ಕರಗ ಸರಿಸುಮಾರು 15ರಿಂದ 20 ಕೆ.ಜಿ. ಭಾರವನ್ನು ಹೊಂದಿರುತ್ತದೆ. ಇದನ್ನು ಸಮತೋಲನ ತಪ್ಪದಂತೆ ಶಿರದ ಮೇಲಿಟ್ಟು ಒಂಭತ್ತು ದಿನಗಳ ಕಾಲ ಆರಾಧಿಸುವುದಕ್ಕೆ 'ಶುದ್ಧ, ಶಕ್ತಿ, ಭಕ್ತಿ' ಅತ್ಯವಶ್ಯವೆಂದು ಜಿ.ಎ.ಉಮೇಶ್ ಹೇಳುತ್ತಾರೆ.

ಕರಗಗಳ ಪ್ರಾಮುಖ್ಯತೆ: ಒಂದೂವರೆ ಶತಮಾನಗಳ ಹಿಂದೆ ಈ ನಾಡನ್ನು ಸಾಂಕ್ರಾಮಿಕ ರೋಗ ಬಹುವಾಗಿ ಕಾಡಿತ್ತು. ಆ ಸಂದರ್ಭ ನಗರದ ಶಕ್ತಿ ದೇವತೆಗಳ ಕರಗಗಳನ್ನು ಹೊರಡಿಸುವುದು ಸಮಸ್ಯೆ ಪರಿಹಾರದ ಮೂಲವೆಂದು ಕಂಡು ಬಂದಿತ್ತು. ಅಂದಿನಿಂದ ನವರಾತ್ರಿ ಉತ್ಸವದಲ್ಲಿ ಶಕ್ತಿ ದೇವತೆಗಳ ಕರಗಗಳು ಪ್ರಾಮುಖ್ಯತೆಯನ್ನು ಪಡೆದುಕೊಂಡವು. ದಶಕಗಳ ಹಿಂದೆ ಕರಗ ನಗರ ಪ್ರದಕ್ಷಿಣೆಯ ಸಂದರ್ಭ, ಮನೆ ಮನೆಗಳಲ್ಲಿ ಅಂಗಳವನ್ನು ಸಗಣಿಯಿಂದ ಸಾರಿಸಿ, ಕರಗಗಳು ತೆರಳಿದಾಗ ಪೂಜೆಯನ್ನು ಸಲ್ಲಿಸುತ್ತಿದ್ದುದನ್ನು ನೆನಪಿಸಿಕೊಂಡ ಜಿ.ಎ. ಉಮೇಶ್, ಇಂದು ಕರಗ ಉತ್ಸವಕ್ಕೆ ಸಾಕಷ್ಟು ಪ್ರಾಮುಖ್ಯತೆ ಪ್ರಸಿದ್ಧಿ ದೊರೆತಿದೆ. ಹೀಗಿದ್ದೂ, ಹೊಸ ತಲೆಮಾರಿನ ಜನತೆ, ಹೊರ ಜಿಲ್ಲೆಗಳಿಂದ ಬಂದು ನೆಲೆಸಿರುವ ಮಂದಿಗೆ ಇದರ ಪ್ರಾಮುಖ್ಯತೆಯ ಅರಿವಿಲ್ಲ ಎಂದು ನೋವು ತೋಡಿಕೊಂಡರು.

ಕೊರೊನಾ ಸಾಂಕ್ರಾಮಿಕದ ಬಳಿಕ ಮುಕ್ತವಾಗಿ ನಡೆಯಲಿರುವ ಈ ಬಾರಿಯ ದಸರಾ ಅತ್ಯಂತ ವಿಶೇಷವಾಗಿದೆ. ಈ ಬಾರಿ ಕರಗಗಳ ನಗರ ಪ್ರದಕ್ಷಿಣೆ ಈ ಹಿಂದಿನ ವರ್ಷಗಳಂತೆಯೇ ನಡೆಯಲಿದೆ ಎಂದು ಸಂತಸ ವ್ಯಕಪಡಿಸಿದ ಜಿ.ಎ. ಉಮೇಶ್, ದೇವಿಯ ಕರಗನ್ನು ಹೊರುವ ತಮ್ಮ ಕುಟುಂಬದ ಯುವಕ ಕೃಷ್ಣ ಅವರಿಗೆ ತರಬೇತಿಯನ್ನೂ ನೀಡುತ್ತಿದ್ದಾರೆ.

ಕಾಲೇಜು ವಿದ್ಯಾರ್ಥಿನಿ ಮೇಲೆ ಬಲಾತ್ಕಾರಕ್ಕೆ ಯತ್ನ

ವಿರಾಜಪೇಟೆಯಲ್ಲಿ ಆಟೋ ಚಾಲಕನ ಬಂಧನ

ವಿರಾಜಪೇಟೆ, ಸೆ.22– ಪ್ರತಿಷ್ಠಿತ ಕಾಲೇಜೊಂದರ ವಿದ್ಯಾರ್ಥಿನಿಯನ್ನು ಆಟೋದಲ್ಲಿ ಕೂರಿಸಿಕೊಂಡು ಮಾನ ಭಂಗಕ್ಕೆ ಯತ್ನಿಸಿದ ಆಟೋ ಚಾಲಕನನ್ನು ವಿರಾಜಪೇಟೆ ನಗರ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ. ವಿರಾಜಪೇಟೆ ನಗರದ ತಿಮ್ಮಯ್ಯ ಬಡಾವಣೆಯ ನಿವಾಸಿ ಸುನೀಲ್ ಜೋಸೆಫ್ (46) ಎಂಬಾತನೇ ಮಾನಭಂಗಕ್ಕೆ ಯತ್ನಿಸಿ ಜೈಲು ಪಾಲಾದ ಕಾಮುಕ.



ವೃತ್ತಿಯಲ್ಲಿ ಆಟೋ ಚಾಲಕನಾಗಿರುವ ಈತ ಸೆ.21ರಂದು ಸಂಜೆ 4.30ರ ಸಮಯದಲ್ಲಿ ಮಲೆತಿರಿಕೆ ಬೆಟ್ಟಕ್ಕೆ ಬಾಡಿಗೆಗೆ ತೆರಳಿ ಹಿಂದಿರುಗುವ ಸಂದರ್ಭದಲ್ಲಿ ನೀರು

ಬಾಡಿಗೆಗೆ ಆಟೋ ಹತ್ತಿದ ವಿದ್ಯಾರ್ಥಿನಿ ಮೇಲೆ ಕಣ್ಣಾಕಿದ ಚಾಲಕ

ಕೊಲ್ಲಿ ಎಂಬಲ್ಲಿ ಕಾಲೇಜು ವಿದ್ಯಾರ್ಥಿನಿಯೊಬ್ಬಳು ಆಟೋರಿಕ್ಷಕ್ಕೆ ಕೈತೋರಿದ್ದಾಳೆ. ತಕ್ಷಣ ಆಟೋ ನಿಲ್ಲಿಸಿದ ಚಾಲಕ ವಿದ್ಯಾರ್ಥಿನಿಯನ್ನು ಆಟೋ (ಕೆಎ–12,ಬಿ–5222) ದಲ್ಲಿ ಹತ್ತಿಸಿಕೊಂಡು ಸ್ವಲ್ಪ ದೂರ ತೆರಳಿದ ನಂತರ ನೀನು ನೋಡಲು ಸುಂದರವಾಗಿ ಕಾಣುವೇ, ನನ್ನನ್ನು ಪ್ರೀತಿ ಮಾಡು ಎಂದು ವಿಕೃತವಾಗಿ ವರ್ತಿಸಲಾರಂಭಿಸಿದನೆನ್ನಲಾಗಿದೆ. ಇದರಿಂದ ಇರಿಸು–ಮುರಿಸುಗೊಂಡ ವಿದ್ಯಾರ್ಥಿನಿ ಅಸಭ್ಯವಾಗಿ ವರ್ತಿಸಬೇಡ ಎಂದು ಹೇಳಿದ್ದಾಳೆ. ಈ ಸಂದರ್ಭ ಚಾಲಕ ವಿದ್ಯಾರ್ಥಿನಿಯ ಮೇಲೆ ದೌರ್ಜನ್ಯವೆಸಗಿ ಬಲಾತ್ಕಾರಕ್ಕೆ ಯತ್ನಿಸಿದ್ದಾನೆ.

ಈ ವೇಳೆ ಚಾಲಕನಿಂದ ಪಾರಾಗಲು ಪ್ರಯತ್ನಿಸಿದ ವಿದ್ಯಾರ್ಥಿನಿಯು ಬಿದ್ದು, ಗಾಯಗೊಂಡಳು. ಆಗ ವಿದ್ಯಾರ್ಥಿನಿ ರಕ್ಷಣೆಗಾಗಿ ಕೂಗಿದ್ದಾಳೆ. ಈ ವೇಳೆ ಚಾಲಕ ಆಟೋದೊಂದಿಗೆ ಪರಾರಿಯಾಗಿದ್ದಾನೆಂದು ಪೊಲೀಸರು ತಿಳಿಸಿದ್ದಾರೆ.

ನಂತರ ವಿದ್ಯಾರ್ಥಿನಿ ಪೋಷಕರಿಗೆ ಘಟನೆ ಬಗ್ಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದಾಳೆ. ಸ್ಥಳಕ್ಕೆ ಆಗಮಿಸಿದ ಪೋಷಕರು ಗಾಯಗೊಂಡ ಮಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ. ನೊಂದ ವಿದ್ಯಾರ್ಥಿನಿ ನೀಡಿದ ದೂರಿನ ಮೇರೆಗೆ ನಗರ ಠಾಣಾಧಿಕಾರಿ ಆರೋಪಿ ಸುನೀಲ್ ಜೋಸೇಫ್‌ನನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಕೃತ್ಯಕ್ಕೆ ಬಳಸಿದ ಆಟೋರಿಕ್ಷವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ಪಾಚಿ ಹಿಡಿದಿರುವ ಕಾವೇರಿ ಕಲಾ ಕ್ಷೇತ್ರಕ್ಕೆ ಸುಣ್ಣ–ಬಣ್ಣ ಬಳಿಯದಿದ್ದರೆ ಧರಣಿ

ಮಡಿಕೇರಿ,ಸೆ.22– ಸುಣ್ಣ–ಬಣ್ಣ ಬಳಿಯದೆ ಪಾಚಿ ಹಿಡಿದಿರುವ ಕಾವೇರಿ ಕಲಾಕ್ಷೇತ್ರಕ್ಕೆ ದಸರಾ ಜನೋತ್ಸವದ ಹೆಸರಿನಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗುತ್ತಿದ್ದು, ತಕ್ಷಣ ಈ ಕಾರ್ಯವನ್ನು ಸ್ಥಗಿತಗೊಳಿಸಿ ಮೊದಲು ಸುಣ್ಣ–ಬಣ್ಣ ಬಳಿಯಬೇಕೆಂದು ಮಡಿಕೇರಿ ನಗರ ಕಾಂಗ್ರೆಸ್ ಸಮಿತಿಯ ಅಲ್ಪಸಂಖ್ಯಾತರ ಘಟಕ ಒತ್ತಾಯಿಸಿದೆ.

ಕಾವೇರಿ ಕಲಾಕ್ಷೇತ್ರಕ್ಕೆ ಭೇಟಿ ನೀಡಿದ್ದ ಅಲ್ಪಸಂಖ್ಯಾತರ ಘಟಕದ ನಗರಾಧ್ಯಕ್ಷ ಕೆ.ಜಿ.ಪೀಟರ್ ಹಾಗೂ ಪದಾಧಿಕಾರಿಗಳು ಅಲ್ಲಿನ ಅವ್ಯವಸ್ಥೆಗಳ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಇದೀಗ ಅಳವಡಿಸಿರುವ ವಿದ್ಯುತ್ ದೀಪಗಳನ್ನು ತೆರವುಗೊಳಿಸಿ ಸುಣ್ಣ ಬಣ್ಣ ಬಳಿಯದಿದ್ದಲ್ಲಿ ಸೆ.24ರಿಂದ ಕಾವೇರಿ ಕಲಾಕ್ಷೇತ್ರದ ಎದುರು ಅಹೋರಾತ್ರಿ ಧರಣಿ ಸತ್ಯಾಗ್ರಹ ಆರಂಭಿಸುವುದಾಗಿ ಎಚ್ಚರಿಕೆ ನೀಡಿದರು. ಅಭಿವೃದ್ಧಿ ಕಾರ್ಯಗಳಿಗಾಗಿ ನಗರಸಭೆಗೆ ಸರ್ಕಾರದಿಂದ ಕೋಟ್ಯಾಂತರ ರೂ. ಅನುದಾನ ಬರುತ್ತದೆ. ಆದರೆ ನಗರದ ಹೃದಯ ಭಾಗದಲ್ಲಿರುವ ಕಾವೇರಿ ಕಲಾಕ್ಷೇತ್ರವನ್ನು ಅಭಿವೃದ್ಧಿಪಡಿಸದೆ ಕಡೆಗಣಿಸಲಾಗಿದೆ. ವಿದ್ಯುತ್ ದೀಪಾಲಂಕಾರದ ಮೂಲಕ ಕಲಾಕ್ಷೇತ್ರದ ಅವ್ಯವಸ್ಥೆಯನ್ನು ಮರೆಮಾಚುವ ಯತ್ನ ನಡೆಯುತ್ತಿದೆ ಎಂದು ಆರೋಪಿಸಿದ ಅವರು, ಕನಿಷ್ಠ ಸುಣ್ಣ ಬಣ್ಣ ಬಳಿಯಲು ಕೂಡ ಹಣವಿಲ್ಲದ ಹೀನಾಯ ಸ್ಥಿತಿಯಲ್ಲಿ ನಗರಸಭೆ ಇದೆಯೇ ಎಂದು ಪ್ರಶ್ನಿಸಿದರು. ಮಡಿಕೇರಿ ಜನರು ವಿಜೃಂಭಣೆಯ ದಸರಾ ಸಂಭ್ರಮದಲ್ಲಿದ್ದಾರೆ, ಆದರೆ ನಗರಸಭೆ ಮಾತ್ರ ಕಳಾಹೀನ ವಾತಾವರಣದಲ್ಲಿ ದಸರಾ ಆಚರಿಸಲು ಸಿದ್ಧತೆ ಮಾಡಿಕೊಂಡಿದೆ. ಇದನ್ನು ಖಂಡಿಸಿ ಶನಿವಾರ ಧರಣಿ ಆರಂಭಿಸುವುದಾಗಿ ಪೀಟರ್ ತಿಳಿಸಿದ್ದಾರೆ.

ಮಡಿಕೇರಿ ಬ್ಲಾಕ್ ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಎಂ.ಎಂ.ಯಾಕುಬ್, ನಗರ ಉಪಾಧ್ಯಕ್ಷ ಎಂ.ಇ.ಫಾರುಕ್, ಸಂಘಟನಾ ಕಾರ್ಯದರ್ಶಿ ರೆಹಮಾನ್ ಖಾನ್ ಹಾಗೂ ಖಜಾಂಚಿ ಎಂ.ಹೆಚ್.ಅಝೀಜ್ ಈ ಸಂದರ್ಭ ಹಾಜರಿದ್ದರು.

ಒಂದನೇ ಪುಟದಿಂದ

45 ಮಂದಿ ಬಂಧನ

ಪೆರುಂಪಿಳವು, ಕಾರವಾನ ಆಶ್ರಫ್ ಮೌಲವಿ, ಸಾದಿಕ್ ಅಹಮ್ಮದ್, ಶಿಹಾಸ್ ಸನ್ ಆಫ್ ಹಸನ್, ಪಿ.ಅನ್ಸಾರಿ, ಎಂ.ಎಂ.ಮುಜೀಬ್ ಸನ್ ಆಫ್ ಮುಹಮ್ಮದ್ ಸೇರಿದಂತೆ ಒಟ್ಟು 19 ಮಂದಿ ಬಂಧಿತರು.

ತಮಿಳುನಾಡಿನಲ್ಲಿ ಒಂದು ಪ್ರಕರಣದಲ್ಲಿ ಎಂ.ಮೊಹಮ್ಮದ್ ಅಲಿ ಜಿನ್ನಾ, ಮಹಮ್ಮದ್ ಯೂಸಫ್, ಎ.ಎಸ್.ಇಸ್ಮಾಯಿಲ್ ಅಲಿಯಾಸ್ ಅಪ್ಪಮ್ಮ ಇಸ್ಮಾಯಿಲ್, ಮತ್ತೊಂದು ಪ್ರಕರಣದಲ್ಲಿ ಸಯ್ಯದ್ ಇಸಾಕ್, ಅಡ್ವಕೇಟ್ ಖಾಲಿದ್ ಮಹಮ್ಮದ್, ಎ.ಎಂ ಇದ್ರೀಸ್ ಅಲಿಯಾಸ್, ಅಹಮ್ಮದ್ ಇದ್ರೀಸ್, ಮೊಹಮ್ಮದ್ ಅಬುತಾಹೀರ್, ಎಸ್.ಖಾಜಾ ಮೈದೀನ್, ಯಾಸರ್ ಅರಾಫತ್, ಬರ್ಕತ್ ಉಲ್ಲಾ, ಫಯಾಜ್ ಅಹಮ್ಮದ್ ಸೇರಿದಂತೆ ಒಟ್ಟು 11 ಮಂದಿ ಬಂಧಿತರು.

ಆಂಧ್ರಪ್ರದೇಶದಲ್ಲಿ ಅಬ್ದಲ್ ರಹೀಂ, ಅಬ್ದುಲ್ ವಾಹಿದ್ ಅಲಿ, ಶೇಖ್ ಜಹರುಲ್ಲಾ, ರಿಯಾಜ್ ಅಹಮ್ಮದ್, ರಾಜಸ್ಥಾನದಲ್ಲಿ ಮೊಹಮ್ಮದ್ ಆಸೀಫ್ ಅಲಿಯಾಸ್ ಆಸೀಫ್, ಸಾದಿಕ್ ಶರಾಫ್ ತಲಪ್ಪಡ, ಉತ್ತರಪ್ರದೇಶದಲ್ಲಿ ವಾಸೀಂ ಅಹಮ್ಮದ್ ಮತ್ತು ತೆಲಂಗಾಣದಲ್ಲಿ ಅಬ್ದುಲ್ ವಾರೀಸ್ ಅವರನ್ನು ಬಂಧಿಸಲಾಗಿದೆ.

ಭಯೋತ್ಪಾದನೆ ಹಾಗೂ ಭಯೋತ್ಪಾದಕ ಚಟುವಟಿಕೆಗಳು, ಸಶಸ್ತ್ರ ತರಬೇತಿಗಾಗಿ ತರಬೇತಿ ಕೇಂದ್ರಗಳ ಆಯೋಜನೆ, ನಿಷೇದಿತ ಸಂಘಟನೆಗಳಿಗೆ ಸೇರ್ಪಡೆಗೊಳ್ಳುವಂತೆ ಜನರಿಗೆ ಪ್ರಚೋದನೆ ಆರೋಪದ ಮೇರೆಗೆ ದಾಖಲಾಗಿರುವ 5 ಪ್ರಕರಣಗಳಲ್ಲಿ ಲಭ್ಯವಾದ ಸಾಕ್ಷ್ಯಾಧಾರಗಳನ್ನು ಆಧರಿಸಿ ಇಂದು ಭಾರತದ 15 ರಾಜ್ಯಗಳ 93 ಸ್ಥಳಗಳಲ್ಲಿ, ಪಿಎಫ್ಐ ನಾಯಕರು ಹಾಗೂ ಸದಸ್ಯರ ಮನೆ ಹಾಗೂ ಕಚೇರಿಗಳ ಮೇಲೆ ದಾಳಿ ನಡೆಸಿ ತಪಾಸಣೆ ನಡೆಸಲಾಯಿತು ಎಂದು ಎನ್ಐಎ ಪ್ರಕಟಣೆ ತಿಳಿಸಿದೆ.

ತೆಲಂಗಾಣದ ನಿಜಾಮಾಬಾದ್ ಪೊಲೀಸ್ ಠಾಣೆಯಲ್ಲಿ 25 ಮಂದಿ ಪಿಎಫ್ಐ ಸದಸ್ಯರ ವಿರುದ್ಧ ಪ್ರಕರಣ ದಾಖಲಾಗಿತ್ತು. ಅದರ ಸಾಕ್ಷ್ಯ ಪುರಾವೆ ಹಾಗೂ ಸುಳಿವು ಆಧರಿಸಿ ಪಿಎಫ್ಐ ಉನ್ನತ ನಾಯಕರು, ಸದಸ್ಯರ ಮನೆ ಹಾಗೂ ಕಚೇರಿಗಳ ಮೇಲೆ ಇಂದು ದಾಳಿ ನಡೆಸಲಾಗಿದೆ. ಮಾಹಿತಿಗಳನ್ವಯ ವಿವಿಧ ರಾಜ್ಯಗಳಲ್ಲಿ ಕಳೆದ ಕೆಲ ವರ್ಷಗಳಿಂದ ಪಿಎಫ್ಐ ನಾಯಕರು ಹಾಗೂ ಸದಸ್ಯರ ವಿರುದ್ಧ ಭಾರೀ ಪ್ರಮಾಣದಲ್ಲಿ ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ ಎಂದು ಪ್ರಕಟಣೆ ತಿಳಿಸಿದೆ.

ಇನ್ನಿತರ ಧಾರ್ಮಿಕ ಸಂಘಟನೆಗಳಲ್ಲಿ ಗುರುತಿಸಿಕೊಂಡಿರುವವರನ್ನು ಗುರಿಯಾಗಿಸಿಕೊಂಡು ದಾಳಿ, ಇಸ್ಲಾಮಿಕ್ ಸ್ಟೇಟ್ ಬೆಂಬಲಿಸಿ ವಿಧ್ವಂಸಕ ಕೃತ್ಯಗಳನ್ನು ನಡೆಸುವ ಮೂಲಕ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡುವುದು ಇವರ ಉದ್ದೇಶವಾಗಿತ್ತು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದ್ದು, ಇಂದಿನ ದಾಳಿ ವೇಳೆ ಕೆಲ ಮಹತ್ವದ ದಾಖಲೆ ಪತ್ರಗಳು, ನಗದು, ಮಾರಕಾಸ್ತ್ರಗಳು, ಅಪಾರ ಪ್ರಮಾಣದ ಡಿಜಿಟಲ್ ಡಿವೈಸ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಎನ್ಐಎ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ. ಪಿಎಫ್ಐಗೆ ಸಂಬಂಧಿಸಿದಂತೆ ಎನ್ಐಎ 19 ಪ್ರಕರಣಗಳ ತನಿಖೆ ನಡೆಸುತ್ತಿದ್ದು, ಅದರಲ್ಲಿ 5 ಪ್ರಕರಣಗಳಿಗೆ ಸಂಬಂಧಿಸಿದಂತೆ ಇಂದಿನ ದಾಳಿ ನಡೆದಿದೆ.

ಇಂದು ಇಡಿ ಮತ್ತು ಆಯಾ ರಾಜ್ಯಗಳ ಪೊಲೀಸರ ಸಹಕಾರದೊಂದಿಗೆ ಎನ್ಐಎ ಜಂಟಿ ಕಾರ್ಯಾಚರಣೆಯನ್ನು ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಂಗಾಣ, ಉತ್ತರಪ್ರದೇಶ, ರಾಜಾಸ್ಥಾನ್, ದೆಹಲಿ, ಅಸ್ಸಾಂ, ಮಧ್ಯಪ್ರದೇಶ, ಮಹಾರಾಷ್ಟ್ರ, ಗೋವಾ, ಪಶ್ಚಿಮ ಬಂಗಾಳ, ಬಿಹಾರ ಮತ್ತು ಮಣಿಪುರ ರಾಜ್ಯಗಳಲ್ಲಿ ನಡೆಸಿದೆ.

ಪಿಎಫ್ಐ ಮಾಜಿ ಜಿಲ್ಲಾಧ್ಯಕ್ಷ ವಶಕ್ಕೆ



ಹಾಕಿ, ತಮ್ಮ ಆಕ್ರೋಶ ವ್ಯಕ್ತಪಡಿಸಿದರಲ್ಲದೇ, ಖಲೀಂವುಲ್ಲಾರನ್ನು ಕರೆದೊಯ್ಯುತ್ತಿದ್ದ ಪೊಲೀಸ್ ವಾಹನವನ್ನು ಅಡ್ಡಗಟ್ಟಿದರು. ಈ ಸಂದರ್ಭ ಕೆಲಕಾಲ ಸ್ಥಳದಲ್ಲಿ ಪ್ರಕ್ಷುಬ್ಧ ವಾತಾವರಣ ಉಂಟಾಗಿತ್ತು. ಕಡೆಗೆ ಸಿಸಿಬಿ ಪೊಲೀಸರ ಭದ್ರತೆಯೊಂದಿಗೆ ಆತನನ್ನು ಬೆಂಗಳೂರಿಗೆ ಕರೆದೊಯ್ಯಲಾಯಿತು. ಬೆಂಬಲಿಗರು ಬೆಂಗಳೂರಲ್ಲೂ ಪ್ರತಿಭಟನೆ ಮಾಡುತ್ತೇವೆ ಎಂದು ಘೋಷಣೆ ಕೂಗುತ್ತಾ ಆ ವಾಹನವನ್ನು ಹಿಂಬಾಲಿಸಿದರು.

ದ್ರೌಪದಿ ಮುರ್ಮುಗೆ ಆಹ್ವಾನ

ಸೆ.26ರಂದು ಬೆಳಗ್ಗೆ ದೆಹಲಿಯಿಂದ ನೇರವಾಗಿ ವಿಶೇಷ ವಿಮಾನದಲ್ಲಿ ಮೈಸೂರಿಗೆ ಆಗಮಿಸಲಿರುವ ರಾಷ್ಟ್ರಪತಿಗಳನ್ನು ಮಂಡಕಳ್ಳಿಯ ವಿಮಾನ ನಿಲ್ದಾಣದಲ್ಲಿ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಆತ್ಮೀಯವಾಗಿ ಬರಮಾಡಿಕೊಳ್ಳುವರು. ನಂತರ ಕಾರಿನಲ್ಲಿ ಚಾಮುಂಡಿಬೆಟ್ಟಕ್ಕೆ ತೆರಳಲಿರುವ ಮುರ್ಮು ಅಂದು ಬೆಳಗ್ಗೆ 9.45 ರಿಂದ 10.05 ಗಂಟೆಯೊಳಗೆ ಸಲ್ಲುವ ಶುಭ ವೃಶ್ಚಿಕ ಲಗ್ನದಲ್ಲಿ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸುವ ಮೂಲಕ ಈ ಬಾರಿಯ ದಸರಾ ಮಹೋತ್ಸವಕ್ಕೆ ಚಾಲನೆ ನೀಡುವರು. ಬಳಿಕ ಅವರು ಮಧ್ಯಾಹ್ನ 3 ಗಂಟೆಗೆ ಹುಬ್ಬಳ್ಳಿಗೆ ತೆರಳಿ, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯಿಂದ ಹಮ್ಮಿಕೊಂಡಿರುವ ಪೌರ ಸನ್ಮಾನ ಸ್ವೀಕರಿಸಿ, ಸಂಜೆ ನವದೆಹಲಿಗೆ ಹಿಂದಿರುಗುವರು ಎಂದು ಮೂಲಗಳು ತಿಳಿಸಿವೆ.

ಬಿಜೆಪಿಯಿಂದ ಸ್ಕ್ಯಾಮ್ ರಾಮಯ್ಯ!

ಲೂಟಿ, ಮೊಟ್ಟೆ ಖರೀದಿಯಲ್ಲಿ ಕೋಟಿ ರೂ. ಲೂಟಿ, ವಿದ್ಯಾರ್ಥಿ ಗಳ ಲ್ಯಾಪ್‌ಟಾಪ್ ಖರೀದಿಯಲ್ಲೂ ಅಕ್ರಮ, ವಿದ್ಯುತ್ ಖರೀದಿ, ಬೋರ್‌ವೆಲ್ ಹಗರಣ ಹೀಗೆ ಸಿದ್ದರಾಮಯ್ಯ ಆಡಳಿತದಲ್ಲಿ ನಡೆದಿರುವ ಭ್ರಷ್ಟಾಚಾರಗಳನ್ನು ದಾಖಲೆ ಸಮೇತ ಪುಸ್ತಕದಲ್ಲಿ ಎಳೆ ಎಳೆಯಾಗಿ ಬಿಡಿಸಿಡಲಾಗಿದೆ. ಈ ಎಲ್ಲಾ ಹಗರಣಗಳಿಗೆ ಸಂಬಂಧಿಸಿದಂತೆ ನಮ್ಮ ಸರ್ಕಾರ ತನಿಖೆ ನಡೆಸಿ, ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸಲಿದೆ ಎಂದರು. ಸಿದ್ದರಾಮಯ್ಯ ತಮ್ಮ ಆಡಳಿತದಲ್ಲಿ ನಡೆದಿರುವ ಹಗರಣಗಳು ಬಯಲಾಗಬಾರದೆಂದು ಲೋಕಾಯುಕ್ತವನ್ನು ಮುಚ್ಚಿ, ತಮ್ಮ ಕಪಿಮುಷ್ಠಿಯಲ್ಲಿ ಎಸಿಬಿ ರಚನೆ ಮಾಡಿದರು.

ಮೂರು ಜನ ಕೆಂಪಣ್ಣರ ಮೂಲಕ ಆಡಳಿತ ಮಾಡಿದ್ದ ಸಿದ್ದರಾಮಯ್ಯ ಇದೀಗ ಕೆಂಪಣ್ಣ ಎನ್ನುವ ಗುತ್ತಿಗೆದಾರರ ಮೂಲಕ ರಾಜಕೀಯ ಮಾಡುತ್ತಿದ್ದಾರೆ ಎಂದು ದೂರಿದರು. ಅಭಿವೃದ್ಧಿಯನ್ನೇ ಪ್ರಮುಖ ಉದ್ದೇಶವಾಗಿಟ್ಟುಕೊಂಡು ಆಡಳಿತ ನಡೆಸುತ್ತಿರುವ ನಮ್ಮ ಬಿಜೆಪಿ ಸರ್ಕಾರದ ಸಾಧನೆಗಳು ಸಾಮಾನ್ಯ ಜನರಿಗೆ ತಲುಪುತ್ತಿದ್ದು, ಈ ಕಾರ್ಯ ಚಟುವಟಿಕೆಗಳ ಬಗ್ಗೆ ಜನರು ಸಂತೃಪ್ತ ಭಾವ ಹೊಂದಿದ್ದಾರೆ.

ಬಸವರಾಜ ಬೊಮ್ಮಾಯಿ ಅವರು ಅಧಿಕಾರ ವಹಿಸಿಕೊಂಡ ತಕ್ಷಣವೇ ಘೋಷಣೆ ಮಾಡಿದ ಅನ್ನದಾತರ ಮಕ್ಕಳಿಗೆ ವಿದ್ಯಾನಿಧಿ ಯೋಜನೆ, ಹಿರಿಯ ನಾಗರಿಕರು, ವಿಧವೆಯರು, ಅಬಲೆಯ ಪಿಂಚಣಿ ಹೆಚ್ಚಳ, ಸ್ವಾತಂತ್ರ್ಯ ಅಮೃತ ಮಹೋತ್ಸವ ಯೋಜನೆಗಳು, ಹೀಗೆ ಹಲವಾರು ಜನಪರ ಯೋಜನೆಗಳನ್ನು ಜಾರಿಗೆ ತಂದಿದ್ದನ್ನು ಸಹಿಸದ ಕಾಂಗ್ರೆಸ್ ಜನರ ದಿಕ್ಕು ತಪ್ಪಿಸಲು 40 ಪರ್ಸೆಂಟ್ ಕಮಿಷನ್ ಮುಂದಿಟ್ಟುಕೊಂಡು ಹೋರಾಟ ನಡೆಸುತ್ತಿದೆ. ತಮ್ಮ ಬಳಿ ದಾಖಲೆಗಳಿದ್ದರೆ, ಲೋಕಾಯುಕ್ತ ಸೇರಿದಂತೆ ನ್ಯಾಯಾಂಗ ಸಂಸ್ಥೆಗಳಲ್ಲಿ ದೂರು ದಾಖಲಿಸಿ, ಕಾನೂನು ಕ್ರಮಕ್ಕೆ ಹೋರಾಡಬಹುದು. ಆದರೆ ಇದನ್ನು ಬಿಟ್ಟು, ಜನರ ದಾರಿ ತಪ್ಪಿಸಲು ಸುಳ್ಳು ಆರೋಪಗಳನ್ನು ಮಾಡಿ, ಕಾಂಗ್ರೆಸ್ ನಾಯಕರು ರಾಜಕೀಯ ಮಾಡುತ್ತಿದ್ದಾರೆ ಎಂದು ದೂರಿದರು.

ಮಸ್ತ್ ಮನರಂಜನೆ ಯುವ ದಸರಾ

ನಿರ್ದೇಶಕಿ, ಕಂಠದಾನ ಕಲಾವಿದೆ, ಪ್ರಸಿದ್ಧ ಗಾಯಕಿ ಶಮಿತಾ ಮಲ್ನಾಡ್ ಸಂಗೀತ ಸುಧೆ ಹರಿಸಲಿದ್ದಾರೆ. ಅಂದೂ ಕೂಡ ವಿಶಿಷ್ಟ ನೃತ್ಯ ರೂಪಕವನ್ನು ಸಂಯೋಜಿಸಲಾಗಿದೆ. ಅ.2ರಂದು ಪ್ರಸಿದ್ಧ ಸಂಗೀತ ನಿರ್ದೇಶಕ, ಗಾಯಕ ಅಮಿತ್ ತ್ರಿವೇದಿ ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಅಂದು ಚಿತ್ರತಾರೆಯರಾದ ಹರ್ಷಿಕಾ ಪೂಣಚ್ಚ ಹಾಗೂ ವಿಜಯ್ ರಾಘವೇಂದ್ರ ಭಾಗಿಯಾಗುವುದು ವಿಶೇಷ. ಕೊನೆಯ ದಿನ ಅ.3ರಂದು 'ವಿಕ್ರಾಂತ್ ರೋಣಾ' ಚಿತ್ರದ 'ರಾ... ರಾ... ರಕ್ಕಮ್ಮಾ...' ಹಾಡಿನ ಮೂಲಕ ಯುವಸಮೂಹಕ್ಕೆ ಕಿಕ್ಕೇರಿಸಿರುವ ಖ್ಯಾತ ಗಾಯಕಿ ಸುನಿಧಿ ಚೌಹಾನ್ ಸಂಗೀತ ಲೋಕದಲ್ಲಿ ತೇಲಿಸಲಿದ್ದಾರೆ. ಮತ್ತೊಂದು ವಿಶೇಷವೆಂದರೆ ಗಾಯಕಿ ಸುಪ್ರಿಯಾ ರಾಮ್, ಮಹಿಳಾ ಕಲಾವಿದರ ಬ್ಯಾಂಡ್ ಜೊತೆಗೆ ಕಾರ್ಯಕ್ರಮ ಪ್ರಸ್ತುತಪಡಿಸಲಿದ್ದಾರೆ. ಅಂದು ಕಣ್ಮನ ಸೆಳೆಯುವ ಫ್ಯಾಷನ್ ಷೋ ಕೂಡ ಇರಲಿದೆ.

ದಸರಾ ನಂತರ ವೆಚ್ಚ ಪ್ರಕಟ: ಜಿಲ್ಲಾ ಪೊಲೀಸ್ ಅಧೀಕ್ಷಕರ ಕಚೇರಿ ಸಭಾಂಗಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ 'ಯುವ ದಸರಾ' ಕಾರ್ಯಕ್ರಮದ ವಿವರ ನೀಡಿದ ಯುವ ದಸರಾ ಉಪ ಸಮಿತಿ ವಿಶೇಷಾಧಿಕಾರಿಯಾದ ಎಸ್ಪಿ ಆರ್.ಚೇತನ್, ಉದ್ಘಾಟನೆಗೆ ವಿಶೇಷ ಆಹ್ವಾನಿತರಾಗಿ ಆಗಮಿಸುತ್ತಿರುವ ನಟ ಸುದೀಪ್ ಅವರು ಯಾವುದೇ ಸಂಭಾವನೆ ಪಡೆಯುತ್ತಿಲ್ಲ. ಕಾರ್ಯಕ್ರಮ ನೀಡುವ ಕಲಾವಿದರ ಸಂಭಾವನೆ ಸೇರಿದಂತೆ 'ಯುವ ದಸರಾ' ಒಟ್ಟು ವೆಚ್ಚದ ಬಗ್ಗೆ ದಸರಾ ನಂತರ ವಿವರಣೆ ನೀಡಲಾಗುವುದು. ಕೆಲ ಕಲಾವಿದರನ್ನು ನೇರವಾಗಿ ಮತ್ತಷ್ಟು ಕಲಾವಿದರನ್ನು ಅವರು ಟೈಅಪ್ ಮಾಡಿಕೊಂಡಿರುವ ಏಜೆನ್ಸಿ ಕಂಪನಿಗಳ ಮೂಲಕ ಸಂಪರ್ಕಿಸಲಾಗಿದೆ. ಆದರೆ ಅವರ ಹಿಂದಿನ ಕಾರ್ಯಕ್ರಮಗಳಿಗೆ ಪಡೆದಿರುವ ಸಂಭಾವನೆ ಬಗ್ಗೆ ಮಾಹಿತಿ ಪಡೆದು ಅದರನ್ವಯ ಅಂತಿಮಗೊಳಿಸಲಾಗಿದೆ. ಯಾವುದೇ ರೀತಿ ದುಂದು ವೆಚ್ಚವಾಗದಂತೆ ಎಚ್ಚರ ವಹಿಸಲಾಗಿದೆ ಎಂದು ಸ್ಪಷ್ಟಪಡಿಸಿದರು. ಆದರೆ ಮತ್ತೊಂದು ಮೂಲದ ಪ್ರಕಾರ ಈ ಬಾರಿ ಕಲಾವಿದರ ಸಂಭಾವನೆಗಾಗಿಯೇ 1.50 ಕೋಟಿ ರೂ. ವೆಚ್ಚವಾಗುತ್ತಿದ್ದು, ಅದರಲ್ಲಿ ಗಾಯಕಿ ಸುನಿದಿ ಚೌಹಾನ್ ಹೆಚ್ಚು ಪಡೆದಿದ್ದಾರೆ ಎನ್ನಲಾಗಿದೆ.

'ಮೈಸೂರು ಗಾಂಧಿ ಹೆಚ್.ಸಿ.ದಾಸಪ್ಪ', 'ಕಿಂಗ್ ಮೇಕರ್ ಸಾಹುಕಾರ್ ಚೆನ್ನಯ್ಯ' ಕೃತಿಗಳ ಬಿಡುಗಡೆ

ಮಹನೀಯರ ಸ್ಮರಣೆಯಿಂದ ಅವರ ಆದರ್ಶ ಪಾಲನೆಗೆ ಪ್ರೇರೇಪಣೆ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಭಿಮತ



ಮೈಸೂರಿನ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಗುರುವಾರ 'ಮೈಸೂರು ಗಾಂಧಿ ಹೆಚ್.ಸಿ.ದಾಸಪ್ಪ' ಮತ್ತು 'ಕಿಂಗ್ ಮೇಕರ್ ಸಾಹುಕಾರ್ ಚೆನ್ನಯ್ಯ' ಕೃತಿಗಳನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಬಿಡುಗಡೆ ಮಾಡಿದರು.

ಮೈಸೂರು,ಸೆ.22(ಪಿಎಂ)- ಮೈಸೂರು ಗಾಂಧಿ ಎಂದೇ ಖ್ಯಾತನಾಮರಾದ ಹೆಚ್.ಸಿ. ದಾಸಪ್ಪ ಹಾಗೂ ಕಿಂಗ್ ಮೇಕರ್ ಸಾಹುಕಾರ್ ಚೆನ್ನಯ್ಯ ಸಮಾಜಮುಖಿ ಕೊಡುಗೆ ನೀಡಿದ್ದಾರೆ. ಇಂತಹ ಮಹನೀಯರನ್ನು ನಾವು ನೆನಸಿಕೊಳ್ಳಬೇಕು. ಆಗಲೇ ನಮಗೆ ಅವರ ಆದರ್ಶಗಳ ಪಾಲನೆಗೆ ಪ್ರೇರೇಪಣೆ ಆಗಲು ಸಾಧ್ಯ ಎಂದು ಅವಧೂತ ದತ್ತಪೀಠದ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಅಭಿಪ್ರಾಯಪಟ್ಟರು.

ಮೈಸೂರಿನ ನಂಜನಗೂಡು ರಸ್ತೆಯಲ್ಲಿರುವ ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಹಾಗೂ ಹೆಚ್.ಸಿ.ದಾಸಪ್ಪ ವಿಚಾರ ಸಂಸ್ಥೆ ಜಂಟಿ ಆಶ್ರಯದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪತ್ರಕರ್ತ-ಲೇಖಕ ಎಸ್.ಪ್ರಕಾಶ್‌ಬಾಬು ಅವರ 'ಮೈಸೂರು ಗಾಂಧಿ ಹೆಚ್.ಸಿ.ದಾಸಪ್ಪ' ಮತ್ತು 'ಕಿಂಗ್ ಮೇಕರ್ ಸಾಹುಕಾರ್ ಚೆನ್ನಯ್ಯ' ಕೃತಿಗಳನ್ನು ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ನಮ್ಮ ಹಿರಿಯರು ನೀಡಿದ ಕೊಡುಗೆಗಳನ್ನು ನೆನಸಿಕೊಳ್ಳುವುದು ನಮ್ಮ ಧರ್ಮ. ಆದರೆ ಈಗ ಸಮಯ ಇಲ್ಲವೆಂದು ಸ್ಮರಿಸಿಕೊಳ್ಳದಿರುವುದೇ ಇಂದು ಹೆಚ್ಚಾಗುತ್ತಿದೆ. ಸಮಯ ತಾನಾಗಿಯೇ ಬರುವುದಿಲ್ಲ. ಅದನ್ನು ನಾವು ಮಾಡಿಕೊಳ್ಳಬೇಕು. ಈ ಇಬ್ಬರು ಮಹನೀಯರು ತಮ್ಮ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ಪ್ರಸಿದ್ಧರು. ಅವರ ಸಾಧನೆ-ಕೊಡುಗೆ ಸ್ಮರಿಸಬೇಕು ಎಂದು ಹೇಳಿದರು.

'ಮೈಸೂರು ಗಾಂಧಿ ಹೆಚ್.ಸಿ.ದಾಸಪ್ಪ' ಕೃತಿ ಕುರಿತು ಮಾತನಾಡಿದ ಅವಧೂತ ದತ್ತಪೀಠದ ಆಸ್ಥಾನ ವಿದ್ವಾನ್‌ಗಳೂ ಆದ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ (ಸಿಪಿಕೆ), ಹೆಚ್.ಸಿ.ದಾಸಪ್ಪ ಅವರ ಜೀವನ ಕಥನ ಕುರಿತು ಎಸ್.ಪ್ರಕಾಶ್‌ಬಾಬು ತಮ್ಮ ನುರಿತ ಲೇಖನಿ ಮೂಲಕ ಮಹತ್ವಪೂರ್ಣ ಕೃತಿಯನ್ನು ರೂಪಿಸಿದ್ದಾರೆ. 'ದಾಸಪ್ಪನವರನ್ನು ವೈಯಕ್ತಿಕವಾಗಿ ಬಲ್ಲೆ. ಶುದ್ಧ ಮತ್ತು ಪ್ರಾಮಾಣಿಕರು' ಎಂದು ಗಾಂಧಿಯವರ ಹೇಳಿಕೆಯನ್ನೂ ಕೃತಿಯಲ್ಲಿ ಉಲ್ಲೇಖ ಮಾಡಿದ್ದಾರೆ ಜೊತೆಗೆ 'ಗಾಂಧಿಯವರ ಬಾಯಿಗೆ ಅವರ ಅಂತಿಮ ಘಳಿಗೆಯಲ್ಲಿ ಗಂಗಾ ಜಲ ಬಿಟ್ಟ ಪುಣ್ಯಾತ್ಮರು ದಾಸಪ್ಪ' ಎಂಬ ಅಪರೂಪದ ಸಂಗತಿಯನ್ನು ಉಲ್ಲೇಖಿಸಿದ್ದಾರೆ ಎಂದು ತಿಳಿಸಿದರು.

ಸ್ವಾತಂತ್ರ್ಯ ಯೋಧ, ಸಾಮಾಜಿಕ ನ್ಯಾಯ ಮತ್ತು ಅಸ್ಪೃಶ್ಯತಾ ನಿವಾರಣೆಯ ನೇತಾರ ಎಂಬ ಮೂರು ಆಯಾಮಗಳಲ್ಲಿ ದಾಸಪ್ಪರನ್ನು ಗುರುತಿಸಬಹುದು. ಈ ಕೃತಿಯಲ್ಲಿ ದಾಸಪ್ಪರ ಬದುಕಿನ ಬೃಹತ್ ಕಥನ ಇದೆ. ಅಲ್ಲದೆ, ದಾಸಪ್ಪ ಅವರೂ ಸೇರಿದಂತೆ ಮೂವರ ಚರಿತ್ರೆ ಕೃತಿಯಲ್ಲಿ ಅನಾವರಣಗೊಂಡಿದೆ. ದಾಸಪ್ಪ ಅವರ ತಂದೆ ಕೆ.ಹೆಚ್. ರಾಮಯ್ಯ ಬಗ್ಗೆಯೂ ಕೃತಿಯಲ್ಲಿ ಮಾಹಿತಿ ಇದ್ದು, ದಾಸಪ್ಪ ಅವರ ಪತ್ನಿ ಯಶೋಧರ ದಾಸಪ್ಪ ಅವರ ಬಗ್ಗೆಯೂ ಬೆಳಕು ಚೆಲ್ಲಲಾಗಿದೆ. ಕೃತಿಯಲ್ಲಿ 60 ಅಧ್ಯಾಯಗಳಿದ್ದು, ಎಲ್ಲವೂ ಅರ್ಥವತ್ತಾಗಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಲೇಖಕರು ಕೃತಿಯ ಆರಂಭದಲ್ಲೇ ದಾಸಪ್ಪ ಮತ್ತು ಅವರ ಕುಟುಂಬವನ್ನು ಇತಿಹಾಸ ಮರೆತಿದೆ ಎಂದಿದ್ದಾರೆ. ಅಂದಿನ ಮೈಸೂರು ಸಂಸ್ಥಾನದಲ್ಲಿ ದಾಸಪ್ಪ ಹಿಂದುಳಿದ ವರ್ಗಗಳ ಶ್ರೇಯೋಭಿವೃದ್ಧಿಗೆ ಶ್ರಮಿಸಿದರು ಹಾಗೂ ಮೀಸಲಾತಿ ಜಾರಿಯಾಗಲು ಬೆಂಬಲವಾಗಿ ನಿಂತರು. ಇಂತಹ ಮಹನೀಯರನ್ನು ಇತಿಹಾಸ ಮರೆಯಲು ಸಾಧ್ಯವಿಲ್ಲ. ಹಾಗೆ ಮರೆತಿದ್ದರೆ ಈ ಕೃತಿ ಅನಾವರಣಗೊಳ್ಳುತ್ತಿರಲಿಲ್ಲ ಎಂದು ಪ್ರತಿಪಾದಿಸಿದರು.

ದಾಸಪ್ಪನವರು ಯಾವುದೋ ಒಂದು ಸಂದರ್ಭದಲ್ಲಿ ಅನಾರೋಗ್ಯಕ್ಕೆ ತುತ್ತಾಗಿದ್ದಾಗ ಅವರನ್ನು ಕಸ್ತೂರಿ ಬಾ ಅವರು ಆರೈಕೆ ಮಾಡಿರುವುದನ್ನು ಲೇಖಕರು ಸಂಶೋಧಿಸಿ ದಾಖಲಿಸಿದ್ದಾರೆ. ಅಸ್ಪೃಶ್ಯತೆ ನಿರ್ಮೂಲನೆಗೆ ದಾಸಪ್ಪ ಹೋರಾಟ ಮಾಡಿದ್ದವರು. ದುರಂತವೆಂದರೆ ಇಂದಿಗೂ ಅಸ್ಪೃಶ್ಯತೆ ಆಚರಣೆ ಜೀವಂತವಾಗಿದೆ. ಇಂತಹ ಮಹನೀಯರ ಜೀವನ ಚರಿತ್ರೆ ಓದುವುದರಿಂದ ನಮ್ಮ ಬದುಕು ಉದಾತ್ತಗೊಳ್ಳುತ್ತದೆ ಎಂದು ಹೇಳಿದರು.

'ಕಿಂಗ್ ಮೇಕರ್ ಸಾಹುಕಾರ್ ಚೆನ್ನಯ್ಯ' ಕೃತಿ ಕುರಿತು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮಾಶೇಖರ್ ಮಾತನಾಡಿ, ಈ ಕೃತಿಯಲ್ಲಿ ಸಮಗ್ರತೆ ಇದ್ದು, ಓದಿಸಿಕೊಂಡು ಹೋಗುತ್ತದೆ. ಸಾಹುಕಾರ್ ಚೆನ್ನಯ್ಯ ಅವರು ಹಠವಾದಿ. ಹಾಗಾಗಿಯೇ ತಮ್ಮ ರಾಜಕಾರಣದಲ್ಲಿ ಅನೇಕ ಅವಕಾಶಗಳಿಂದ ಅವರು ವಂಚಿತರಾದರು. ತಮ್ಮ ಮಾತೇ ನಡೆಯಬೇಕು ಎಂಬುದೇ ಅವರ ದೌರ್ಬಲ್ಯವಾಗಿತ್ತು. ಇಂತಹ ಮಹತ್ವದ ಅಂಶಗಳನ್ನು ಕೃತಿಯಲ್ಲಿ ದಾಖಲಿಸಲಾಗಿದೆ ಎಂದು ತಿಳಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ವಿದ್ಯಾವರ್ಧಕ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ಪಿ.ವಿಶ್ವನಾಥ್, ಹೆಚ್.ಸಿ. ದಾಸಪ್ಪ ವಿಚಾರ ಸಂಸ್ಥೆ ಕಾರ್ಯದರ್ಶಿ ಸರೋಜ ತುಳಸಿದಾಸ್, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಅಧ್ಯಕ್ಷ ಎಂ.ಚಂದ್ರಶೇಖರ್, ಕಾರ್ಯದರ್ಶಿ ಲತಾ ಮೋಹನ್, ಕೃತಿ ಕರ್ತೃ ಎಸ್.ಪ್ರಕಾಶ್ ಬಾಬು, ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಮತ್ತಿತರರು ಹಾಜರಿದ್ದರು.

ಸಾಹುಕಾರ್ ಚೆನ್ನಯ್ಯ ಅವರೊಂದಿಗೆ ತಮ್ಮ ಒಡನಾಟ ಸ್ಮರಿಸಿದ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೈಸೂರು,ಸೆ.22(ಪಿಎಂ)- ಸಾಹುಕಾರ್ ಚೆನ್ನಯ್ಯ ಅವರೊಂದಿಗೆ ತಾವು ಹೊಂದಿದ್ದ ಒಡನಾಟವನ್ನು ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ಸ್ಮರಿಸಿದರು.

ಕಾರಿನಲ್ಲಿ ಬೆಂಗಳೂರಿಗೆ ಹೋಗುತ್ತಿದ್ದಾಗ, ದಾರಿ ಮಧ್ಯೆ ಭೇಟಿಯಾಗಿ ಆಶ್ರಮಕ್ಕೆ ನಿವೇಶನವೊಂದನ್ನು ದಾನವಾಗಿ ನೀಡಿದ್ದನ್ನು ಸ್ಮರಿಸಿದ ಶ್ರೀಗಳು, ಮಂಡ್ಯ ಬಳಿ ನಮ್ಮ ಕಾರು ಕೆಟ್ಟು ನಿಂತಿತ್ತು. ಕಾರಿನ ರೇಡಿಯೇಟರ್‌ಗೆ ನೀರು ತರಿಸಿ ಹಾಕಿಸಿ ಪ್ರಯಾಣ ಬೆಳೆಸಲು ಸಾಹುಕಾರ್ ಚೆನ್ನಯ್ಯ ನೆರವಾಗಿದ್ದರು ಎಂದು ಶ್ರೀಗಳು ಹೇಳಿದರು.

ನಮ್ಮ ಕಾರು ಕೆಟ್ಟು ನಿಂತಿದ್ದ ದಾರಿಯಲ್ಲಿ ಸಾಹುಕಾರ ಚೆನ್ನಯ್ಯ ಅವರೂ ಕಾರಿನಲ್ಲಿ ಬರುತ್ತಿದ್ದರು. ನಮ್ಮ ಕಾರು ಕೆಟ್ಟು ನಿಂತಿದ್ದನ್ನು ಕಂಡ ಅವರು, ನಮ್ಮ ಬಳಿಗೆ ಬಂದು, 'ನೀವೇ ಅಲ್ಲವೇ ಗಣಪತಿ ಸಚ್ಚಿದಾನಂದ ಸ್ವಾಮೀಜಿ' ಎನ್ನುತ್ತಾ 'ನಿಮ್ಮ ಪೂರ್ತಿ ಮುಖ ನೋಡಬೇಕು' ಎಂದರು. ಬಳಿಕ 'ನೀವು ನಿವೇಶನ ಹುಡುಕುತ್ತಿರುವುದು ನನಗೆ ಗೊತ್ತಾಯಿತು. ನಜರ್‌ಬಾದಿನಲ್ಲಿ ನನ್ನದೊಂದು ದೊಡ್ಡ ನಿವೇಶನವಿದೆ. ಅದನ್ನು ನಿಮಗೆ ಕೊಡುತ್ತೇನೆ' ಎಂದರು. ಬೇಡವೆಂದರೂ ಕೇಳದೇ ಕೊಡುವ ತೀರ್ಮಾನ ಕೈಗೊಂಡಿದ್ದೇನೆ' ಎಂದು ಹೇಳಿ ಅವರು ತಮ್ಮ ಪ್ರಯಾಣ ಬೆಳೆಸಿದರು.

ಅವರು ಹೇಳಿದಂತೆ ನಜರ್‌ಬಾದಿನ ದೊಡ್ಡ ನಿವೇಶನವನ್ನು ನನ್ನ ಹೆಸರಿಗೆ ಮಾಡಿಯೇ ಬಿಟ್ಟರು. 'ನಿಮಗೆ ಕೊಟ್ಟಿದ್ದೇವೆ, ಯಾರಿಗಾದರೂ ಕೊಡಿ' ಎಂದಿದ್ದರು. ನಾವು ಈಗಿನ ಈ ಸ್ಥಳಕ್ಕೆ ಸ್ಥಳಾಂತರಗೊಂಡಾಗ, ಅವರು ದಾನವಾಗಿ ಕೊಟ್ಟಿದ್ದ ನಿವೇಶನ ಒಳ್ಳೆಯ ಬೆಲೆಗೆ ಮಾರಾಟವಾಯಿತು. ಅವರ ಸ್ಮರಣಾರ್ಥ ಅವರ ಹೆಸರಿನಲ್ಲಿ ನಾವಿಲ್ಲಿ ಹಲವು ಕೆಲಸ-ಕಾರ್ಯಗಳ ಮಾಡಿದ್ದೇವೆ. ನಾನು ಆಂಧ್ರಕ್ಕೆ ಹೋಗುತ್ತೇನೆ ಎಂದಾಗ 'ನೀವು ಇಲ್ಲೇ ಇರಿ' ಎಂದು ಮೈಸೂರಿನಲ್ಲಿ ನೆಲೆ ನಿಲ್ಲುವಂತೆ ಮಾಡಿದರು. ಇನ್ನು ಹೆಚ್.ಸಿ. ದಾಸಪ್ಪನವರ ಮಕ್ಕಳನ್ನು ಒಮ್ಮೆ ನೋಡಿದ ನೆನಪಿದೆ ಎಂದು ಹಳೇ ನೆನಪಿಗೆ ಶ್ರೀಗಳು ಜಾರಿದರು.

ಗಿಡಗಳನ್ನು ನೆಡುವ ಮೂಲಕ ಮೋದಿ ಹುಟ್ಟುಹಬ್ಬ ಆಚರಣೆ



ಮೈಸೂರು, ಸೆ.22(ಆರ್‌ಕೆಬಿ)- ಪ್ರಧಾನಿ ನರೇಂದ್ರ ಮೋದಿ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರ ಹಿಂದುಳಿದ ವರ್ಗ ಮೋರ್ಚಾ ವತಿಯಿಂದ ಸೇವಾ ಪಾಕ್ಷಿಕ ಕಾರ್ಯಕ್ರಮದಲ್ಲಿ ಗುರುವಾರ ಅರಳಿಮರದ ಗಿಡಗಳನ್ನು ನೆಡುವ ಮೂಲಕ ಆಚರಿಸಲಾಯಿತು.

ಚಾಮುಂಡೇಶ್ವರಿ ಕ್ಷೇತ್ರ ಗ್ರಾಮಾಂತರ ಹಿಂದುಳಿದ ವರ್ಗಗಳ ಅಧ್ಯಕ್ಷ ಶಿವಲಿಂಗೇಗೌಡ, ಕ್ಷೇತ್ರ ಉಸ್ತುವಾರಿ, ವಕೀಲ ಶಿವರಾಜ್, ಚಾಮುಂಡೇಶ್ವರಿ ಗ್ರಾಮಾಂತರ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್ ಅವರು ಗಿಡ ನೆಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಅರಳಿಮರದ ಗಿಡಗಳನ್ನು ಬೋಗಾದಿಯ ಮರಟಿಕ್ಯಾತನಹಳ್ಳಿ ಕೆ.ಎಂ.ಹಳ್ಳಿ ಸರ್ಕಾರಿ ಶಾಲೆಯಲ್ಲಿ ಶಾಲಾ ಮಕ್ಕಳು ಹಾಗೂ ಶಿಕ್ಷಕರ ಜೊತೆಗೂಡಿ ನೆಡುವ ಜೊತೆಗೆ ಮಕ್ಕಳಿಗೆ ಗಿಡ, ಮರ, ಪರಿಸರದ ಪ್ರಾಮುಖ್ಯತೆ ಕುರಿತು ಮನದಟ್ಟು ಮಾಡಿಕೊಡಲಾಯಿತು. ಕುವಾರಬೀಡು, ಬೀರಿಹುಂಡಿ, ಜಟ್ಟಿಹುಂಡಿ, ದೊಡ್ಡಮಾರಗೌಡನಹಳ್ಳಿ ಮುಂತಾದ ಕಡೆಗಳಲ್ಲಿಯೂ ಗಿಡಗಳನ್ನು ನೆಡಲಾಯಿತು.

ಈ ಸಂದರ್ಭದಲ್ಲಿ ಗ್ರಾಮಾಂತರ ಪ್ರಧಾನ ಕಾರ್ಯದರ್ಶಿ ಪೈಲ್ವಾನ್ ರವಿ, ಹಿಂದುಳಿದ ವರ್ಗ ನಗರ ಪ್ರಧಾನ ಕಾರ್ಯದರ್ಶಿ ಮಣಿರತ್ನಂ, ಕಾರ್ಯದರ್ಶಿ ಹರೀಶ್ ಅಂಕಿತ್, ಗ್ರಾಮಾಂತರ ಕಾರ್ಯದರ್ಶಿ ಸುನಿಲ್, ಕೃಷ್ಣ, ಮಾದೇಗೌಡ, ಹಿನಕಲ್ ಗಣೇಶ್ ಇನ್ನಿತರರು ಉಪಸ್ಥಿತರಿದ್ದರು.

ಮೈಸೂರು ವಿವಿಯಲ್ಲಿ ನಿಯಮಬಾಹಿರ ನೇಮಕ: ಡಾ.ಮಹದೇವ್ ಆರೋಪ

ಮೈಸೂರು, ಸೆ22(ಆರ್‌ಕೆಬಿ)- ಮೈಸೂರು ವಿಶ್ವ ವಿದ್ಯಾನಿಲಯಕ್ಕೆ ಭಾರತೀಯ ಕೃಷಿ ಕೌನ್ಸಿಲ್ ಕೇಂದ್ರದಿಂದ ಒಂದು ವರ್ಷದ ಅವಧಿಗೆ ನಿಯೋಜಿತರಾಗಿರುವ ಡಾ.ಚಂದ್ರಾಯಕ್ ಅವರನ್ನು ನಿಯಮಬಾಹಿರವಾಗಿ ಪ್ರೊಫೆಸರ್ ಎಂದು ವಿವಿಯ ವೆಬ್‌ಸೈಟ್‌ನಲ್ಲಿ ಬಿಂಬಿಸಲಾಗಿದೆ. ಜೊತೆಗೆ ಇವರೇ ಆರ್‌ಟಿಐ ಅಧಿಕಾರಿಯೂ ಆಗಿದ್ದು, ತಾತ್ಕಾಲಿಕ ನೌಕರರಾಗಿದ್ದರೂ ಸಹ ಸುಮಾರು 100 ಕೋಟಿ ಮೌಲ್ಯದ ಟೆಂಡರ್ ನೀಡುವ ಅಧಿಕಾರ ನೀಡಲಾಗಿದೆ ಎಂದು ಮೈಸೂರು ವಿವಿ ಯೋಜನಾ ಮಂಡಳಿ ಸದಸ್ಯ ಡಾ.ಕೆ.ಮಹದೇವ್ ಆರೋಪಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಈ ಕುರಿತ ದಾಖಲೆ ಪತ್ರ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇವರು ನಿಯೋಜಿತರಾಗಿರುವ ಕಾರಣ ವಿವಿಗೂ ಇವರಿಗೂ ಯಾವುದೇ ಸಂಬಂಧವಿಲ್ಲ. ಜೈವಿಕ ವಿಜ್ಞಾನ ವಿಭಾಗಕ್ಕೆ ಇವರು ನೇಮಕಗೊಂಡಿದ್ದರೂ ವಿವಿಯ ಪ್ರತಿಯೊಂದೂ ಟೆಂಡರ್ ಕರೆಯುವ ಅಧಿಕಾರ ನೀಡಲಾಗಿದೆ ಎಂದು ದೂರಿದರು.

ವಿದ್ಯಾರ್ಥಿಗಳು ದಾಖಲೆ ಪಡೆಯಲು ಅನುಕೂಲವಾಗುವಂತೆ ಕಿಯೋನಿಕ್ಸ್‌ಗೆ ಸುಮಾರು 1.80 ಕೋಟಿ ರೂ. ವರ್ಕ್‌ಶೀಟ್ ನೀಡಲಾಗಿದೆ. ಆದರೆ ಎಲ್ಲಿ ಹುಡುಕಿದರೂ ಈ ವೆಬ್‌ಸೈಟ್ ಇಲ್ಲವೇ ಇಲ್ಲ. ಹೀಗಾಗಿ ಚಂದ್ರನಾಯಕ್ ಹಾಗೂ ಅವರಿಗೆ ಕುಮ್ಮಕ್ಕು ನೀಡಿರುವ ಕುಲಪತಿ ಮೊದಲಾದವರು ವಿವಿಯ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ ಎಂದು ದೂರಿದರು. ತಾವು ಈ ಕುರಿತು ಲೋಕಾಯುಕ್ತರಿಗೆ ದೂರು ನೀಡಿದ್ದು, ರಾಜ್ಯಪಾಲರ ಗಮನಕ್ಕೂ ತಂದಿರುವುದಾಗಿ ತಿಳಿಸಿದರು.

ಮುಡಾದ ಉದ್ದೇಶಿತ ಕಮಾನುಗಳಿಗೆ ಒಡೆಯರುಗಳ ಹೆಸರಿಡಲು ವಿಚಾರ ವೇದಿಕೆ ಆಗ್ರಹ

ರಾಷ್ಟ್ರಪತಿ, ಮುಖ್ಯಮಂತ್ರಿಗೆ ಮನವಿ

ಮೈಸೂರು, ಸೆ.22(ಆರ್‌ಕೆಬಿ)- ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಮೈಸೂರಿನ ನಾಲ್ಕು ದಿಕ್ಕುಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ ಕಮಾನುಗಳಿಗೆ ಮೈಸೂರನ್ನು ಆಳಿದ ಒಡೆಯರ್‌ಗಳ ಹೆಸರುಗಳನ್ನು ನಾಮಕರಣ ಮಾಡುವ ಮೂಲಕ ಅವರಿಗೆ ಗೌರವ ಸಲ್ಲಿಸುವಂತೆ ಮೈಸೂರು ಮಹಾಪ್ರಭುಗಳ ವಿಚಾರ ವೇದಿಕೆ ಸರ್ಕಾರವನ್ನು ಒತ್ತಾಯಿಸಿದೆ.

ಈ ಸಂಬಂಧ ರಾಷ್ಟ್ರಪತಿ ಹಾಗೂ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದು, ನಗರಾಭಿವೃದ್ಧಿ ಪ್ರಾಧಿಕಾರದ ಉದ್ದೇಶಿತ ಪ್ರವೇಶ ದ್ವಾರಗಳಿಗೆ ಬೇರೆ ಹೆಸರುಗಳಿಗೆ ಬದಲಾಗಿ ಮೈಸೂರನ್ನು ಆಳಿದ ಅರಸರ ಹೆಸರಿಡುವಂತೆ ವೇದಿಕೆ ಮುಖ್ಯಸ್ಥರೂ ಆದ ಮೈಸೂರು ವಿವಿ ಪ್ರಾಚ್ಯವಸ್ತು ಸಂಶೋಧನಾಲಯದ ಮಾಜಿ ನಿರ್ದೇಶಕ ಡಾ.ಎಸ್.ಶಿವರಾಜಪ್ಪ ಗುರುವಾರ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಆಗ್ರಹಿಸಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್ ರಂಗರಾಜು, ಈ ಪ್ರವೇಶ ದ್ವಾರಗಳಿಗೆ ಮುಮ್ಮಡಿ ಕೃಷ್ಣರಾಜ ಒಡೆಯರ್, 10ನೇ ಚಾಮರಾಜ ಒಡೆಯರ್, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಜಯಚಾಮರಾಜ ಒಡೆಯರ್ ಅವರ ಹೆಸರಿಡಬೇಕು. ಅಲ್ಲದೆ ಮೈಸೂರಿನ ಪ್ರಮುಖ ಸ್ಥಳದಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ಪುತ್ಥಳಿ ಸ್ಥಾಪಿಸಬೇಕು ಎಂದು ಒತ್ತಾಯಿಸಿದರು.

ಮೈಸೂರು ನಗರವನ್ನು ಸಾಂಸ್ಕೃತಿಕ ಮತ್ತು ಶೈಕ್ಷಣಿಕವಾಗಿ ಬೆಳೆಸುವುದರಲ್ಲಿ ಒಡೆಯರುಗಳ ದೂರದೃಷ್ಟಿ, ಕಾರ್ಯಕ್ಷಮತೆ, ಜನಪರ ಕಾಳಜಿ ಕಾರಣವಾಗಿದೆ. ಹೀಗಾಗಿ ಉದ್ದೇಶಿತ ಪ್ರವೇಶದ್ವಾರಗಳಿಗೆ ಒಡೆಯರುಗಳ ಹೆಸರಿಡುವುದರಿಂದ ಅವರಿಗೆ ಗೌರವ ಸಲ್ಲಿಸಿದಂತಾಗಲಿದೆ. ಜೊತೆಗೆ ಮೈಸೂರಿನ ಘನತೆ ಇನ್ನಷ್ಟು ಹೆಚ್ಚಲಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಮುಕ್ತ ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಮುಖ್ಯಸ್ಥ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್, ಎನ್.ನಂಜುಂಡರಾಜೇ ಅರಸ್, ಬಿ.ಜಯದೇವರಾಜೇ ಅರಸ್ ಉಪಸ್ಥಿತರಿದ್ದರು.

ವಾಲ್ಮೀಕಿ ಶ್ರೀಗಳ ಧರಣಿಗೆ ಮನ್ನಣೆ ನೀಡದ ಸರ್ಕಾರ; ಆರೋಪ

ಸೆ.28ರೊಳಗೆ ಬೇಡಿಕೆ ಈಡೇರದಿದ್ದರೆ ಸರ್ಕಾರದ ವಾಲ್ಮೀಕಿ ಜಯಂತಿ ಬಹಿಷ್ಕಾರ

ಮೈಸೂರು, ಸೆ.22(ಆರ್‌ಕೆಬಿ)- ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೀಸಲಾತಿ ಹೆಚ್ಚಿಸಬೇಕೆಂಬ ವಾಲ್ಮೀಕಿ ಶ್ರೀಗಳ ಧರಣಿ ಸತ್ಯಾಗ್ರಹ 225 ದಿನ ತಲುಪಿದ್ದರೂ ಸರ್ಕಾರವಾಗಲೀ, ಮುಖ್ಯಮಂತ್ರಿಗಳಾಗಲೀ ನಿರ್ಲಕ್ಷ್ಯ ಧೋರಣೆ ತಾಳಿದೆ ಎಂದು ರಾಜ್ಯ ನಾಯಕರ ಹಿತರಕ್ಷಣಾ ವೇದಿಕೆ ಆರೋಪಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆ ಅಧ್ಯಕ್ಷ ದ್ಯಾವಪ್ಪ ನಾಯಕ, ಮುಖ್ಯಮಂತ್ರಿಗಳು ಯಾವುದೇ ಭರವಸೆಗಳನ್ನು ಈಡೇರಿಸದೆ ಶ್ರೀಗಳ ಧರಣಿಯನ್ನು ನಿರ್ಲಕ್ಷಿಸಿದ್ದಾರೆ ಎಂದು ದೂರಿದರು.

ಸೆ.28ರೊಳಗೆ ಬೇಡಿಕೆ ಈಡೇರಿಸುವಂತೆ ಶ್ರೀಗಳು ಸರ್ಕಾರಕ್ಕೆ ಗಡುವು ನೀಡಿದ್ದಾರೆ. ಮುಖ್ಯಮಂತ್ರಿಗಳು ಇದಕ್ಕೂ ಮನ್ನಣೆ ನೀಡದಿದ್ದರೆ ಈ ಬಾರಿಯ ಸರ್ಕಾರದ ವತಿಯಿಂದ ನಡೆಸಲಾಗುವ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮವನ್ನು ಎಸ್‌ಸಿ-ಎಸ್‌ಟಿ ಸಮುದಾಯ ಬಹಿಷ್ಕರಿಸಲಿದೆ ಎಂದು ಎಚ್ಚರಿಕೆ ನೀಡಿದರು.

ಸುದ್ದಿಗೋಷ್ಠಿಯಲ್ಲಿ ವೇದಿಕೆ ಪದಾಧಿಕಾರಿಗಳಾದ ಪ್ರಭಾಕರ್ ಹುಣಸೂರು, ಚನ್ನನಾಯಕ, ಮಂಜುನಾಥ್, ರೇಲ್ವೆ ಸಿದ್ದಯ್ಯ, ಪ್ರಕಾಶ್, ರಘು ಯಡಕೊಳ ಉಪಸ್ಥಿತರಿದ್ದರು.

ಭಾನವಿ ಆಸ್ಪತ್ರೆಯಲ್ಲಿ ಇಂದು ರಕ್ತದಾನ ಶಿಬಿರ: ಪೊಲೀಸರಿಗೆ ರೈನ್ ಜಾಕೆಟ್ ವಿತರಣೆ

ಮೈಸೂರು, ಸೆ.22(ಆರ್‌ಕೆಬಿ)- ಮೈಸೂರಿನ ಭಾನವಿ ಆಸ್ಪತ್ರೆಯ 10ನೇ ವಾರ್ಷಿಕೋತ್ಸವದ ಅಂಗವಾಗಿ ಶುಕ್ರವಾರ (ಸೆ.23) ಬೆಳಗ್ಗೆ 10 ಗಂಟೆಗೆ ರಕ್ತದಾನ ಶಿಬಿರ ಮತ್ತು 24 ಗಂಟೆಗಳ ನಿರಂತರ ಕಾರ್ಯ ನಿರ್ವಹಿಸುತ್ತಿರುವ ಕುವೆಂಪುನಗರ ಸಂಚಾರಿ ಮತ್ತು ಕಾನೂನು ಸುವ್ಯವಸ್ಥೆ ವಿಭಾಗದ ಪೊಲೀಸರಿಗೆ ರೈನ್ ಜಾಕೆಟ್ ವಿತರಿಸುವ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಾ.ಎನ್.ವಿಜಯ್ ಚೆಲುವರಾಜ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಆಸ್ಪತ್ರೆಯ ವೈದ್ಯರಾದ ಡಾ.ಮುರಳಿ ಬಿ.ಮೋಹನ್, ಆರ್.ಡಾ.ಅನಿತಾ ವಿ.ಹಿರೇಮಠ್, ಡಾ.ಸುಹಾಸ್ ಎಸ್.ಪತ್ತಾರ್, ಅಧೀಕ್ಷಕ ನಿರಂಜನಸ್ವಾಮಿ, ಪ್ರಧಾನ ವ್ಯವಸ್ಥಾಪಕ ಆರ್.ಪ್ರಶಾಂತ್ ಉಪಸ್ಥಿತರಿದ್ದರು.

ಸೆ.26ರಿಂದ 5 ದಿನ ಕೈಗಾರಿಕಾ ದಸರಾ

ವಿಚಾರ ಸಂಕಿರಣ, ವೆಂಡರ್ ಡೆವಲಪ್‌ಮೆಂಟ್ ಕಾರ್ಯಕ್ರಮ



ಮೈಸೂರು, ಸೆ.22(ಆರ್‌ಕೆಬಿ)- ದಸರಾ ಹಬ್ಬದ ಅಂಗವಾಗಿ ಸೆ. 26 ರಿಂದ 30ರವರೆಗೆ ಆಯೋಜಿಸಿರುವ ಕೈಗಾರಿಕಾ ದಸರಾ ಕಾರ್ಯಕ್ರಮ ವೇಳೆ ಉದ್ಯಮಿಗಳಾಗ ಬಯಸುವವರಿಗೆ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ವತಿಯಿಂದ ವಿವಿಧ ಕಾರ್ಯಕ್ರಮ ಆಯೋಜಿಸಲಾಗಿದೆ. ಹೀಗಾಗಿ ಆಸಕ್ತರು ಪ್ರಯೋಜನ ಪಡೆಯಬಹುದೆಂದು ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು ತಿಳಿಸಿದರು.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಐದು ದಿನದ ಕಾರ್ಯಕ್ರಮದಲ್ಲಿ ಸೆ.26 ಮತ್ತು 27ರಂದು ಮೈಸೂರು ವಿವಿ ವಿಜ್ಞಾನ ಭವನದಲ್ಲಿ ಕೈಗಾರಿಕಾ ವಿಚಾರ ಸಂಕಿರಣ, 28ರಂದು ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಕಟ್ಟಡದಲ್ಲಿ ವೆಂಡರ್ ಡೆವಲಪ್‌ಮೆಂಟ್ ಕಾರ್ಯಕ್ರಮ, 29 ಮತ್ತು 30ರಂದು ಉದ್ದಿಮೆದಾರರಿಗೆ, ವಿದ್ಯಾರ್ಥಿಗಳಿಗೆ ಕೈಗಾರಿಕಾ ಪ್ರವಾಸ ಏರ್ಪಡಿಸಲಾಗಿದೆ. 29ರಂದು ಎಂಎಸ್ಎಂಇ ಘಟಕಗಳಿಗೆ ಹಾಗೂ 30ರಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಘಟಕಗಳಿಗೆ ಪ್ರವಾಸ ಏರ್ಪಡಿಸಲಾಗಿದೆ. ನೋಂದಣಿ ಉಚಿತವಾಗಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗೆ ದೂ. 0821- 4250246 ಅನ್ನು ಸಂಪರ್ಕಿಸಬಹುದಾಗಿದೆ ಎಂದರು. ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿಗಳಾದ ಆರ್. ಮಂಜುನಾಥ್, ಎಸ್.ಆರ್.ಅಶೋಕ್, ವಿನೋದ್ ಜೈನ್, ಎ.ಕೆ.ಶಿವಾಜಿರಾವ್ ಉಪಸ್ಥಿತರಿದ್ದರು.

ದಸರಾ ನಡುವೆ ಕಾಟಾಚಾರದ ಜಯಂತಿ ಬೇಡ: ನಾಲ್ವಡಿ ಜಯಂತಿ ಪ್ರತ್ಯೇಕ ಆಚರಣೆಗೆ ಒತ್ತಾಯ

ಮೈಸೂರು, ಸೆ.22(ಆರ್‌ಕೆಬಿ)- ಸರ್ಕಾರ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿಯನ್ನು ದಸರಾ ಸಂದರ್ಭದಲ್ಲಿ ಅರಮನೆ ವೇದಿಕೆಯಲ್ಲಿ ಕಾಟಾಚಾರಕ್ಕೆ ಆಚರಿಸುವ ಬದಲಿಗೆ ಜಿಲ್ಲಾಡಳಿತವೇ ದಸರಾ ನಂತರ ಮೈಸೂರಿನ ಕಲಾಮಂದಿರದಲ್ಲಿ ಪ್ರತ್ಯೇಕವಾಗಿ ಆಚರಿಸಬೇಕು ಎಂದು ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣಾ ಸಮಿತಿ ಜಿಲ್ಲಾಡಳಿತವನ್ನು ಆಗ್ರಹಿಸಿದೆ.

ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮಾಜಿ ಮೇಯರ್ ಪುರುಷೋತ್ತಮ್, ಈ ಹಿಂದೆಯೇ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ದಿನದಂದು ಆಚರಿಸಲು ಚುನಾವಣಾ ನೀತಿ ಸಂಹಿತೆ ಅಡ್ಡಿಯಾಗಿತ್ತು. ಆದರೆ ಚುನಾವಣೆ ನಂತರ ನಾಲ್ವಡಿ ಜಯಂತಿ ಆಚರಣೆಯನ್ನು ಮರೆತ ಜಿಲ್ಲಾಡಳಿತ ಈಗ ಏಕಾಏಕಿ ದಸರಾ ಕಾರ್ಯಕ್ರಮದ ನಡುವೆ ನಾಲ್ವಡಿ ಜಯಂತಿ ಆಚರಣೆಯನ್ನು ಕಾಟಾಚಾರಕ್ಕೆ ಎಂಬಂತೆ ಆಚರಿಸಲು ಮುಂದಾಗಿದೆ. ಇದು ನಾಲ್ವಡಿ ಅವರಿಗೆ ಜಿಲ್ಲಾಡಳಿತ ಮಾಡುತ್ತಿರುವ ಅಪಮಾನವಾಗಲಿದೆ. ಹಾಗಾಗಿ ಇದಕ್ಕೆ ನಮ್ಮ ವಿರೋಧವಿದೆ ಎಂದು ಹೇಳಿದರು.

ಅಂದಿನ ರಾಜ ಸಂಸ್ಥಾನಗಳಲ್ಲಿ ಪ್ರಜಾಪ್ರಭುತ್ವಕ್ಕೆ ಗೌರವ ನೀಡಿದವರು ನಾಲ್ವಡಿ ಅವರಾಗಿದ್ದಾರೆ. ಅವರ ಇತಿಹಾಸವನ್ನು ಮಕ್ಕಳಿಗೆ ತಿಳಿಸಬೇಕಾದ ಅಗತ್ಯವಿದೆ. ಆದರೆ ದಸರಾ ವೇಳೆ ಅರಮನೆ ವೇದಿಕೆಯಲ್ಲಿನ ಕಾರ್ಯಕ್ರಮದ ಸಂದರ್ಭದಲ್ಲಿ ಇದಕ್ಕೆ ಅವಕಾಶವಿರುವುದಿಲ್ಲ. ಹೀಗಾಗಿ ನಿರ್ದಿಷ್ಟ ದಿನಾಂಕದಂದು ಕಲಾಮಂದಿರದಲ್ಲಿಯೇ ಆಚರಿಸಬೇಕೆಂದು ಒತ್ತಾಯಿಸಿದರು.

ನಂತರ ಮಾತನಾಡಿದ ಪ್ರೊ.ಪಿ.ವಿ.ನಂಜರಾಜ ಅರಸ್, ಪಕ್ಷಾಂತರ ಮಾಡಿ ನೈತಿಕತೆ ಇಲ್ಲದೇ ಸಚಿವರಾದವರಿಗೆ ನಾಲ್ವಡಿ ಅವರ ಬಗ್ಗೆ ಏನೇನೂ ತಿಳಿದಿಲ್ಲ. ಆದ್ದರಿಂದ ಅರಮನೆ ವೇದಿಕೆಯಲ್ಲಿಯೇ ದಸರಾ ವೇಳೆ ಆಚರಿಸುವುದಾಗಿ ಪಟ್ಟು ಹಿಡಿದಿದ್ದಾರೆ. ಇದನ್ನು ಯಾರೂ ಒಪ್ಪಲು ಸಾಧ್ಯವಿಲ್ಲ. ನಾಲ್ವಡಿ ಜಯಂತಿಯನ್ನು ಜಿಲ್ಲಾಡಳಿತ ಪ್ರತ್ಯೇಕ ದಿನಾಂಕ ಪ್ರಕಟಿಸಿ ಆಚರಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಸಿದ್ದರಾಜು ಸೋಸಲೆ, ಅರಮವಿಂದ ಶರ್ಮ, ಹೆಚ್.ಎಲ್.ಯಮುನಾ ಇನ್ನಿತರರು ಉಪಸ್ಥಿತರಿದ್ದರು.

ನಾಳೆಯಿಂದ ಗ್ರೇಟ್ ಬಾಂಬೆ ಸರ್ಕಸ್ ಪ್ರದರ್ಶನ; ಈ ಬಾರಿ ವಿಶೇಷ ಆಕರ್ಷಣೆ

ಮೈಸೂರು, ಸೆ.22(ಆರ್‌ಕೆಬಿ)- ದಸರಾ ಹಬ್ಬದ ಮುಖ್ಯ ಆಕರ್ಷಣೆಯಾದ ಗ್ರೇಟ್ ಬಾಂಬೆ ಸರ್ಕಸ್ ಪ್ರದರ್ಶನ ಸೆ.24ರಿಂದ ಪ್ರಾರಂಭವಾಗಲಿದೆ ಎಂದು ಸರ್ಕಸ್ ಕಂಪನಿಗಳ ಅಧ್ಯಕ್ಷ ನಾಗೇಶ್ ತಿಳಿಸಿದರು.



ಮೈಸೂರು ಪತ್ರಕರ್ತರ ಭವನದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಮೃಗಾಲಯ ಹಿಂಭಾಗದಲ್ಲಿನ ನಿವೇಶನದಲ್ಲಿ 45 ದಿನಗಳ ಕಾಲ ಸರ್ಕಸ್ ನಡೆಯಲಿದೆ. ಪ್ರತಿದಿನ ಮೂರು ಪ್ರದರ್ಶನಗಳಿದ್ದು, 100, 200, 300 ಮತ್ತು400 ರೂ.ಗಳ ಪ್ರವೇಶ ಟಿಕೆಟ್ ದರ ನಿಗದಿಪಡಿಸಲಾಗಿದೆ ಎಂದರು.

ಪ್ರದರ್ಶನದಲ್ಲಿ ನಿಷೇಧಿತ ಆನೆ, ಹುಲಿ, ಸಿಂಹ ಇರುವುದಿಲ್ಲ. ಬದಲಾಗಿ ಕುದುರೆ, ಒಂಟೆ, ಕಡುಗೆಂಪು ಮಕಾವ್, ನೀಲಿ, ಹಳದಿ ಮಕಾವ್, ಆಫ್ರಿಕನ್ ಲೋರಿ, ಆಫ್ರಿಕನ್ ಗ್ರೇ ಗಿಳಿ ಇನ್ನಿತರ ಪ್ರಾಣಿಗಳು ಭಾಗವಹಿಸಿ ಜನರಿಗೆ ಮನರಂಜನೆ ನೀಡಲಿವೆ ಎಂದು ಹೇಳಿದರು. ಇಥಿಯೋಪಿಯಾ ಮತ್ತು ರಷ್ಯನ್ ಕಲಾವಿದರು ಪ್ರದರ್ಶನ ನೀಡಲಿದ್ದು, ಪ್ರದರ್ಶನದ ಒಂದು ದಿನ ನಗರದ ಶಕ್ತಿಧಾಮ ಮಕ್ಕಳಿಗೆ ಉಚಿತವಾಗಿ ವೀಕ್ಷಿಸಲು ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸರ್ಕಸ್ ಮಾಲೀಕರಾದ ಸಂಜಯ್, ಪ್ರೇಮನಾಥ್ ಉಪಸ್ಥಿತರಿದ್ದರು.



ಭಾರತದ ಸ್ವಾತಂತ್ರ್ಯ 'ಅಮೃತ ಮಹೋತ್ಸವ' ಬಿಂಬಿಸಿದ ಯುವ ಸಂಭ್ರಮ

ನೃತ್ಯ, ಜಾನಪದ ಕಲಾ ಪ್ರಕಾರಗಳ ಝಲಕ್


ಟಿ.ನರಸೀಪುರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳಿಂದ 'ಆಜಾದಿ ಕಾ ಅಮೃತ ಮಹೋತ್ಸವ'


ಜಾನಪದ ಕಲಾಪ್ರಕಾರಗಳ ನೃತ್ಯ ಪ್ರದರ್ಶನ ನೀಡಿದ ಹುಣಸೂರಿನ ಗಾವಡಗೆರೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು


ಮೈತ್ರಿ ಚಾರಿಟೇಬಲ್ ಟ್ರಸ್ಟ್‌ನ ವಿಶೇಷಚೇತನರಿಂದ 'ಅಪ್ಪು ಡ್ಯಾನ್ಸ್'

ಮೈಸೂರು, ಸೆ.22(ಎಂಕೆ)– ಜಾನಪದ ಝಲಕ್ ನಡುವೆ ಆಜಾದಿ ಕಾ ಅಮೃತ ಮಹೋತ್ಸವದ ಸಂಭ್ರಮ ವರ್ಣರಂಜಿತ ವೇದಿಕೆಯಲ್ಲಿ ಮನೆ ಮಾಡಿತ್ತು..!

ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ನಡೆಯುತ್ತಿರುವ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದಲ್ಲಿ ಜಾನಪದ ಕಲಾ ಪ್ರಕಾರಗಳ ಪ್ರದರ್ಶನ, ಅಪ್ಪು ಡ್ಯಾನ್ಸ್ ಹಾಗೂ 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಮೃತಗಳಿಗೆ ಸಾಕ್ಷಿಯಾಯಿತು.

ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಜಾನಪದ ಕಲಾವಿದರ ತಂಡ, ಹುಣಸೂರಿನ ಗಾವಡಗೆರೆಯ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ಯುವ ಸಂಭ್ರಮ' ವೇದಿಕೆಯಲ್ಲಿ ಸೃಷ್ಟಿಸಿದ 'ಜಾನಪದ ಝಲಕ್' ಕಲಾಭಿಮಾನಿಗಳನ್ನು ಕುಣಿದು ಕುಪ್ಪಳಿಸುವಂತೆ ಮಾಡಿತು. ಸಾಹಸಮಯ ಪೂಜಾ ಕುಣಿತ, ಡೊಳ್ಳು ಕುಣಿತ, ಕೋಲು ಕುಣಿತ, ವೀರಗಾಸೆ, ಗಾರುಡಿ ಗೊಂಬೆ ಕುಣಿತ ರೋಮಾಂಚನ ನೀಡಿತು.

ಹಾಗೆಯೇ ಜಿಎಸ್‌ಎಸ್ ನಾರ್ಮನ್ ಕಾರ್ ಸಾರ್ಜೆಂಟ್ ವಾಣಿಜ್ಯ ಮತ್ತು ವ್ಯವಹಾರ ನಿರ್ವಹಣಾ ಕಾಲೇಜು, ಪಿರಿಯಾ ಪಟ್ಟಣದ ಬಿಜಿಎಸ್ ಪ್ರಥಮ ದರ್ಜೆ ಕಾಲೇಜು, ಸುತ್ತೂರಿನ ಜೆಎಸ್‌ಎಸ್ ಬಿಇಡಿ ಕಾಲೇಜು, ಕನಕಪುರ ತಾಲೂಕಿನ ಸಾತನೂರು ಗ್ರಾಮಾಂತರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ಕನ್ನಡ ನೆಲ–ಜಲ, ಭಾಷೆ ಕುರಿತು ಅಮೋಘ ನೃತ್ಯ ಪ್ರದರ್ಶನದ ಮೂಲಕ ಕನ್ನಡ ಅಭಿಮಾನವನ್ನು ಇಮ್ಮಡಿಗೊಳಿಸಿದರು.

ಹರ್ ಘರ್ ತಿರಂಗಾ: 75ನೇ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂಭ್ರಮವನ್ನು ನೃತ್ಯಾಭಿನಯದ ಮೂಲಕ ವ್ಯಕ್ತಪಡಿಸಿದ ಟಿ.ನರಸೀಪುರ ಸರ್ಕಾರಿ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು, ಸೈನಿಕರ ಸಾಹಸಗಳ ದೃಶ್ಯಗಳ ಪ್ರದರ್ಶನದೊಂದಿಗೆ ತಿರಂಗಾ ಹಾರಿಸಿದರು. ಹರ್‌ಘರ್ ತಿರಂಗಾ ಎನ್ನುವ ಧ್ಯೇಯದೊಂದಿಗೆ ಆಜಾದಿ ಕಾ ಅಮೃತ ಮಹೋತ್ಸವ ಆಚರಿಸಿದರು.

ಅಪ್ಪು ಡ್ಯಾನ್ಸ್: ಮೈಸೂರಿನ ಮೈತ್ರಿ ಚಾರಿಟೇಬಲ್ ಟ್ರಸ್ಟ್‌ನ ವಿಶೇಷಚೇತನರು 'ಅಪ್ಪು ಡ್ಯಾನ್ಸ್ ಡ್ಯಾನ್ಸ್ ಅಪ್ಪು' ಎಂಬ ಹಾಡಿಗೆ ಭರ್ಜರಿ ನೃತ್ಯ ಪ್ರದರ್ಶನ ನೀಡುವ ಅಪಾರ ಮೆಚ್ಚುಗೆ ಜೊತೆಗೆ ಶಿಳ್ಳೆ–ಚಪ್ಪಾಳೆಗಳ ಸುರಿಮಳೆ ಪಡೆದರು. ವಿಶೇಷಚೇತನರಾದರೂ ನಮಗೆ ಅವಕಾಶ ನೀಡಿ ಅನುಕಂಪ ಬೇಡ ಎಂಬುದನ್ನು ನೃತ್ಯದ ಮೂಲಕವೇ ಸಾಬೀತು ಮಾಡಿದರಲ್ಲದೆ ನೃತ್ಯವನ್ನು 'ಪವರ್‌ಸ್ಟಾರ್' ಪುನೀತ್ ರಾಜಕುಮಾರ್‌ಗೆ ಅರ್ಪಿಸಿದರು.

ಮಳವಳ್ಳಿ ಕಿರುಗಾವಲು ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಡ್ಯದ ಎಟಿಇ ಇನ್‌ಸ್ಟಿಟ್ಯೂಟ್ ಆಫ್ ಲರ್ನಿಂಗ್ ಸೈನ್ಸ್ ಸ್ವರ್ಣಸಂದ್ರ, ಮೈಸೂರು ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್ ಅಂಡ್ ಆರ್ಟ್ಸ್, ಮಹಾತ್ಮಗಾಂಧಿ ಬಿ.ಇಡಿ ಕಾಲೇಜು ಹಾಗೂ ಶಾಸ್ತ್ರಿ ಕಾಂಪೋಸಿಟ್ ಪಿಯು ಕಾಲೇಜು ವಿದ್ಯಾರ್ಥಿಗಳು ಮಹಿಳಾ ಸಬಲೀಕರಣ, ರಾಷ್ಟ್ರೀಯ ಭಾವೈಕ್ಯತೆ ಹಾಗೂ ಪರಿಸರ ಜಾಗೃತಿ ಕುರಿತು ನೃತ್ಯ ಪ್ರದರ್ಶನ ನೀಡಿದರು.

'ಯುವ ದಸರಾ' ಬಗ್ಗೆ ಅಭಿಪ್ರಾಯ ತಿಳಿಸಿ...!



'ಯುವ ಸಂಭ್ರಮ' 2022ರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ವಾಟ್ಸಾಪ್ ಮೂಲಕ ತಿಳಿಸಿ ಎಂದು ಎಲ್‌ಇಡಿ ಪರದೆ ಮೇಲೆ ತೋರಿಸಲು ಮುಂದಾದ ಆಯೋಜಕರು ಇನ್ನೂ ಆರಂಭವಾಗದ 'ಯುವ ದಸರಾ' ಬಗ್ಗೆ ಅಭಿಪ್ರಾಯ ತಿಳಿಸಿ ಎಂದು ತೋರಿಸುವ ಮೂಲಕ ಗೊಂದಲ ಉಂಟು ಮಾಡಿದರು. ಕೆಲ ನಿಮಿಷಗಳ ನಂತರ ತಮ್ಮ ತಪ್ಪಿನ ಅರಿವಾಗಿ ಸರಿಪಡಿಸಿದರು.

'ಯುವ ಸಂಭ್ರಮ'ದಲ್ಲಿ ಚಂದನವನ ತಾರೆಗಳ ಹಿಂಡು...




ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ನಡೆಯುತ್ತಿರುವ 'ಯುವ ಸಂಭ್ರಮ'ಕ್ಕೆ ಚಂದನವನದ ತಾರೆಗಳು ಭೇಟಿ ನೀಡಿ ಯುವ ಸಮೂಹವನ್ನು ರಂಜಿಸಿದರು.

ಖ್ಯಾತ ನಿರ್ದೇಶಕ ಟಿ.ಎಸ್.ನಾಗಾಭರಣರ ಪುತ್ರ ಹಾಗೂ ನಿರ್ದೇಶಕ ಪನ್ನಗಾಭರಣ, 'ಹೊಂದಿಸಿ ಬರೆಯಿರಿ' ಚಲನಚಿತ್ರದ ನಟ–ನಟಿಯರಾದ ಪ್ರವೀಣ್, ಭಾವನಾ ರಾವ್, ಶ್ರೀಹರಿ, ಅರ್ಚನಾ ಜೋಯಿಸ್, ನಿರ್ದೇಶಕ ಜಗನ್ನಾಥ್ ತಾರಾ ಮೆರುಗು ನೀಡುವ ಮೂಲಕ ಯುವಕ–ಯುವತಿಯರನ್ನು ರಂಜಿಸಿದರಲ್ಲದೆ ತಮ್ಮ ಮುಂದಿನ ಸಿನಿಮಾ ನೋಡುವಂತೆ ಮನವಿ ಮಾಡಿದರು. ಇದೇ ವೇಳೆ 'ಹೊಂದಿಸಿ ಬರೆಯಿರಿ' ಚಿತ್ರದ ಟೀಸರ್ ಪ್ರದರ್ಶಿಸಲಾಯಿತು.

ಇಂದಿನಿಂದ ದೀಪಾಲಂಕಾರದ ನಡುವೆ ಗಜಪಡೆ ತಾಲೀಮು

- ಅರಮನೆಯಿಂದ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೂ 'ಗಜ ನಡಿಗೆ'
- ರಾಜ ಮಾರ್ಗದ ದೀಪಾಲಂಕಾರ ಬಲ್ಬ್‌ಗಳಿಂದ ಅಂಬಾರಿ ಸುರಕ್ಷತೆ ಪರಿಶೀಲನೆಗೂ ಕ್ರಮ


ದಸರಾ ಗಜಪಡೆಗೆ ಗುರುವಾರ ಆರ್‌ಎಂಸಿ ವೃತ್ತದವರೆಗೆ ತಾಲೀಮು ನಡೆಸಿ, ವಾಪಸ್ಸು ಕರೆದೊಯ್ಯಲಾಯಿತು.

ಇಂದು ಅಂತಿಮ ಹಂತದ ಸಿಡಿಮದ್ದು ತಾಲೀಮು

ನವರಾತ್ರಿ ಆರಂಭಕ್ಕೆ ಕೇವಲ 3 ದಿನ ಬಾಕಿ ಇರುವುದರಿಂದ ಅಂಬಾರಿ ಆನೆ ಅಭಿಮನ್ಯು ನೇತೃತ್ವದ ದಸರಾ ಗಜಪಡೆಯ 12 ಆನೆಗಳಿಗೆ ನಾಳೆ(ಸೆ.23) ಮಧ್ಯಾಹ್ನ 12ಕ್ಕೆ ಅಂತಿಮ ಹಂತದ ಕುಶಾಲತೋಪು ಸಿಡಿಸುವ ತಾಲೀಮು ನಡೆಸಲು ನಿರ್ಧರಿಸಲಾಗಿದೆ. ನಾಳೆ ನಡೆಯಲಿರುವ ಸಿಡಿಮದ್ದು ತಾಲೀಮು ಯಾವ ಸ್ಥಳದಲ್ಲಿ ನಡೆಸಬೇಕು ಎಂಬುದು ಬೆಳಗ್ಗೆ ನಿರ್ಧರಿಸಲಾಗುತ್ತದೆ. ಮೊದಲ ತಾಲೀಮು ವರಹಾ ದ್ವಾರದ ಸಮೀಪದ ಪಾರ್ಕಿಂಗ್ ಸ್ಥಳದಲ್ಲಿ ನಡೆಸಲಾಗಿತ್ತು. ಅರಮನೆಯ ಕಾಂಪೌಂಡ್ ಗೋಡೆ ಬಿರುಕು ಬಿಡುತ್ತದೆ ಎಂಬ ಆತಂಕದಿಂದ ದಸರಾ ವಸ್ತುಪ್ರದರ್ಶನದ ಪಾರ್ಕಿಂಗ್ ಸ್ಥಳದಲ್ಲಿ ಎರಡನೇ ಹಂತದ ಸಿಡಿಮದ್ದು ತಾಲೀಮು ನಡೆಸಲಾಗಿತ್ತು. ಅಂತಿಮ ಹಂತದ ಸಿಡಿಮದ್ದು ತಾಲೀಮು ಬಹುತೇಕ ದಸರಾ ವಸ್ತುಪ್ರದರ್ಶನ ಪಾರ್ಕಿಂಗ್ ಸ್ಥಳದಲ್ಲೇ ನಡೆಯಲಿದೆ ಎನ್ನಲಾಗಿದೆ. ಆದರೆ, ಜಂಬೂಸವಾರಿ ದಿನ ಕೋಟೆ ಮಾರಮ್ಮ ದೇವಾಲಯದ ಸಮೀಪದ ಮೈದಾನದಲ್ಲೇ ಕುಶಾಲತೋಪು ಸಿಡಿಸುವ ಸಂಪ್ರದಾಯ ಮುಂದುವರೆಸಲು ಉದ್ದೇಶಿಸಲಾಗಿದೆ ಎಂದು ತಿಳಿದು ಬಂದಿದೆ.

ಮೈಸೂರು, ಸೆ.22(ಎಂಟಿವೈ)– ಗಜಪಡೆಗೆ ದೀಪಾಲಂಕಾರದ ಬೆಳಕಲ್ಲಿ ಹೆಜ್ಜೆ ಹಾಕಲು ತರಬೇತಿ ನೀಡುವ ನಿಟ್ಟಿನಲ್ಲಿ ಜಂಬೂ ಸವಾರಿ ಮಾರ್ಗದಲ್ಲಿ ನವರಾತ್ರಿಗೆ 3 ದಿನ ಮುನ್ನವೇ ದೀಪಾಲಂಕಾರದ ವ್ಯವಸ್ಥೆ ಮಾಡಲು ನಿರ್ಧರಿಸಲಾಗಿದ್ದು, ನಾಳೆ(ಸೆ.23) ಯಿಂದ ಕ್ಯಾಪ್ಟನ್ ಅಭಿಮನ್ಯು ನೇತೃತ್ವದ ಗಜಪಡೆ ಬೆಳಕಿನ ಚಿತ್ತಾರದ ನಡುವೆ ರಾಜ ಮಾರ್ಗದಲ್ಲಿ ಹೆಜ್ಜೆ ಹಾಕಲಿದೆ.

ಎರಡು ವರ್ಷದ ನಂತರ ಅದ್ಧೂರಿಯಾಗಿ ನಡೆಯುತ್ತಿರುವ ಪ್ರಸಕ್ತ ಸಾಲಿನ ದಸರಾ ಮಹೋತ್ಸವದಲ್ಲಿ ಅಂಬಾರಿಗೆ ಪುಷ್ಪಾರ್ಚನೆಗೆ ಸಂಜೆ 5.40ಕ್ಕೆ ಮುಹೂರ್ತ ನಿಗದಿಪಡಿಸಿರುವುದರಿಂದ, ಈ ಬಾರಿ ಜಂಬೂಸವಾರಿ ಬಹುತೇಕ ರಾತ್ರಿ ಬನ್ನಿ ಮಂಟಪ ತಲುಪಲಿದೆ. ಹಾಗಾಗಿ ಮೆರವಣಿಗೆ, ದೀಪಾಲಂಕಾರದ ನಡುವೆ ಸಾಗುವ ಅನಿವಾರ್ಯತೆ ಇರುವುದರಿಂದ ಅದಕ್ಕೆ ಅನುಗುಣವಾಗಿ ಗಜಪಡೆ ಹೊಂದಿಕೊಳ್ಳಲು ಅನುವಾಗುವಂತೆ ಅರಣ್ಯ ಇಲಾಖೆ ನವರಾತ್ರಿಗೂ 5 ದಿನ ಮುನ್ನವೇ ಜಂಬೂ ಸವಾರಿ ಸಾಗುವ ಮಾರ್ಗದಲ್ಲಿ ದೀಪಾಲಂಕಾರದ ವ್ಯವಸ್ಥೆ ಮಾಡುವಂತೆ ಕೋರಿತ್ತು.

ಅರಣ್ಯ ಇಲಾಖೆಯ ಮನವಿಗೆ ಸ್ಪಂದಿಸಿದ ಚೆಸ್ಕಾಂ, ಜಿಲ್ಲಾಡಳಿತದ ಸೂಚನೆ ಮೇರೆಗೆ ಅರಮನೆ ದ್ವಾರದಿಂದ ಕೆ.ಆರ್. ವೃತ್ತ, ಸಯ್ಯಾಜಿರಾವ್ ರಸ್ತೆ, ಆಯುರ್ವೇದ ವೃತ್ತ, ಆರ್‌ಎಂಸಿ ವೃತ್ತ, ಜಂಬೂ ಬಜಾರ್, ಹೈವೆ ವೃತ್ತದ ಮೂಲಕ ಬನ್ನಿಮಂಟಪದ ಪಂಜಿನ ಕವಾಯತು ಮೈದಾನದವರೆಗೆ 5 ಕಿ.ಮೀ. ರಸ್ತೆಗೆ ನಾಳೆ(ಸೆ.23)ಯಿಂದಲೇ ದೀಪಾಲಂಕಾರ ಮಾಡಲಾಗುತ್ತಿದೆ. ಸಂಜೆ 7 ಗಂಟೆಗೆ ದೀಪಾಲಂಕಾರ ಆರಂಭವಾಗುತ್ತದೆ. ಬೆಳಕಿನ ವ್ಯವಸ್ಥೆಯಲ್ಲಿ ಆನೆಗಳು ತಾಲೀಮು ನಡೆಸುವುದರಿಂದ ಅ.5ರಂದು ನಡೆಯಲಿರುವ ಜಂಬೂಸವಾರಿ ಮೆರವಣಿಗೆಯಲ್ಲಿ ಗಜಪಡೆ ಸರಾಗವಾಗಿ ಸಾಗಲಿದೆ ಎಂಬ ವಿಶ್ವಾಸ ಅರಣ್ಯ ಇಲಾಖೆಯ ಅಧಿಕಾರಿಗಳದ್ದಾಗಿದೆ

ಮೊದಲ ದಿನ: ನಾಳೆ ಸಂಜೆ 5.30ಕ್ಕೆ ಗಜಪಡೆಯ ಸದಸ್ಯರಾದ ಗೋಪಾಲ ಸ್ವಾಮಿ ಅಥವಾ ಭೀಮಾ ಆನೆಗೆ ಗಾದಿ, ನಮ್ದಾದೊಂದಿಗೆ ಮರದ ಅಂಬಾರಿಯನ್ನು ಕಟ್ಟಿ ತಾಲೀಮಿಗೆ ಕರೆದೊಯ್ಯಲಾಗುತ್ತದೆ. ನಾಳೆ ಸುಮಾರು 500 ಕೆಜಿ ತೂಕವನ್ನಷ್ಟೇ ಆನೆ ಹೊರಲಿದೆ. ಮರದ ಅಂಬಾರಿಗೆ ಮಾರ್ಗದುದ್ದಕ್ಕೂ ಎಲ್ಲಾದರೂ ದೀಪಾಲಂಕಾರದ ವಿದ್ಯುತ್ ದೀಪಗಳು ತಾಗುತ್ತವೆಯೇ ಎಂದು ಪರಿಶೀಲಿಸಲು ಅರಣ್ಯ ಇಲಾಖೆ, ಚೆಸ್ಕಾಂ ಹಾಗೂ ಪಾಲಿಕೆಯ ಸಿಬ್ಬಂದಿ ತಂಡವನ್ನು ಆಹ್ವಾನಿಸಲಾಗಿದೆ.

ಇದು ಅಧಿಕಾರಿಗಳ ದಸರಾ....!?

ರಾಜಕೀಯ ವಲಯದಲ್ಲಿ ಅಸಮಾಧಾನದ ನುಡಿ

ಮೈಸೂರು, ಸೆ.22– ಈ ಬಾರಿ ಮೈಸೂರು ದಸರಾ ಮಹೋತ್ಸವದಲ್ಲಿ ಜನಪ್ರತಿನಿಧಿಗಳಿಗಿಂತ ಅಧಿಕಾರಿಗಳೇ ಹೆಚ್ಚು ಮಿಂಚುತ್ತಿದ್ದಾರೆ. ಈವರೆಗೆ 'ದಸರಾ ಉಪ ಸಮಿತಿ'ಗಳಿಗೆ ಅಧಿಕಾರೇತರ ಸದಸ್ಯರು ಹಾಗೂ ಅಧ್ಯಕ್ಷರನ್ನು ನೇಮಿಸದಿರುವ ಕಾರಣದಿಂದ 'ಈ ಬಾರಿ ಅಧಿಕಾರಿಗಳ ದಸರಾ' ನಡೆಯುತ್ತಿದೆ ಎಂದು ರಾಜಕೀಯ ವಲಯದಲ್ಲಿ ವಿಶ್ಲೇಷಿಸಲಾಗುತ್ತಿದೆ.

ದಸರಾ ಮಹೋತ್ಸವವನ್ನು ಯಶಸ್ವಿಯಾಗಿ ನೆರವೇರಿಸುವ ಉದ್ದೇಶದಿಂದ ಉಪ ಸಮಿತಿಗಳನ್ನು ಮಾಡಿ ಪ್ರಮುಖ ಕಾರ್ಯಕ್ರಮಗಳ ಜವಾಬ್ದಾರಿ ವಹಿಸಲಾಗಿದೆ. ಉಪ ಸಮಿತಿಗಳು ಸಮರ್ಥವಾಗಿ ಕಾರ್ಯ ನಿರ್ವಹಿಸಲೆಂದು ಅಧಿಕಾರಿಗಳ ಜೊತೆಗೆ ಅಧಿಕಾರೇತರ ಮುಖಂಡರನ್ನೂ ನಿಯೋಜಿಸಲಾಗುತ್ತಿತ್ತು. ವಿವಿಧ ಇಲಾಖೆಗಳ ಅಧಿಕಾರಿಗಳನ್ನು ವಿಶೇಷಾಧಿಕಾರಿ ಹಾಗೂ ಕಾರ್ಯದರ್ಶಿಗಳನ್ನಾಗಿ ನೇಮಿಸಿ, ಅಧಿಕಾರೇತರ ಮುಖಂಡರೊಬ್ಬರನ್ನು ಅಧ್ಯಕ್ಷರನ್ನಾಗಿ, ಹಲವರನ್ನು ಸದಸ್ಯರನ್ನಾಗಿ ಮಾಡಲಾಗುತ್ತಿತ್ತು. ಉಪ ಸಮಿತಿ ವ್ಯಾಪ್ತಿಯಲ್ಲೇ ಕಾರ್ಯಕ್ರಮದ ಬಗ್ಗೆ ಚರ್ಚೆ ಮಾಡಿ ಅಂತಿಮಗೊಳಿಸಿ, ಜಿಲ್ಲಾಡಳಿತದ ಅನುಮೋದನೆಯೊಂದಿಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿತ್ತು. ಆದರೆ ಈ ಬಾರಿ ಇದಕ್ಕೆಲ್ಲಾ ಅವಕಾಶವೇ ಇಲ್ಲದಂತಾಗಿದೆ.

ಜಿಲ್ಲಾಧಿಕಾರಿಗಳು ಮೈಸೂರು ದಸರಾ ಮಹೋತ್ಸವದ ವಿಶೇಷಾಧಿಕಾರಿಯಾಗಿದ್ದು, ಜಿಲ್ಲಾ ಪಂಚಾಯಿತಿ ಸಿಇಓ, ನಗರ ಪೊಲೀಸ್ ಆಯುಕ್ತರು, ಜಿಲ್ಲಾ ಪೊಲೀಸ್ ಅಧೀಕ್ಷಕರು ಸೇರಿದಂತೆ ವಿವಿಧ ಇಲಾಖೆ ಅಧಿಕಾರಿಗಳನ್ನು ಉಪ ಸಮಿತಿಗಳಿಗೆ ನಿಯೋಜಿಸಲಾಗಿದೆ. ಆದರೆ ಈವರೆಗೆ ಅಧಿಕಾರೇತರರನ್ನು ನೇಮಿಸಿಲ್ಲ. ಇತ್ತೀಚೆಗೆ (ಸೆ.17) ಜಿಪಂ ಸಭಾಂಗಣದಲ್ಲಿ ದಸರಾ ಸಂಬಂಧ ಚರ್ಚೆ ನಡೆಸಿದ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪ ಸಮಿತಿಗಳ ಬಗ್ಗೆ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿ, ಜಾರಿಕೆ ಉತ್ತರ ನೀಡಿದ್ದರು. 'ಹಿಂದಿನಿಂದ ನಡೆದುಕೊಂಡು ಬಂದಿರುವ ವ್ಯವಸ್ಥೆಗಳ ಬಗ್ಗೆ ನಮ್ಮದೇನು ತಕರಾರಿಲ್ಲ. ಉಪ ಸಮಿತಿಗಳಿಗೆ ಅಧಿಕಾರೇತರರನ್ನು ನೇಮಿಸಬಾರದು ಎಂಬ ಉದ್ದೇಶವೂ ನಮಗಿಲ್ಲ. ಆದರೆ ಈವರೆಗೆ ಯಾವುದೇ ಪ್ರಸ್ತಾವ ಇಲ್ಲ' ಎಂದು ಹೇಳಿದ್ದರು. ಆ ನಂತರವೂ ಯಾವುದೇ ಪ್ರಯತ್ನ ನಡೆದಿಲ್ಲ. ಎಲ್ಲಾ ಕಾರ್ಯಕ್ರಮಗಳ ವಿವರವನ್ನೂ ಅಧಿಕಾರಿಗಳೇ ಪ್ರಕಟಿಸುತ್ತಿದ್ದಾರೆ.

ಉಪ ಸಮಿತಿ ಅಧ್ಯಕ್ಷರು ಹಾಗೂ ಸದಸ್ಯರು ನಾಡಹಬ್ಬದ ಕಾರ್ಯಕ್ರಮಗಳಲ್ಲಿ ಕಲಾವಿದರನ್ನು, ಗಣ್ಯರನ್ನು ಸ್ವಾಗತಿಸುವುದು, ಅಭಿನಂದಿಸುವುದು ಹೀಗೆ ವೇದಿಕೆಗಳಲ್ಲಿ ಕಾಣಿಸಿಕೊಂಡು ಸಂಭ್ರಮಿಸುತ್ತಿದ್ದರು. ಅದರಲ್ಲೂ ಅಧಿಕಾರರೂಢ ಪಕ್ಷದ ಮುಖಂಡರನ್ನೇ ನೇಮಿಸಲಾಗುತ್ತಿತ್ತು. ಹಾಗಾಗಿ ಅವರು ತಮ್ಮ ಪಕ್ಷದ ಸಚಿವರು, ಶಾಸಕರು ಇನ್ನಿತರ ಜನಪ್ರತಿನಿಧಿಗಳೊಂದಿಗೆ ಮಿಂಚುತ್ತಿದ್ದರು. ಆದರೆ ಇಂತಹ ನಿರೀಕ್ಷೆಯಲ್ಲಿದ್ದವರಿಗೆ ಈ ಬಾರಿ ಭಾರೀ ನಿರಾಸೆಯಾಗಿದೆ. ದಸರೆಗೆ ಕ್ಷಣಗಣನೆ ಆರಂಭವಾಗಿರುವುದರಿಂದ ಸಮಿತಿ ಪರಿಷ್ಕರಣೆಯ ಆಶಾಭಾವವನ್ನೂ ಕಳೆದುಕೊಂಡಿದ್ದಾರೆ.

ಒಂದನೇ ಪುಟದಿಂದ


ಮೈಸೂರು ಅಭಿವೃದ್ಧಿಗೆ 150 ಕೋಟಿ ಮಂಜೂರು

ಬಿಡುಗಡೆ ಮಾಡಲಾಗಿದೆ. ಮಳೆ ನೀರಿನಿಂದಾಗುವ ಅನಾಹುತ ತಡೆಗೆ 46 ಕೋಟಿ ರೂ. ನೀಡಿದ್ದೇವೆ. ಸಿಎಂ ಮನವೊಲಿಸಿ ಲೋಕೋಪಯೋಗಿ ಇಲಾಖೆ ವತಿಯಿಂದ 50 ಕೋಟಿ ರೂ. ಮಂಜೂರು ಮಾಡಲಾಗಿದ್ದು, ಆ ಅನುದಾನದಿಂದ ಅಭಿವೃದ್ಧಿ ಕಾಮಗಾರಿಗೆ ಚಾಲನೆ ದೊರೆತಿದೆ. ಮುಡಾದಿಂದ ಒಟಿಎಂ ನಿರ್ಮಾಣಕ್ಕೆ 20 ಕೋಟಿ ರೂ. ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾರ್ಯಕ್ಕೆ 35 ಕೋಟಿ ರೂ ನೀಡಿದ್ದೇವೆ ಎಂದು ವಿವರಿಸಿದರು.

ಮೈಸೂರಲ್ಲಿ ಹೊಸ ಬೆಳಕು: ಮೈಸೂರು ನಗರಕ್ಕೆ ಹೊಸ ಬೆಳಕು ನೀಡುವ ನಿಟ್ಟಿನಲ್ಲಿ ಮೈಸೂರಿನ ವಿವಿಧ ರಸ್ತೆಗಳ ವಿದ್ಯುತ್ ಕಂಬಗಳಿಗೆ ಇದುವರೆಗೂ 69 ಸಾವಿರಕ್ಕೂ ಹೆಚ್ಚು ಪ್ರಜ್ವಲಿಸುವ ಎಲ್‌ಇಡಿ ಬಲ್ಬ್ ಅಳವಡಿಸಲಾಗಿದ್ದು, ಉಳಿದ ಕಂಬಗಳಿಗೂ ತ್ವರಿತಗತಿಯಲ್ಲಿ ಎಲ್‌ಇಡಿ ಬಲ್ಬ್ ಅಳವಡಿಕೆಗೆ ಸೂಚನೆ ನೀಡಲಾಗಿದೆ. ಕಳೆದ ಕೆಲವು ವರ್ಷಗಳಿಂದ ಮೈಸೂರಿನ ರಿಂಗ್ ರಸ್ತೆಯಲ್ಲಿ ಬೀದಿದೀಪಗಳಿಲ್ಲದೆ ಕತ್ತಲೆ ಆವರಿಸಿತ್ತು. ಕಾರ್ಯಕ್ರಮವೊಂದರಲ್ಲಿ ಪಾಲ್ಗೊಳ್ಳಲು ಮೈಸೂರಿಗೆ ಬಂದಾಗ ರಿಂಗ್ ರಸ್ತೆ ಕತ್ತಲೆ ಆವರಿಸಿದ್ದನ್ನು ಗಮನಿಸಿ, ಅಂದು ಮುಡಾ ಆಯುಕ್ತರಾಗಿದ್ದವರಿಗೆ ಶೀಘ್ರವಾಗಿ ದೀಪ ಅಳವಡಿಸುವಂತೆ ಸೂಚನೆ ನೀಡಿದ್ದೆ. ಪ್ರಸ್ತುತ ರಿಂಗ್ ರಸ್ತೆಯಲ್ಲಿ ವಿದ್ಯುತ್ ಬೀದಿದೀಪ ಅಳವಡಿಕೆ ಕಾರ್ಯ ನಡೆಯುತ್ತಿದೆ. ನಾನು ನಗರಾಭಿವೃದ್ಧಿ ಸಚಿವನಾಗಿ ಬಂದ ಮೇಲೆ ರಿಂಗ್ ರಸ್ತೆಯ ಕತ್ತಲು ನಿವಾರಿಸಲು ಕ್ರಮ ಕೈಗೊಂಡಿದ್ದೇನೆ ಎಂದರು.

ಸಮರ್ಪಕ ಕುಡಿಯುವ ನೀರು: ಮೈಸೂರು ನಗರಕ್ಕೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಮಾಡುವುದಕ್ಕಾಗಿ 531 ಕೋಟಿ ರೂ. ವೆಚ್ಚದಲ್ಲಿ ಉಂಡುವಾಡಿ ಯೋಜನೆಯನ್ನು ಕೈಗೆತ್ತಿಕೊಂಡು, ತ್ವರಿತಗತಿಯಲ್ಲಿ ಕಾಮಗಾರಿ ಅನುಷ್ಠಾನಗೊಳಿಸಲಾಗಿದೆ. ಕಬಿನಿಯಿಂದ ಹೆಚ್ಚುವರಿ ನೀರು ಪೂರೈಕೆ ಮಾಡಲು 150 ಕೋಟಿ ರೂ. ಪ್ರಸ್ತಾವನೆಯನ್ನು ಇಲಾಖೆ ಮುಂದೆ ಇಡಲಾಗಿದ್ದು, ಅದನ್ನೂ ಮಂಜೂರು ಮಾಡಿಸಿಕೊಡುತ್ತೇನೆ ಎಂದು ಭರವಸೆ ನೀಡಿದರು.

ನಾಡಹಬ್ಬ ದಸರಾ ಮಹೋತ್ಸವ ಉದ್ಘಾಟನೆಗಾಗಿ



ರಾಷ್ಟ್ರಪತಿ ದ್ರೌಪದಿ ಮುರ್ಮು ಆಗಮಿಸುತ್ತಿದ್ದು ಸಂತೋಷದ ಸಂಗತಿ. ರಾಷ್ಟ್ರಪತಿಗಳ ಆಗಮನದ ಹಿನ್ನೆಲೆಯಲ್ಲಿ ಮೈಸೂರು ನಗರದ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಿದ್ದೇವೆ. ನಾಡದೇವಿ ಉತ್ಸವ ದಸರಾ ಮಹೋತ್ಸವ ಯಶಸ್ವಿಯಾಗಿ ನಡೆಸಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಈಗಾಗಲೇ ಚಾಮುಂಡೇಶ್ವರಿಯ ಕೃಪಾಕಟಾಕ್ಷದಿಂದ ನಾಡಿನಾದ್ಯಂತ ಸಮೃದ್ಧಿಯಾಗಿ ಮಳೆ ಬಂದಿದೆ ಎಂದರು.

ವಿಭಿನ್ನ ಕಾರ್ಯಕ್ರಮ: ರಾಜ್ಯದ 224 ಕ್ಷೇತ್ರಗಳಿಗೆ ಹೋಲಿಸಿದರೆ, ಮೈಸೂರಿನ ಕೆ.ಆರ್.ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ವಿಭಿನ್ನ ಹಾಗೂ ವಿಶಿಷ್ಟವಾದ ಕಾರ್ಯಕ್ರಮ ಆಯೋಜಿಸಿದ್ದಾರೆ. ಪ್ರಧಾನಿ ಮೋದಿ ಅವರ ಸಂಕಲ್ಪದಂತೆ ಸಮಾಜದ ಕಟ್ಟಕಡೆಯ ವ್ಯಕ್ತಿಗಳಿಗೂ ಸರ್ಕಾರದ ಯೋಜನೆ ತಲುಪಬೇಕೆಂಬ ಆಶಯ ಈಡೇರಿಸುವುದಕ್ಕಾಗಿ ಮೋದಿ ಯುಗ ಉತ್ಸವ ಕಾರ್ಯಕ್ರಮ ಆಯೋಜಿಸಿದ್ದಾರೆ. ನಾನು ನನ್ನ ಕ್ಷೇತ್ರದಲ್ಲೂ ಇಂತಹ ಕಾರ್ಯಕ್ರಮ ಆಯೋಜಿಸಲು ಸಾಧ್ಯವಾಗಿಲ್ಲ. ಕ್ಷೇತ್ರದ ರಸ್ತೆಬದಿ ವ್ಯಾಪಾರಿಗಳಿಗೆ ಐಡಿ ಕಾರ್ಡ್ ವಿತರಣೆ, ಹೊಲಿಗೆ ಯಂತ್ರ ವಿತರಿಸುವ ಮೂಲಕ ಸೇವಾಕಾರ್ಯ ಮಾಡುತ್ತಿರುವುದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಪ್ರತಿಮ ನಾಯಕ: ಪ್ರಧಾನಿ ಮೋದಿ ರಾಷ್ಟ್ರ ಕಂಡ ಅಪ್ರತಿಮ ನಾಯಕ. ಅವರ ಪಕ್ಷದಲ್ಲಿ ನಾನು ಸೇರಿ ಕೆಲಸ ಮಾಡುವುದಕ್ಕೆ ನನಗೆ ಹೆಮ್ಮೆಯಾಗಿದೆ. ಶಾಸಕ ರಾಮದಾಸ್ ಅವರು ಹಿಂದಿನಿಂದಲೂ ಮೋದಿಯವರೊಂದಿಗೆ ಇದ್ದಾರೆ. ನಾನು ಬಿಜೆಪಿ ಸೇರಿದ ಕೆಲವೇ ವರ್ಷಗಳಲ್ಲಿ ಅವರೊಟ್ಟಿಗೆ ವೇದಿಕೆ ಹಂಚಿಕೊಂಡಿರುವುದು ಸಂತಸ ಉಂಟು ಮಾಡಿದೆ. ಅವರ ಆದರ್ಶ ನಮಗೆ ಸ್ಫೂರ್ತಿದಾಯಕವಾಗಿದೆ. ವಿದೇಶಿಗರಿಗೂ ಮಾದರಿಯಾಗುವ ಕೆಲಸ ಮಾಡುತ್ತಿದ್ದಾರೆ. ಅವರ ಹುಟ್ಟುಹಬ್ಬದ ಅಂಗವಾಗಿ ಅನೇಕ ಅಭಿವೃದ್ಧಿ ಯೋಜನೆ ಕೈಗೊಳ್ಳುವುದರ ಜೊತೆಗೆ ಬಡವರು, ಕೂಲಿ ಕಾರ್ಮಿಕರಿಗೆ ಸೌಲಭ್ಯ ನೀಡುತ್ತಿರುವುದು ಶ್ಲಾಘನೀಯ ಎಂದರು.

ಮೋದಿ ಎಂದರೆ ಅಭಿವೃದ್ಧಿ: ಇದಕ್ಕೂ ಮುನ್ನ ಶಾಸಕ ಎಸ್.ಎ.ರಾಮದಾಸ್ ಪ್ರಾಸ್ತಾವಿಕವಾಗಿ ಮಾತನಾಡಿ, ಮೋದಿ ಯವರ ಇಚ್ಛೆಯಂತೆ ದೇಶದ ಸರ್ವತೋಮುಖ ಅಭಿವೃದ್ಧಿಯ ಚಿಂತನೆಯನ್ನು ಇಟ್ಟುಕೊಂಡು ದಿನಕ್ಕೊಂದು ಅಭಿವೃದ್ಧಿ ಕಾರ್ಯಕ್ರಮ ನಡೆಸಲಾಗುತ್ತಿದೆ ಮೋದಿ ಎಂದರೆ ಅಭಿವೃದ್ಧಿ ಎಂಬುದು ನಮ್ಮ ಅರ್ಥವಾಗಿದೆ. ಇದಕ್ಕೆ ಇಂದು ನಗರಾಭಿವೃದ್ಧಿ ಸಚಿವರ ಮೂಲಕ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. 'ಕಿಚನ್ ಗಾರ್ಡನ್' ಬೆಳೆಸಲು ಒಂದು ಸಾವಿರ ಮನೆಗಳನ್ನು ಗುರುತಿಸಿ ಆ ಮೂಲಕ ಆದಾಯ ಗಳಿಸುವ ನೂತನ ಕಾರ್ಯಕ್ರಮ ಆರಂಭಿಸಲಾಗಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಆಸೆ ಕಟ್ಟಕಡೆಯ ವ್ಯಕ್ತಿ, ಕಸಗುಡಿಸುವವರಿಗೂ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಸೌಲಭ್ಯ, ಯೋಜನೆ ತಲುಪಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು. ಮಹಾನಗರಪಾಲಿಕೆಯಿಂದ ವಿಶೇಷವಾಗಿ 'ಯೋಗಲಕ್ಷ್ಮಿ ಬಾಂಡ್' ಹೆಣ್ಣು ಮಕ್ಕಳಿಗೆ ನೀಡುವ ಆರೋಗ್ಯದ ಬಾಂಡ್(97 ಸಾವಿರ ರೂ.ಗಳ ಆರೋಗ್ಯ ಬಾಂಡ್) ಅನ್ನು ಧನ್ಯಶ್ರೀ, ಲಿಖಿತ, ತನುಶ್ರೀ, ಪೂರ್ಣಶ್ರೀ, ಶೋಭಿತರಿಗೆ ನೀಡಲಾಯಿತು. ಬೀದಿ ವ್ಯಾಪಾರಿಗಳ ವ್ಯಾಪಾರ ಪತ್ರವನ್ನು ಮಹದೇವಯ್ಯ, ಸಿದ್ದರಾಜು, ಮಹೇಂದ್ರ ನಂದೀಶ್ ನಾಯಕ್, ವೆಂಕೋಬರಾವ್, ಮಹದೇವಸ್ವಾಮಿಯವರಿಗೆ ನೀಡಲಾಯಿತು. ಸ್ವಯಂ ಉದ್ಯೋಗದ ಸಾಲ ಸೌಲಭ್ಯದ ಮಂಜೂರಾತಿ ಪತ್ರವನ್ನು ಪ್ರದೀಪ, ವಿಕಲಚೇತನರಾದ ವೆಂಕಟೇಶ್ ಅವರಿಗೆ ನೀಡಲಾಯಿತು. ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಉಚಿತ ಲ್ಯಾಪ್‌ಟಾಪ್ ಖರೀದಿಗೆ ಅನುದಾನವನ್ನು ಹೇಮಲತ, ಮಧು ಸೂದನ್, ವೈಷ್ಣವಿ ಅವರಿಗೆ ನೀಡಲಾಯಿತು. ವ್ಯಾಸಂಗ ಪ್ರೋತ್ಸಾಹ ಧನ ನಿಖಿತ, ಸ್ಫೂರ್ತಿ ಅವರಿಗೆ ನೀಡಲಾಯಿತು. ಕಿಚನ್ ಗಾರ್ಡನ್ ಯೋಜನೆಯಲ್ಲಿ ನಾಗರತ್ನ, ಜಯಂತಿ, ಸುವರ್ಣ, ಚಂದ್ರು ಅವರಿಗೆ ಔಷಧಿಗಿಡಗಳನ್ನು ನೀಡಲಾಯಿತು.

ಶ್ವಾನಗಳ ಚಿಕಿತ್ಸೆ ಮತ್ತು ಪುನರ್ವಸತಿ ಕೇಂದ್ರ: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ 61.55 ಕೋಟಿ ರೂ ವೆಚ್ಚದಲ್ಲಿ 28 ಕಾಮಗಾರಿಗಳಿಗೆ ಚಾಲನೆ ನೀಡಲಾಗಿದೆ. ಮೈಸೂರಲ್ಲಿ ಕೋವಿಡ್ ಸಂದರ್ಭದಲ್ಲಿ ಸಂಘ– ಸಂಸ್ಥೆಗಳೊಂದಿಗೆ ಮಂಗಗಳಿಗೆ ನೆರವು ನೀಡಲಾಗಿತ್ತು ಹೀಗಾಗಿ ಕಂದಾಯ ಇಲಾಖೆಯಿಂದ ಪುನರ್ ವಸತಿ ಕೇಂದ್ರಕ್ಕೆ 4 ಎಕರೆ ಜಾಗವನ್ನು ಪಾಲಿಕೆಗೆ ಹಸ್ತಾಂತರಿಸಲಾಗಿದೆ. ಅದರಲ್ಲಿ ಪಾಲಿಕೆಯಿಂದ 2 ಕೋಟಿ ರೂ. ವೆಚ್ಚದಲ್ಲಿ ಮೂರು ಎಕರೆ ಜಾಗದಲ್ಲಿ ಶ್ವಾನಗಳ ಚಿಕಿತ್ಸಾ ಮತ್ತು ಪುನರ್ವಸತಿ ಕೇಂದ್ರ ಸ್ಥಾಪಿಸಲಾಗುತ್ತಿದೆ ಎಂದರು.

ಇದೇ ವೇಳೆ ಸ್ವಯಂ ಉದ್ಯೋಗ ಯೋಜನೆಯಡಿ ಹೊಲಿಗೆ ಯಂತ್ರ ಯೋಜನೆಯಡಿಯಲ್ಲಿ ರುಕ್ಮಿಣಿ, ಶಿಲ್ಪ, ಅನಿತಾ, ರೂಪ, ಶೋಭಾ, ಊರ್ಮಾ, ಸುಮಲತಾ, ಮೀನಾಕ್ಷಿ ಅವರಿಗೆ ನೀಡಲಾಯಿತು. ಪೌರಕಾರ್ಮಿಕರಿಗೆ ಸ್ವಚ್ಛತಾ ಪರಿಕರಗಳ ಕಿಟ್ ಅನ್ನು ಹೆಂಗಮ್ಮ, ಚಿನ್ನಕ್ಕ, ಸಾವಿತ್ರಿ ರಂಗಮ್ಮ, ರವೀಂದ್ರ, ಹಲಮೇಲಮ್ಮ, ನಾಗರಾಜು, ನಾಗೇಂದ್ರ ಅವರಿಗೆ ವಿತರಿಸಲಾಯಿತು. ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತರೆಡ್ಡಿ, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಕೃಷ್ಣರಾಜ ಕ್ಷೇತ್ರದ ಬಿಜೆಪಿ ಅಧ್ಯಕ್ಷ ವಡಿವೇಲು, ಪಾಲಿಕೆ ಸದಸ್ಯರಾದ ಮಾ.ವಿ.ರಾಮಪ್ರಸಾದ್, ಬಿ.ವಿ.ಮಂಜುನಾಥ್, ಪಿ.ಟಿ.ಕೃಷ್ಣ, ಕ್ಷೇತ್ರದ ಪ್ರಧಾನ ಕಾರ್ಯದರ್ಶಿಗಳಾದ ಓಂಶ್ರೀನಿವಾಸ್, ನಾಗೇಂದ್ರ ತೋಟಗಾರಿಕೆ ಇಲಾಖೆ ಉಪನಿರ್ದೇಶಕ ರುದ್ರೇಶ, ಚಂಪಕಾ, ಸೌಮ್ಯ ಈಶ್ವರ, ಶಾರದಮ್ಮ ಈಶ್ವರ್, ಮುಡಾ ಸದಸ್ಯ ಲಿಂಗಣ್ಣ ಇನ್ನಿತರರು ಉಪಸ್ಥಿತರಿದ್ದರು.

ದಸರಾ ಹಿನ್ನೆಲೆ : ಮೈಸೂರಿಗೆ ವ್ಯಾಪಾರಸ್ಥರ ಲಗ್ಗೆ

ಮೈಸೂರು, ಸೆ22(ಜಿಎ)– ಅದ್ಧೂರಿ ದಸರಾ ಆಚರಣೆಗೆ ಕ್ಷಣಗಣನೆ ಶುರುವಾಗಿದ್ದು, ದೇಶದ ನಾನಾ ಕಡೆಗಳಿಂದ ವ್ಯಾಪಾರಸ್ಥರ ದಂಡು ಅಂಬಾರಿ ನಗರಿ ಮೈಸೂರಿಗೆ ಆಗಮಿಸಿದೆ.



ದಸರಾ ವಿದ್ಯುತ್ ದೀಪಾಲಂಕಾರ, ಆಹಾರ ಮೇಳ, ದಸರಾ ಕುಸ್ತಿ, ಮಹಿಳಾ ಮತ್ತು ಮಕ್ಕಳ ದಸರಾ, ರೈತ ದಸರಾ ಸೇರಿದಂತೆ ಹಲವು ದಸರಾ ಕಾರ್ಯಕ್ರಮಗಳನ್ನು ಕಣ್ತುಂಬಿಕೊಳ್ಳಲು ಲಕ್ಷಾಂತರ ಪ್ರವಾಸಿಗರು ಆಗಮಿಸುವ ಹಿನ್ನೆಲೆಯಲ್ಲಿ ವ್ಯಾಪಾರಸ್ಥರು ಕೂಡ ಮೈಸೂರಿನತ್ತ ಮುಖ ಮಾಡಿದ್ದಾರೆ.

2 ವರ್ಷದ ಕೊರೊನಾ ಸಂಕಷ್ಟದ ಬಳಿಕ ಒಂದಷ್ಟು ಕಾಸು ಮಾಡಿಕೊಳ್ಳುವ ತವಕದಲ್ಲಿರುವ ವ್ಯಾಪಾರಸ್ಥರು ಮೈಸೂರಿನೆಲ್ಲೆಡೆ ಬೀಡು ಬಿಟ್ಟಿದ್ದಾರೆ. ಈಗಾಗಲೇ ದಸರಾ ಜೊತೆ ಜೊತೆಗೆ ವ್ಯಾಪಾರಕ್ಕೂ ಸಿದ್ದತೆ ಮಾಡಿಕೊಳ್ಳುತ್ತಿರುವ ವ್ಯಾಪಾರಸ್ಥರು, ವ್ಯಾಪಾರಕ್ಕೆ ಅನುಕೂಲವಾದ ಹಾಗೂ ಹೆಚ್ಚು ಜನಸಂದಣಿ ಸೇರುವ ಸ್ಥಳಗಳನ್ನು ಗುರುತು ಹಾಕಿಕೊಳ್ಳುತ್ತಿದ್ದಾರೆ.

ಬಣ್ಣ ಬಣ್ಣದ ಮಕ್ಕಳ ಆಟಿಕೆಗಳು, ಬಲೂನ್, ಬೊಂಬೆಗಳ ಮಾರಾಟ, ಪಾನಿಪೂರಿ, ಮಸಾಲೆ ಪೂರಿ, ಚುರುಮುರಿ ಸೇರಿದಂತೆ ಹತ್ತು-ಹಲವು ಬಗೆ ಬಗೆಯ ಖಾದ್ಯಗಳ ಮೂಲಕ ರಸ್ತೆ ಬದಿ ಹಾಗೂ ಅಲ್ಲಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಪೂರ್ವ ಸಿದ್ದತೆ ಮಾಡಿಕೊಳ್ಳುತ್ತಿದ್ದಾರೆ.

ಪ್ರಮುಖವಾಗಿ ಮೈಸೂರು ಅರಮನೆ, ಮೃಗಾಲಯ, ವಸ್ತು ಪ್ರದರ್ಶನದ ಆವರಣ, ಚಾಮುಂಡಿ ಬೆಟ್ಟ, ಎಲ್‌ಐಸಿ ವೃತ್ತ, ಕೆಆರ್‌ಎಸ್, ಜೆ.ಕೆ.ಮೈದಾನ ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ಪ್ರವಾಸಿಗರು ಸೇರುವ ನಿರೀಕ್ಷೆಯಿದೆ.

ಕಳೆದ 10 ವರ್ಷಗಳಿಂದ ದಸರಾ ಮಹೋತ್ಸವಕ್ಕೆ ಬರುತ್ತಿದ್ದೇವೆ. ದಸರಾ ಉತ್ಸವದಲ್ಲಿ ಒಳ್ಳೆಯ ವ್ಯಾಪಾರವಾಗುತ್ತದೆ. ಆದರೆ, ಕಳೆದ ಎರಡು ವರ್ಷ ಮಾತ್ರ ಕೊರೊನಾ ಹಿನ್ನೆಲೆಯಲ್ಲಿ ನಿರ್ಬಂಧ ಇದ್ದ ಕಾರಣದಿಂದ ಬರಲು ಸಾಧ್ಯವಾಗಲಿಲ್ಲ. ಈ ಬಾರಿ ಮುಂಚಿತವಾಗಿ ಬಂದು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದ್ದೇವೆ ಎಂದು ಮೈಸೂರಿಗೆ ಆಗಮಿಸಿರುವ ವ್ಯಾಪಾರಿಯೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಸುಮಾರು 200ಕ್ಕೂ ಹೆಚ್ಚು ಮಂದಿ ಕುಟುಂಬ ಸಮೇತ ಆಗಮಿಸಿದ್ದು, ದೆಹಲಿಯಿಂದ ಖರೀದಿ ಮಾಡಿರುವ ಕಚ್ಚಾ ವಸ್ತುಗಳನ್ನು ಸಿದ್ದವಸ್ತುಗಳಾಗಿ ಮಾಡುತ್ತಿದ್ದೇವೆ. ಬಲೂನ್, ಮಕ್ಕಳ ಆಟಿಕೆ ಸೇರಿದಂತೆ ಅನೇಕ ವಸ್ತುಗಳನ್ನು ಮಾರಾಟ ಮಾಡುತ್ತೇವೆ ಎಂದರು.

ತುತ್ತೂರಿ ತಂದಿಲ್ಲ: ಪ್ರವಾಸಿಗರಿಗೆ ಕಿರಿಕಿರಿಯುಂಟಾಗುವ ಹಿನ್ನೆಲೆ ಮೈಸೂರು ನಗರ ಪೊಲೀಸರು ನಿಷೇಧಿಸಿರುವ ತುತ್ತೂರಿಗಳನ್ನು ಮಾರಾಟ ಮಾಡುವುದಿಲ್ಲ. ಅಲ್ಲದೆ ನಮ್ಮವರಿಗೂ ಮಾರಾಟ ಮಾಡದಂತೆ ತಿಳಿಸಿದ್ದೇವೆ ಎಂದು ಮಾಹಿತಿ ನೀಡಿದರು.

ನಷ್ಟದಲ್ಲಿದ್ದ ಸಂಘವನ್ನು ಲಾಭದೆಡೆಗೆ ಕೊಂಡೊಯ್ದಿದ್ದೇನೆ

ಟಿಎಪಿಸಿಎಂಎಸ್ ವಾರ್ಷಿಕ ಮಹಾಸಭೆಯಲ್ಲಿ ಅಧ್ಯಕ್ಷ ಟಿ.ಪಿ.ಸುಬ್ರಹ್ಮಣ್ಯ



ತಿ.ನರಸೀಪುರ, ಸೆ.22- ನಾನು ಮೊದಲ ಬಾರಿ ಅಧ್ಯಕ್ಷನಾದಾಗ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ(ಟಿಎಪಿಸಿಎಂಎಸ್) 75 ಲಕ್ಷ ರೂ. ಸಾಲದಲ್ಲಿತ್ತು. ಮಳಿಗೆಗಳಿಂದ ಬಾಡಿಗೆ ಬಂದರೂ ಸಿಬ್ಬಂದಿಗೆ ಸಂಬಳ ಕೊಡಲು ಸಾಧ್ಯವಿರಲಿಲ್ಲ. ಆದರೂ ಕಷ್ಟಪಟ್ಟು ಸಂಘವನ್ನು ಲಾಭದೆಡೆಗೆ ಕೊಂಡೊಯ್ದಿದ್ದೇನೆ ಎಂದು ಸಂಘದ ಅಧ್ಯಕ್ಷ ತೋಪಿನ ಕೊಪ್ಪಲು ಟಿ.ಪಿ.ಸುಬ್ರಹ್ಮಣ್ಯ ತಿಳಿಸಿದರು.

ಪಟ್ಟಣದ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದಲ್ಲಿ ನಡೆದ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ, ಸಂಘದ ಆಡಳಿತದಲ್ಲಿ ಅವ್ಯವಹಾರ ನಡೆದಿದೆ ಎಂಬ ಹಿರಿಯ ಸಹಕಾರಿ ವೈ.ಎನ್.ಶಂಕರೇಗೌಡರ ಆರೋಪಕ್ಕೆ ಉತ್ತರಿಸಿ ಅವರು ಮಾತನಾಡಿದರು.

ಸಂಘದಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ರಾಜಕೀಯ ಒತ್ತಾಸೆಗೆ ಮಣಿಯದೇ ಶಂಕರೇಗೌಡರೇ ನೀಡಿದ್ದ 2 ಸಾವಿರ ಸದಸ್ಯರನ್ನು ಸಂಘದ ಸದಸ್ಯರಾಗಿ ನೋಂದಣಿ ಮಾಡಿಕೊಂಡಿದ್ದೇವೆ. ಅವರು ಸುಖಾಸುಮ್ಮನೆ ಆಧಾರರಹಿತ ಆರೋಪ ಮಾಡುವುದು ಅವರ ಹಿರಿತನಕ್ಕೆ ತಕ್ಕದ್ದಲ್ಲ ಎಂದರು. ಸಂಘದ ಹಣ ದುರುಪಯೋಗವಾಗಿದೆ ಎಂದು ಶಂಕರೇಗೌಡರು ಆರೋಪಿಸಿದ್ದಾರೆ. ಆದರೆ ಸಂಘಕ್ಕೆ 2005ರಲ್ಲಿ 75 ಲಕ್ಷ ರೂ. ಸಾಲ ಇತ್ತು. ಅದನ್ನು ಕಷ್ಟಪಟ್ಟು ತೀರಿಸಿ ಈಗ 1.25 ಕೋಟಿ ರೂ.ಗಳನ್ನು ಬ್ಯಾಂಕ್‌ನಲ್ಲಿ ಡಿಪಾಸಿಟ್ ಮಾಡಿದ್ದೇವೆಂಬ ಕನಿಷ್ಠ ತಿಳುವಳಿಕೆ ಅವರಿಗಿರಲಿ ಎಂದು ಶಂಕರೇಗೌಡರಿಗೆ ಸಭೆಯಲ್ಲೇ ಟಾಂಗ್ ನೀಡಿದರು.

ಬ್ಯಾಂಕ್‌ನ ಕಷ್ಟದ ದಿನಗಳಲ್ಲಿ 40 ಲಕ್ಷ ಸಾಲ ತೀರಿಸುವ ಜವಾಬ್ದಾರಿ ಹೊತ್ತಿದ್ದ ನಾನು 12 ಲಕ್ಷ ಕ್ರೋಡಿಕರಣ ಮಾಡುವಷ್ಟರಲ್ಲಿ ಸಾಕಾಯಿತು. ಸಂಪೂರ್ಣ ಹಣ ಕಟ್ಟದಿದ್ದಲ್ಲಿ 6 ರಿಂದ 7 ಲಕ್ಷ ನಷ್ಟವಾಗುವ ಸಂಭವ ಇದ್ದ ಹಿನ್ನೆಲೆಯಲ್ಲಿ ಬೇರೆ ದಾರಿ ಕಾಣದೇ ಪಿಎಲ್‌ಡಿ ಬ್ಯಾಂಕ್‌ನಲ್ಲಿ ಠೇವಣಿ ಇಟ್ಟಿದ್ದ ನನ್ನ ಸ್ವಂತ ಹಣ ತೆಗೆದು ಸಾಲ ತೀರಿಸಿ ಸಂಘದ ಹಿತ ಕಾಪಾಡಿದ್ದೇನೆ. ಸಂಘದ ನಯಾ ಪೈಸೆ ಹಣವನ್ನು ನಾನು ದುರುಪಯೋಗಪಡಿಸಿಕೊಂಡಿಲ್ಲ ಎಂದರು.

ರಸಗೊಬ್ಬರ ಅಂಗಡಿ ಮುಚ್ಚಿದ್ದಕ್ಕೆ ಸಮರ್ಥಿಸಿಕೊಂಡ ಅಧ್ಯಕ್ಷರು, ಈಗ ರಸಗೊಬ್ಬರ ಖರೀದಿಸಲು ಯಾರೂ ಸೊಸೈಟಿ ಅವಲಂಬಿಸಿಲ್ಲ. ಪ್ರತಿ ಗ್ರಾಮಗಳಲ್ಲೂ ಗೊಬ್ಬರ ಸಿಗುತ್ತಿದೆ. ಹಾಗಾಗಿ ಒಮ್ಮೆ ಖರೀದಿಸಿದ ಗೊಬ್ಬರದ ಸ್ಟಾಕ್ ಕಲ್ಲಾಗಿದ್ದರಿಂದ ಸೊಸೈಟಿಗೆ ಆಗುತ್ತಿದ್ದ ನಷ್ಟ ತಪ್ಪಿಸಲು ರಸಗೊಬ್ಬರ ಮಳಿಗೆ ಮುಚ್ಚಲಾಯಿತು. ಇನ್ನು ಸಂಘದ ಆವರಣದಲ್ಲಿ ಮಳೆ ನೀರು ನಿಲ್ಲುತ್ತಿದ್ದ ಹಿನ್ನೆಲೆಯಲ್ಲಿ ತುರ್ತಾಗಿ 920 ಟಿಪ್ಪರ್ ಮಣ್ಣು ಹೊಡಿಸಿ ಸಮತಟ್ಟು ಮಾಡಿ ಅಂಗಡಿ ಮಾಲೀಕರಿಗೆ ಆಗುತ್ತಿದ್ದ ನಷ್ಟ ತಪ್ಪಿಸಿದ್ದೇನೆ ಎಂದರು.

ಸಂಘದ ಕಾರ್ಯದರ್ಶಿ ಜಿ.ರಘುನಂದನ್ ವಾರ್ಷಿಕ ವರದಿ ಮಂಡಿಸಿ ಪ್ರಸಕ್ತ ಸಾಲಿನಲ್ಲಿ ಸಂಘ 9.57 ಲಕ್ಷ ರೂ.ಗಳ ನಿವ್ವಳ ಲಾಭ ಗಳಿಸಿದೆ ಎಂದರು.

ಸಂಘದ ಉಪಾಧ್ಯಕ್ಷ ಡಣಾಯಕನಪುರ ಮಲ್ಲಣ್ಣ, ನಿರ್ದೇಶಕರಾದ ಟಿ.ವಾಸುದೇವ್, ಬಿ.ಎಸ್.ಮಹೇಶ್, ಎನ್.ಮೋಹನ್, ಬಿ.ಶಿವಸ್ವಾಮಿ, ಎಸ್.ರಾಜಮ್ಮ, ಮೂಗೂರು ಎಂ.ಎಸ್.ಜಯಣ್ಣ ಎಂ.ಎಸ್.ಬಸವರಾಜು, ಕೋಮಲ, ಚೈತ್ರಾ, ಹೆಚ್.ಬಿ.ಶಾರದ ಮತ್ತಿತರರಿದ್ದರು.

ಸಂಘದ ನಿಧಿ ದುರ್ಬಳಕೆ: ಆರೋಪ

ಹಿರಿಯ ಸಹಕಾರಿ ಸದಸ್ಯ ವೈ.ಎನ್. ಶಂಕರೇಗೌಡ ಮಾತನಾಡಿ, ಸಂಘದ ನಿಧಿ ದುರ್ಬಳಕೆಯಾಗಿದೆ ಎಂದು ಆರೋಪಿಸಿದರು. ಅಲ್ಲದೇ ಸದಸ್ಯತ್ವ ನೀಡುವ ಸಂಬಂಧ ಗೊಂದಲ ಮೂಡಿಸಲಾಗಿದೆ. ಅಲ್ಲದೇ ಸಂಘದ ನಿಧಿ ಬಳಸುವಾಗ ನಿಯಮ ಉಲ್ಲಂಘಿಸಲಾಗಿದೆ. ತಾಲೂಕಿನಲ್ಲಿ ಹೊಸದಾಗಿ ಸದಸ್ಯತ್ವ ನೀಡದಿರುವ ಖಾತೆದಾರರಿದ್ದಾರೆ. ಅವರಿಗೆ ಸದಸ್ಯತ್ವ ನೀಡಬೇಕು. ಪ್ರತಿ ಖಾತೆದಾರನನ್ನು ಸಂಘದ ಸದಸ್ಯನನ್ನಾಗಿ ಮಾಡುವುದು ಸಂಘದ ಹೊಣೆ ಎಂದರು.

ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಿ



ನಂಜನಗೂಡು, ಸೆ.22- ರೈತರು ಸಕಾಲಕ್ಕೆ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಸಂಘದ ಅಧ್ಯಕ್ಷ ಕೆ.ಎಂ.ನಾಗರಾಜು ತಿಳಿಸಿದರು.

ತಾಲೂಕಿನ ಕಳಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ನಡೆದ 2021-22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಂಘವು ಲಾಭದಲ್ಲಿ ಮುನ್ನಡೆಯುತ್ತಿದ್ದು, ಕೊರೊನಾ ನಡುವೆಯೂ 3.58 ಲಕ್ಷ ನಿವ್ವಳ ಲಾಭ ಗಳಿಸಿದೆ. ಮುಂದಿನ ದಿನಗಳಲ್ಲಿ ನಿಗದಿತ ಸಮಯದಲ್ಲಿ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದರು.

ಈ ವೇಳೆ ಜಿಲ್ಲಾ ಬ್ಯಾಂಕ್ ಪ್ರತಿನಿಧಿ ಹೆಚ್.ಎಲ್.ಕೃಷ್ಣ ರೈತರಿಗೆ ಸಾಲದ ಬಗ್ಗೆ ಸಂಪೂರ್ಣ ಮಾಹಿತಿ ನೀಡಿದರು. ಸಿಇಓ ಕೆ.ಎಂ.ಸಿದ್ದನಾಯಕ, ಉಪಾಧ್ಯಕ್ಷ ಕೆ.ಎಸ್.ನಾಗರಾಜು, ಚೋಳರಾಜ್ ಕೆ.ಬಿ, ಜಿ.ಎಂ.ನಾಗರಾಜಶೆಟ್ಟಿ, ಕೆ.ಎಸ್.ಪ್ರಭಾಕರ್, ಮಾದನಾಯಕ, ಕೆ.ಎನ್.ಶಿವಾನಂಜಯ್ಯ, ಸುಬ್ಬೇಗೌಡ, ಎಂ.ನಂಜುಂಡಸ್ವಾಮಿ, ರಾಜೇಶ್ವರಿ, ಎಸ್.ಲೀಲಾಕುಮಾರಿ, ಕೆ.ಎನ್.ನಂಜುಂಡನಾಯಕ ಮತ್ತು ಸಂಘದ ಸದಸ್ಯರಿದ್ದರು.

ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ಪ್ರತಿಭಟನೆ



ಕೆ.ಆರ್.ನಗರ, ಸೆ.22- ವಿವಿಧ ಬೇಡಿಕೆ ಈಡೇರಿಕೆಗೆ ಒತ್ತಾಯಿಸಿ ರೈತ ಸಂಘಟನೆಗಳ ಒಕ್ಕೂಟ ಮತ್ತು ಕಬ್ಬು ಬೆಳೆಗಾರರ ಸಂಘದ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಗರುಡಗಂಭ ವೃತ್ತದಲ್ಲಿ ಜಮಾಯಿಸಿದ ನೂರಾರು ರೈತ ಮುಖಂಡರು ಮೆರವಣಿಗೆಯಲ್ಲಿ ತಾಲೂಕು ಕಚೇರಿಗೆ ತೆರಳಿ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ ತಹಶೀಲ್ದಾರ್‌ಗೆ ಮನವಿ ಸಲ್ಲಿಸಿದರು.

ಈ ವೇಳೆ ಮಾತನಾಡಿದ ಮುಖಂಡರು, ಟನ್ ಕಬ್ಬಿಗೆ ಕನಿಷ್ಠ 4500 ರೂ. ನಿಗದಿ ಮಾಡುವ ಜೊತೆಗೆ ಎಸ್‌ಎಪಿ ಘೋಷಣೆ ಮಾಡಬೇಕು. ಕೃಷಿ ಪಂಪ್‌ಸೆಟ್‌ಗಳಿಗೆ ಉಚಿತ ವಿದ್ಯುತ್ ನೀಡುವ ಜೊತೆಗೆ ಸರ್ಕಾರ ವಿದ್ಯುತ್ ಇಲಾಖೆ ಖಾಸಗೀಕರಣ ಕೈ ಬಿಡಬೇಕು ಎಂದು ಆಗ್ರಹಿಸಿದರಲ್ಲದೆ ರೈತಪರ ಯೋಜನೆಗಳನ್ನು ರೂಪಿಸಬೇಕು ಎಂದರು.

ರೈತರಿಗೆ ಹಿಂದಿನಿಂದಲೂ ನೀಡುತ್ತಿರುವ ಕುಟೀರ ಹಾಗೂ ಭಾಗ್ಯಜ್ಯೋತಿ ಯೋಜನೆ ಮುಂದುವರೆಸಬೇಕು. ಡಾ.ಸ್ವಾಮಿನಾಥನ್ ವರದಿ ಪ್ರಕಾರ ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆ ನಿಗದಿಯಾಗಬೇಕು. ರೈತರ ಕೃಷಿ ಬೆಳೆಗಳಿಗೆ ಕನಿಷ್ಠ ಬೆಂಬಲ ಬೆಲೆ ನಿಗದಿ ಮಾಡಲು ಕಾನೂನು ಜಾರಿಗೆ ತರಬೇಕು. ಬೆಳೆ ವಿಮೆ ಎಕರೆಗೆ 30 ಸಾವಿರಕ್ಕೆ ಏರಿಸಬೇಕು ಎಂದು ಮನವಿ ಮಾಡಿದರು.

ಅತಿವೃಷ್ಟಿ ಮತ್ತು ಅನಾವೃಷ್ಟಿಯಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಆದ್ದರಿಂದ ರೈತರು ರಾಷ್ಟ್ರೀಕೃತ ಬ್ಯಾಂಕ್ ಮತ್ತು ಸಹಕಾರ ಸಂಘಗಳಲ್ಲಿ ಪಡೆದ ಸಾಲ ಮನ್ನಾ ಮಾಡಬೇಕು. ಚುಂಚನಕಟ್ಟೆ ಶ್ರೀರಾಮ ಸಕ್ಕರೆ ಕಾರ್ಖಾನೆ ವ್ಯಾಪ್ತಿಗೆ ಬರುವ ಕಬ್ಬು ಬೆಳೆಗಾರರು ಕಾರ್ಖಾನೆಗೆ ಕಬ್ಬು ಸಾಗಿಸಲು ಜಿಲ್ಲಾಡಳಿತ ಎಲ್ಲಾ ರೀತಿಯ ಅನುಕೂಲ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ತಿಮ್ಮಪ್ಪ, ಸ್ವರಾಜ್ ಇಂಡಿಯಾ ಪಕ್ಷದ ಅಧ್ಯಕ್ಷ ಗರುಡಗಂಭ ಸ್ವಾಮಿ, ವಿದ್ಯಾರ್ಥಿ ರೈತ ಘಟಕದ ಅಧ್ಯಕ್ಷ ಎ.ಎಸ್.ರಾಂಪ್ರಸಾದ್, ಕಬ್ಬು ಬೆಳೆಗಾರರ ಸಂಘದ ಜಿಲ್ಲಾ ಉಪಾಧ್ಯಕ್ಷ ವಿಶ್ವಾಸ್, ರೈತ ಮುಖಂಡರಾದ ಶಿವರಾಜು, ಅಶೋಕ್, ಸುಭಾಷಿನಿ, ಸೋಮೇಶ್, ಪಾಪಣ್ಣ, ರಮೇಶ್, ರಾಜಣ್ಣ ಮತ್ತಿತರರಿದ್ದರು.

ಅಂಬೇಡ್ಕರ್ ಮಹಾಬೋಧಿ ಸಂಘದ ವಾರ್ಷಿಕ ಮಹಾಸಭೆ



ಹುಣಸೂರು, ಸೆ.22- ಸದಸ್ಯರು ಸಕಾಲಕ್ಕೆ ಸಾಲ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಸಹಕರಿಸಬೇಕು ಎಂದು ಡಾ.ಬಿ.ಆರ್. ಅಂಬೇಡ್ಕರ್ ಮಹಾಬೋಧಿ ವಿವಿಧೋದ್ದೇಶ ಸಹಕಾರ ಸಂಘದ ನಿರ್ದೇಶಕ ಹೆಚ್.ಕೆ.ಗೋವಿಂದರಾಜು ಮನವಿ ಮಾಡಿದರು.

ನಗರದ ಹಳೆ ಬಸ್ ನಿಲ್ದಾಣದ ಬಳಿ ಇರುವ ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಸಂಘದ ಶ್ರೇಯಸ್ಸಿಗೆ ನಿರ್ದೇಶಕರಾದಿಯಾಗಿ ಎಲ್ಲರೂ ಪ್ರಾಮಾಣಿಕವಾಗಿ ಶ್ರಮಿಸಬೇಕು. ಅಲ್ಲದೇ ಸಾಲ ಪಡೆದ ಸದಸ್ಯರು ಸಕಾಲಕ್ಕೆ ಮರುಪಾವತಿಸುವಂತೆ ಮನವಿ ಮಾಡಿದರು.

ಸಂಘದಲ್ಲಿ ಇ-ಸ್ಟ್ಯಾಂಪಿಂಗ್ ಹಾಗೂ ಮತ್ತಿತರ ಲೇಖನಿ ಸಾಮಗ್ರಿಗಳನ್ನು ಮಾರಲಾಗುತ್ತಿದೆ. ಇದಕ್ಕೆ ಸದಸ್ಯರ ಪ್ರೋತ್ಸಾಹ ಅವಶ್ಯಕ ಎಂದ ಅವರು, ಈ ಬಾರಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುವುದು. ಅಲ್ಲದೇ ಬಡ್ತಿ ಪಡೆದ ಮತ್ತು ನಿವೃತ್ತರಾದ ಪರಿಶಿಷ್ಟ ಜಾತಿಯ ನೌಕರರನ್ನು ಸನ್ಮಾನಿಸಲಾಗುವುದು ಎಂದರು.

ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅಧ್ಯಕ್ಷ ಕೃಷ್ಣ, ಮುಂದಿನ ದಿನಗಳಲ್ಲಿ ಸಂಘದಲ್ಲಿ ಹಲವು ನೂತನ ಚಟುವಟಿಕೆ ಗಳನ್ನು ಕೈಗೊಂಡು ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ತಮ್ಮೆಲ್ಲರ ಸಹಕಾರ ಮುಖ್ಯ. ಅಲ್ಲದೇ ತಾಲೂಕಿನಲ್ಲಿ ಸದಸ್ಯತ್ವ ಅಭಿಯಾನ ಕೈಗೊಳ್ಳಲಾಗುವುದು ಎಂದರು.

ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಎನ್.ನಾಗರಾಜು, ನಿರ್ದೇಶಕರಾದ ರಾಜಪ್ಪ, ನಾಗಯ್ಯ, ಬಸವಲಿಂಗಯ್ಯ, ಪುಟ್ಟಮಾದಯ್ಯ, ಚಿಕ್ಕಸ್ವಾಮಿ, ಚಲುವರಾಜು, ಪ್ರೇಮಾ, ದಿವ್ಯಾ ಹಾಗೂ ಸದಸ್ಯರಾದ ಸಂತೋಷ, ಕಾಂತರಾಜ್, ಸೇರಿದಂತೆ ಇನ್ನಿತರರಿದ್ದರು.

ಕೋಟೆಯಲ್ಲಿ ನಾಳೆಯಿಂದ ಕುಡಿತ ಬಿಡಿಸುವ ಉಚಿತ ಶಿಬಿರ



ಹೆಚ್.ಡಿ.ಕೋಟೆ, ಸೆ.22- ಸುತ್ತೂರು ಕ್ಷೇತ್ರ ಜೆಎಸ್‌ಎಸ್ ಮಹಾವಿದ್ಯಾಪೀಠ, ವಿವಿಧ ಸಂಘ ಸಂಸ್ಥೆ, ತಾಲೂಕಿನ ವಿವಿಧ ಸಮಾಜದ ಮುಖಂಡರ ಸಹಯೋಗದಲ್ಲಿ ಸೆ.24ರಿಂದ ಅ.3ರವರೆಗೆ 13ನೇ ಕುಡಿತ ಬಿಡಿಸುವ ಉಚಿತ ಶಿಬಿರವನ್ನು ಪಟ್ಟಣದ ಜಗದ್ಗುರು ಶ್ರೀಶಿವರಾತ್ರೀಶ್ವರ ಮಂಗಳ ಮಂಟಪದಲ್ಲಿ ಆಯೋಜಿಸಲಾಗಿದೆ ಎಂದು ಬಿಡಗಲು ವಿರಕ್ತ ಮಠದ ಮಠಾಧ್ಯಕ್ಷ ಮಹದೇವಸ್ವಾಮೀಜಿ ತಿಳಿಸಿದರು.

ತಾಲೂಕು ಪತ್ರಕರ್ತರ ಸಂಘದ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮದ್ಯಪಾನ ಸೇವನೆಯಿಂದ ಆರೋಗ್ಯದ ಮೇಲೆ ಆಗುವ ದುಷ್ಪರಿಣಾಮ ಮನಗಂಡು, ಈ ಬಗ್ಗೆ ಅರಿವು ಮೂಡಿಸಲು ಉಚಿತ ಕುಡಿತ ಬಿಡಿಸುವ ಶಿಬಿರ ಆಯೋಜಿಸಲಾಗಿದೆ ಎಂದರು.

ಶಿಬಿರದಲ್ಲಿ ಪ್ರತಿದಿನ ವ್ಯಾಯಾಮ, ಧ್ಯಾನ, ಆರೋಗ್ಯ ತಪಾಸಣೆ, ಉಪನ್ಯಾಸಗಳೊಂದಿಗೆ ವಿಚಾರ ವಿನಿಮಯ ಮತ್ತು ಆಪ್ತ ಸಮಾಲೋಚನೆ ನಡೆಯುತ್ತದೆ. ಸಮಾಜದ ಮುಖ್ಯವಾಹಿನಿಗೆ ಅವರನ್ನು ಕರೆತರುವುದು ಶಿಬಿರದ ಮುಖ್ಯ ಉದ್ದೇಶ. ಮದ್ಯ ವ್ಯಸನಿಗಳಿಗೆ ಶಿಬಿರದ ನಂತರ ಹೊಸ ಜೀವನಕ್ಕೆ ಬೇಕಾಗುವ ಸಾಮಾಜಿಕ ನೆರವನ್ನು ಸಂಸ್ಥೆ ಒದಗಿಸುತ್ತದೆ. ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಹೆಸರನ್ನು ನೋಂದಾಯಿಸಿಕೊಳ್ಳಬಹುದು ಎಂದರು. ಈ ವೇಳೆ ಚುಂಚನಹಳ್ಳಿ ನವಿಲೂರು ಮಠದ ಚನ್ನಬಸವ ಸ್ವಾಮೀಜಿ, ಚಂದ್ರಮೌಳೇಶ್ವರ ಸ್ವಾಮೀಜಿ, ಶಿಬಿರದ ಅಧ್ಯಕ್ಷ ಬಿ.ವಿ. ಬಸವರಾಜು, ಸಂಚಾಲಕ ಎಂ.ಪಿ.ಸೋಮಶೇಖರ್, ಟಿಎಪಿಸಿಎಂಎಸ್ ಅಧ್ಯಕ್ಷ ಮೊತ್ತಬಸವರಾಜಪ್ಪ, ಮಾದಪ್ಪ, ಜೆ.ಪಿ.ನಾಗರಾಜು, ಭೀಮರಾಜು ಇದ್ದರು.

ಗಾವಡಗೆರೆ ರೈತ ಸೇವಾ ಸಹಕಾರ ಸಂಘಕ್ಕೆ 36.15 ಲಕ್ಷ ಲಾಭ



ಹಿರೀಕ್ಯಾತನಹಳ್ಳಿ, ಸೆ.22- ಗಾವಡಗೆರೆ ರೈತ ಸೇವಾ ಸಹಕಾರ ಸಂಘ 2021-22ನೇ ಸಾಲಿನಲ್ಲಿ 36.15 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಕಾರ್ಯ ನಿರ್ವಹಣಾಧಿಕಾರಿ ಎನ್.ಆನಂದ್ ತಿಳಿಸಿದರು.

ಗಾವಡಗೆರೆ ಶ್ರೀಬಾಲಾಜಿ ಕಲ್ಯಾಣ ಮಂಟಪದಲ್ಲಿ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ಈ ವರ್ಷ ಸಂಘದಲ್ಲಿ 185.42 ಕೋಟಿ ರೂ. ವಹಿವಾಟು ನಡೆದಿದ್ದು, ಸಂಘವು ಸಾರ್ವಜನಿಕರಿಗೆ ಪಡಿತರ ವಿತರಣೆ ಮಾಡುತ್ತಿದೆ ಹಾಗೂ ಸುತ್ತಮುತ್ತಲಿನ 27 ಗ್ರಾಮಗಳ ವ್ಯಾಪ್ತಿಗೆ ಸೇರಿದ ಸದಸ್ಯರಿಗೆ 19.50 ಕೋಟಿ ರೂ. ವಿವಿಧ ರೀತಿಯ ಸಾಲ ಸೌಲಭ್ಯಗಳನ್ನು ಕೆ.ಆರ್.ನಗರ ಶಾಖೆ ಎಸ್‌ಬಿಐ ಶಾಖೆಯ ಸಹಯೋಗದೊಂದಿಗೆ ಒದಗಿಸಲಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಸಂಘದ ಅಧ್ಯಕ್ಷ ಅಪ್ಪಾಜಿಗೌಡ, ಸದ್ಯಸರು ಸಕಾಲಕ್ಕೆ ಸಾಲ ಮರುಪಾವತಿಸಿ ಸರ್ಕಾರದ ಸಹಾಯಧನ ಸದುಪಯೋಗಪಡಿಸಿಕೊಳ್ಳಬೇಕೆಂದರು. ಸಂಘದ ಉಪಾಧ್ಯಕ್ಷ ಶಿವಶಂಕರ್ ರಾವ್ ಬೋಬಡೆ, ನಿರ್ದೇಶಕರಾದ ಬಿ.ಎಂ.ತಾರಕೇಶ್ವರಿ, ಹೊನ್ನಪ್ಪರಾವ್ ಕಾಳಿಂಗೆ, ಲೋಕನಾಥ್ ರಾವ್ ಕದಂ, ಎಂ.ಶಿವಪ್ರಸಾದ್, ಜಯಮ್ಮ, ಶಂಕರಪ್ಪ, ಶ್ರೀಕಂಠ, ಮುಕುಂದ, ಚಂದ್ರಕಲಾ, ತಿಮ್ಮನಾಯಕ, ಹಾಗೂ ಸಿಬ್ಬಂದಿ ವರ್ಗ ಹಾಗೂ ಸರ್ವ ಸದಸ್ಯರು ಹಾಜರಿದ್ದರು.

ನಾಳೆ ವಾರ್ಷಿಕ ಮಹಾಸಭೆ

ಸರಗೂರು, ಸೆ.22- ಪಟ್ಟಣದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ವಾರ್ಷಿಕ ಮಹಾಸಭೆ ಅಧ್ಯಕ್ಷ ನಾಗರಾಜರಾಮ್ ಅಧ್ಯಕ್ಷತೆಯಲ್ಲಿ ಸೆ.24ರಂದು ನಡೆಯಲಿದೆ. ಸಂಘದ ಸರ್ವ ಸದಸ್ಯರು ಸಭೆಯಲ್ಲಿ ಭಾಗವಹಿಸಬೇಕೆಂದು ಕಾರ್ಯ ನಿರ್ವಹಣಾಧಿಕಾರಿ ಪಿ.ಮಹದೇವ್ ತಿಳಿಸಿದ್ದಾರೆ.

ದೇಶದ ಇತಿಹಾಸ ಬದಲಿಸಲು ಬಿಜೆಪಿಯಿಂದ ಸಾಧ್ಯವಿಲ್ಲ

ಮಾಜಿ ಶಾಸಕ ಕಳಲೆ ಕೇಶವಮೂರ್ತಿ

ಮಲ್ಲುಂಡಿ, ಸೆ.22- ಭಾರತಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದ್ದು, ಅದನ್ನು ಬದಲಾಯಿಸಲು ಬಿಜೆಪಿಯಿಂದ ಸಾಧ್ಯವಿಲ್ಲ ಎಂದು ಮಾಜಿ ಶಾಸಕ ಕಳಲೆ ಕೇಶವಮೂರ್ತಿ ತಿಳಿಸಿದರು.

ನಂಜನಗೂಡು ತಾಲೂಕಿನ ಹಲ್ಲರೆ, ಹುರ, ಹಾಡ್ಯ, ಹೆಡಿಯಾಲ, ದುಗ್ಗಹಳ್ಳಿ ಗ್ರಾಪಂಗಳಲ್ಲಿ ಭಾರತ್ ಜೋಡೋ ಯಾತ್ರೆ ಹಿನ್ನೆಲೆಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಐತಿಹಾಸಿಕ ಭಾರತ್ ಜೋಡೋ ಯಾತ್ರೆಯನ್ನು ಎಐಸಿಸಿ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಸಲಾಗುತ್ತಿದ್ದು, ಯಾತ್ರೆಯಲ್ಲಿ ಬಿಜೆಪಿ ದುರಾಡಳಿತ, ಭ್ರಷ್ಟಾಚಾರ, ಹಗರಣಗಳ ಬಗ್ಗೆ ಜನರಿಗೆ ಜಾಗೃತಿ ಮೂಡಿಸಲಾಗುವುದು. ರಾಹುಲ್ ಗಾಂಧಿ ಅವರನ್ನು ಅದ್ದೂರಿಯಾಗಿ ಸ್ವಾಗತಿಸಲು ಅ.1ರಂದು ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಂಜನಗೂಡಿಗೆ ಆಗಮಿಸಲಿದ್ದಾರೆ. ಅ.2ರಂದು ಮಹಾತ್ಮ ಗಾಂಧಿ ಅವರು ಭೇಟಿ ನೀಡಿದ ಬದನವಾಳು ಗ್ರಾಮಕ್ಕೆ ರಾಹುಲ್ ಗಾಂಧಿ ಭೇಟಿ ನೀಡಿ ಗಾಂಧಿ ಪ್ರತಿಮೆಗೆ ಮಾಲಾರ್ಪಣೆ ಮಾಡಿ ಅಲ್ಲಿನ ಕಾರ್ಮಿಕರ ಜೊತೆ ಸಂವಾದ ನಡೆಸಲಿದ್ದಾರೆ. ಪಾದಯಾತ್ರೆಯಲ್ಲಿ 10 ಸಾವಿರಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆ ಇದ್ದು, ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಯಾತ್ರೆ ಯಶಸ್ವಿಗೊಳಿಸಬೇಕು ಎಂದು ಕರೆ ನೀಡಿದರು.



ಈ ವೇಳೆ ಉಸ್ತುವಾರಿ ಹಿರೇಹಳ್ಳಿ ಸೋಮೇಶ್, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ಹುಲ್ಲಹಳ್ಳಿ ಬ್ಲಾಕ್ ಅಧ್ಯಕ್ಷ ಶ್ರೀಕಂಠನಾಯಕ, ಅಭಿನಂದನ್ ಪಾಟೀಲ್, ಶಂಕರಪ್ಪ, ಬಸಣ್ಣ ಸೇರಿದಂತೆ ಇತರರಿದ್ದರು.

ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ

ತಿ.ನರಸೀಪುರ, ಸೆ.22- ತಾಲೂಕಿನ ತಲಕಾಡಿನ ವಿವಿಧ ಕಾಲೋನಿಗಳಲ್ಲಿ 1.40 ಕೋಟಿ ರೂ. ವೆಚ್ಚದ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಎಂ.ಅಶ್ವಿನ್ ಕುಮಾರ್ ಗುರುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಕೆಆರ್‌ಐಡಿಎಲ್ ವತಿಯಿಂದ ತಾಲೂಕಿನ ತಲಕಾಡು ಗ್ರಾಮದ ಹಳೇ ಬೀದಿ 6ನೇ ಬ್ಲಾಕ್‌ನಲ್ಲಿ 25 ಲಕ್ಷ, 40 ಲಕ್ಷ ರೂ.ಗಳಲ್ಲಿ ಮುಸ್ಲಿಂ ಬೀದಿ ಸಂಪರ್ಕಿಸುವ ಮುಖ್ಯರಸ್ತೆ ಮತ್ತು 75 ಲಕ್ಷ ರೂ.ಗಳಲ್ಲಿ ಮುಸ್ಲಿಂ ಬೀದಿ ಮತ್ತು ನಾಯಕರ ಬೀದಿಯಿಂದ ಬಸವನಗುಡ್ಡ ಸಂಪರ್ಕಿಸುವ ರಸ್ತೆಗಳಿಗೆ ಭೂಮಿ ಪೂಜೆ ನೆರವೇರಿಸಿದರು.

ನಂತರ ಮಾತನಾಡಿದ ಅವರು, ಮುಖ್ಯಮಂತ್ರಿಗಳ ವಿಶೇಷ ನಿಧಿಯಡಿ ಕ್ಷೇತ್ರಕ್ಕೆ ಅನುದಾನ ನೀಡಿದ್ದು, ಇಂದು ತಲಕಾಡಿನ 3 ಕಡೆ ರಸ್ತೆ ಮತ್ತು ಚರಂಡಿ ಕಾಮಗಾರಿಗಳಿಗೆ ಭೂಮಿ ಪೂಜೆ ಮಾಡಿದ್ದೇನೆ ಎಂದರು.

ತಲಕಾಡು-ಕೊಳ್ಳೇಗಾಲ ಸಂಪರ್ಕಿಸುವ ಸೇತುವೆ ಮಾಲಂಗಿ ಮಡುವಿನ ಸಮೀಪ ನಿರ್ಮಾಣವಾಗುತ್ತಿದ್ದು, ಸಾರ್ವಜನಿಕರ ವಿರೋಧದ ಹಿನ್ನೆಲೆಯಲ್ಲಿ ಕಾಮಗಾರಿ ಸ್ಥಗಿತಗೊಂಡಿದೆ. ಹಾಗಾಗಿ ಗ್ರಾಮದ ಸಾರ್ವಜನಿಕರು, ಮುಖಂಡರು ಚರ್ಚಿಸಿ ಜನಪರ ನಿರ್ಧಾರ ಕೈಗೊಳ್ಳಬೇಕಿದೆ. ಸೇತುವೆ ಕಾಮಗಾರಿ ಪೂರ್ಣಗೊಂಡು ಸಂಚಾರ ಆರಂಭವಾದಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿಯಾಗಲಿದೆ ಎಂದರು.



ಕಲಾಪದಲ್ಲಿ ಪ್ರಸ್ತಾಪ: ವಿಧಾನಸಭೆ ಕಲಾಪದಲ್ಲಿ ಪಾಲ್ಗೊಂಡಿದ್ದ ಶಾಸಕರು ತಿ.ನರಸೀಪುರ-ಮೈಸೂರು ಭಾಗದ ರೈತರು ಹೆಚ್ಚಾಗಿ ಭತ್ತದ ಬೆಳೆ ಅವಲಂಬಿಸಿದ್ದಾರೆ. ಆದರೆ ಇತ್ತೀಚೆಗೆ ಬಿದ್ದ ಮಳೆಯಿಂದ ರಸ್ತೆಗಳು ತೀವ್ರ ಹದಗೆಟ್ಟಿವೆ. ಹಾಗಾಗಿ ಮುಖ್ಯಮಂತ್ರಿಗಳು ರಸ್ತೆಗಳ ದುರಸ್ತಿಗೆ ಅನುದಾನ ಕೊಡುವ ಮೂಲಕ ರೈತರ ಕೃಷಿ ಚಟುವಟಿಕೆಗೆ ಅನುಕೂಲ ಕಲ್ಪಿಸಿಕೊಡುವಂತೆ ಮನವಿ ಮಾಡಿದರು.

ತಲಕಾಡು ಗ್ರಾಪಂ ಅಧ್ಯಕ್ಷ ಜಿ. ಕೆಂಪಯ್ಯ, ಮಾಜಿ ಅಧ್ಯಕ್ಷೆ ಯಶೋಧಮ್ಮ, ಸುಂದರರಾಜು, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ಮುಖಂಡ ಜೆ.ರಾಜು, ಅರಣ್ಯ ಸಮಿತಿ ಮಾಜಿ ಅಧ್ಯಕ್ಷ ಸುಂದರ, ಜೆಡಿಎಸ್ ಅಧ್ಯಕ್ಷ ಸಿ.ಬಿ ಹುಂಡಿ ಚಿನ್ನಸ್ವಾಮಿ, ಸದಸ್ಯರಾದ ಕುಮಾರ ನಾಯಕ್ ಮೋಹನ್, ಉಮೇಶ್, ಅನಿತಾ, ಉಮಾ, ಮಾದೇಶ್, ಮಹೇಶ್, ರಾಜೇಶ್, ದಳಪತಿ ಆನಂದ್, ಲಕ್ಷ್ಮಣ, ನೌಶದ್, ರಘು ಅಜ್ಮಲ್, ಮೌಲ್ವಿ ಇಜಾರುಲ್ಲಾ ಹಕ್, ಹೊಳೆಸಾಲು ಪ್ರದೀಪ್, ನರೇಗಾ ಎಡಿ ಶಶಿಕುಮಾರ್, ಎಇ ದಿಲೀಪ್, ಶಂಭುದೇವಪುರ ರಮೇಶ್, ಹಸ್ತಿಕೇರಿ ನಾಗರಾಜು ಇತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.05ಕ್ಕೆ, ಮ.1.05ಕ್ಕೆ, ಕೃಷ್ಣ ವ್ರಿಂದ ವಿಹಾರಿ (ತೆ): ಸಂ.4.20ಕ್ಕೆ, ಅವತಾರ್ (3ಡಿ)(ಇಂ): ರಾ.7ಕ್ಕೆ, ರಾ.10.05ಕ್ಕೆ.

ಸ್ಕ್ರೀನ್ 2 ಚುಪ್ (ಹಿಂ): ಬೆ.10.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಮ.1.15ಕ್ಕೆ, ಸಂ.4.15ಕ್ಕೆ.

ಸ್ಕ್ರೀನ್ 3 ರಾಜ ರಾಣಿ ರೋರರ್ ರ್ಯಾಕೆಟ್ (ಕ): ಬೆ.11.30ಕ್ಕೆ, ಮಾನ್ಸೂನ್ ರಾಗ (ಕ): ಮ.1.50ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಸಂ.5ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.7.20ಕ್ಕೆ, ರಾ.9.50ಕ್ಕೆ.

ಸ್ಕ್ರೀನ್ 4 ಗುರುಶಿಷ್ಯರು (ಕ): ಬೆ.9.55ಕ್ಕೆ, ಸಂ.4ಕ್ಕೆ, ರಾ.7.05ಕ್ಕೆ, ಟ್ರಿಗರ್ (ತ): ಮ.1.10ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ರಾ.10.10ಕ್ಕೆ.

ಐನಾಕ್ಸ್ ಮೂವೀಸ್

ದೂ : 2533444 / 2433456

ಸ್ಕ್ರೀನ್ 1 ಚುಪ್ (ಹಿಂ): ಬೆ.10.10ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ಮ.1ಕ್ಕೆ, ಅವತಾರ್ (3ಡಿ)(ಇಂ): ಮ.3.25ಕ್ಕೆ, ರಾ.10ಕ್ಕೆ, ಲಕ್ಕಿಮ್ಯಾನ್ (ಕ): ಸಂ.6.50ಕ್ಕೆ,

ಸ್ಕ್ರೀನ್ 2 ಗುರುಶಿಷ್ಯರು (ಕ): ಬೆ.9.30ಕ್ಕೆ, ಮ.12.50ಕ್ಕೆ, ರಾ.7ಕ್ಕೆ, ರಾ.10.20ಕ್ಕೆ, ಚುಪ್ (ಹಿಂ): ಸಂ.4.10ಕ್ಕೆ

ಸ್ಕ್ರೀನ್ 3 ಟ್ರಿಗರ್ (ತ): ಬೆ.11ಕ್ಕೆ, ದೊಂಗಲುನ್ನಾರು ಜಾಗ್ರತ (ತೆ): ಮ.1.45ಕ್ಕೆ, ಕೃಷ್ಣ ವ್ರಿಂದ ವಿಹಾರಿ (ತೆ): ರಾ.7.15ಕ್ಕೆ, ಗುರುಶಿಷ್ಯರು (ಕ): ಮ.3.55ಕ್ಕೆ, ಚುಪ್ (ಹಿಂ): ರಾ.10.10ಕ್ಕೆ.

ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ)(ಹಿಂ): ರಾ.10.05ಕ್ಕೆ, ಸಂ.4.40ಕ್ಕೆ, ರಾ.10.30ಕ್ಕೆ, ಲಕ್ಕಿಮ್ಯಾನ್ (ಕ): ಮ.1.30ಕ್ಕೆ, ಧೋಕಾ ರೌಂಡ್ ಡಿ ಕಾರ್ನರ್ (ಹಿಂ): ರಾ.8.05ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821-2973519

ಸ್ಕ್ರೀನ್ 1 ಸ್ವಚ್ಛ ಕರ್ನಾಟಕ (ಕ): ಬೆ.11ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ಸಂ.4.30ಕ್ಕೆ, ಕೊಟ್ಟು (ಮ): ರಾ.7.45ಕ್ಕೆ

ಸ್ಕ್ರೀನ್ 2 ಗುರುಶಿಷ್ಯರು (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಲಕ್ಕಿಮ್ಯಾನ್ (ಕ): ಸಂ.4.45ಕ್ಕೆ.

ಸ್ಕ್ರೀನ್ 3 ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ

ಸ್ಕ್ರೀನ್ 4 ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ರಾ.7.45ಕ್ಕೆ, ಗುರುಶಿಷ್ಯರು (ಕ): ಸಂ.4.35ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.11.30ಕ್ಕೆ, ಮ.3.50ಕ್ಕೆ, ಸಂ.6.15ಕ್ಕೆ, ಮಾನ್ಸೂನ್ ರಾಗ (ಕ): ಬೆ.9.50ಕ್ಕೆ, ಮ.12.45ಕ್ಕೆ, ಮ.3.40ಕ್ಕೆ, ಸಂ.6.35ಕ್ಕೆ, ರಾ.9.30ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ಮ.12ಕ್ಕೆ, ಮ.2.45ಕ್ಕೆ, ಮ.3.30ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ವೆಂದು ತನಿಂದದು ಕಾಡು (ತ): ಬೆ.10.05ಕ್ಕೆ, ಬೆ.11.30ಕ್ಕೆ, ಮ.3.05ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ವೇರ್ ದಿ ಕ್ರೌಡಾಡ್ಸ್ ಸಿಂಗ್ (ಇಂ): ಮ.1.40ಕ್ಕೆ, ರಾ.9.45ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.7.30ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ಸಂ.4.25ಕ್ಕೆ, ರಾ.10.20ಕ್ಕೆ, ಜಹಾನ್ ಚಾರ್ ಯಾರ್ (ಹಿಂ): ಮ.1.05ಕ್ಕೆ, ಸಿಯಾ (ಹಿಂ): ರಾ.7.05ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಕಾರ್ತಿಕೇಯ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಶಂಶೀರ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಗುರುಶಿಷ್ಯರು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಟ್ರಿಗರ್ (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ರಾಜಾ ರಾಣಿ ರೋರರ್ ರಾಕೆಟ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗುರುಶಿಷ್ಯರು (ಕ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ-2 (ಕ)	4 ಪ್ರದರ್ಶನಗಳು

ಮೈಸೂರು ರೇಸುಗಳು-2022



8ನೇ ದಿನ, ಶುಕ್ರವಾರ 23-9-2022

ಇಂದಿನ ರೇಸಿಗೆ ನಮ್ಮ ಆಂಯ್ಕೆ

(ಮೊದಲನೇ ರೇಸ್ ಮಧ್ಯಾಹ್ನ 2.30 ಗಂಟೆಗೆ)

I. J. ಟೆರಿಲ್ ಮೆಮೋರಿಯಲ್ ಪ್ಲೇಟ್-1400 ಮೀ. ರೇಟೆಡ್ 00 ರಿಂದ 25. (ಮೈಸೂರ್ ಬೇಸ್ಡ್ ಹಾರ್ಸ್). ಮ.2.30ಕ್ಕೆ
1. ನ್ಯೂಸ್ ಮೇಕರ್ 2. ಸ್ಪಿರಿಚ್ಯುಯಲ್ ಕ್ವೀನ್ 3. ಫೆಸ್ಟೀವ್ ಸ್ಟಾರ್

II. ಉದಗಮಂಡಲಂ ಟ್ರೋಫಿ ಡಿ2-1200 ಮೀ. ರೇಟೆಡ್ 20 ರಿಂದ 45. ಮ.3.00ಕ್ಕೆ
1. ಸಿಲ್ವರ್ ಡೇಸ್ ಅಗೇನ್ 2. ಏಂಜಲ್ ಡ್ರೀಮ್ಸ್ 3. ಕೂರ್ಗ್ ಜನರಲ್

III. ಉದಗಮಂಡಲಂ ಟ್ರೋಫಿ ಡಿ1-1200 ಮೀ. ರೇಟೆಡ್ 20 ರಿಂದ 45. ಮ.3.30ಕ್ಕೆ
1 ಪಿನ್ನಾಂಕಲ್ ಪಾಯಿಂಟ್ 2 ಕ್ಲೆವರ್ ಹನ್ಸ್ 3. ಬೆನೆಡಿಕ್ಟನ್

IV. ಸಿವಿಲ್ ಸರ್ವೀಸಸ್ ಟ್ರೋಫಿ -1400 ಮೀ. 3 ವರ್ಷದ (ಟರ್ಮ್ಸ್) ಮೈಸೂರ್ ಬೇಸ್ಡ್ ಹಾರ್ಸ್. ಸಂ.4.00ಕ್ಕೆ
1. ಮಿಲೋಸ್ 2. ಓ ಕನ್ನಯ್ಯ 3. ಮೆಡೌವ್ ಫ್ಲವರ್

V. ನಾಗಾಲ್ಯಾಂಡ್ ಪ್ಲೇಟ್- 1400 ಮೀ. ರೇಟೆಡ್ 40 ರಿಂದ 65. (ನೋವಿಫ್). ಸಂ.4.30ಕ್ಕೆ
1. ಮೆಮೋರಿಟರ್ 2. ಏಸ್‌ರೋಸ್ 3. ಫರ್‌ನೆಟ್ ಬ್ರಾಂಕಾ

VI. ಉದಗಮಂಡಲಂ ಟ್ರೋಫಿ ಡಿ3-1200 ಮೀ. ರೇಟೆಡ್ 20 ರಿಂದ 45. ಸಂ.5.00ಕ್ಕೆ
1. ಆಲ್‌ಟೈರ್ 2. ಥಿಂಕ್ ಎನ್ ಪ್ಲೈ 3. ದಿ ಕಿಂಗ್ ಎನ್‌ಐ

ದಿನದ ಅತ್ಯುತ್ತಮ	: ಮಿಲೋಸ್
ಡಬ್ಬಲ್	: ನ್ಯೂಸ್ ಮೇಕರ್, ಮೆಮೋರಿಟರ್
ಜಾಕ್‌ಪಾಟ್	: 2, 3, 4, 5 ಮತ್ತು 6
I ಟ್ರಿಬಲ್	: 1, 2 ಮತ್ತು 3
II ಟ್ರಿಬಲ್	: 4, 5 ಮತ್ತು 6
ಎಕ್ಸ್‌ಆಕ್ಸ್	: 5 ಮತ್ತು 6

ಟಿಪ್ ಸ್ಟರ್ ಪಿಜೆಸಿ

ಸಾಲಬಾಧೆ: ರೈತ ಆತ್ಮಹತ್ಯೆ



ಹನಗೋಡು, ಸೆ.22- ಸಾಲಬಾಧೆ ತಾಳಲಾರದೇ ರೈತರೊಬ್ಬರು ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಇಲ್ಲಿಗೆ ಸಮೀಪದ ಹೊಸಕೊಪ್ಪಲು ಗ್ರಾಮದಲ್ಲಿ ನಡೆದಿದೆ.

ಗ್ರಾಮದ ನಿವಾಸಿ ಸ್ವಾಮಿಗೌಡ (64) ಆತ್ಮಹತ್ಯೆ ಮಾಡಿಕೊಂಡವರು. ಮೃತರು ತಮ್ಮ 3 ಎಕರೆ ಜಮೀನಿನಲ್ಲಿ ಹೊಗೆಸೊಪ್ಪು ಬೆಳೆದಿದ್ದು, ವ್ಯವಸಾಯಕ್ಕಾಗಿ ಐಓಬಿ ಬ್ಯಾಂಕ್‌ನಲ್ಲಿ 7.5 ಲಕ್ಷ, ಎಲ್ ಆಂಡ್ ಟಿ ಫೈನಾನ್ಸ್‌ನಲ್ಲಿ ಟ್ರಾಕ್ಟರ್ ಸಾಲ 4 ಲಕ್ಷ, ಮನೆ ಮೇಲೆ ಆಶೀರ್ವಾದ್ ಮೈಕ್ರೋ ಫೈನಾನ್ಸ್‌ನಲ್ಲಿ 6 ಲಕ್ಷ ಸಾಲ ಮಾಡಿದ್ದರು. ಕಳೆದೆರಡು ವರ್ಷ ಅತಿವೃಷ್ಟಿಯಿಂದಾಗಿ ಬೆಳೆದ ಬೆಳೆ ಕೈ ಸೇರದೇ ನಷ್ಟ ಅನುಭವಿಸಿದ್ದರು. ಇದರಿಂದ ತೀವ್ರ ಮನನೊಂದಿದ್ದ ಅವರು ಮನೆಯಲ್ಲಿ ಯಾರೂ ಇಲ್ಲದ ವೇಳೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೃತರ ಪುತ್ರ ಕುಮಾರ್, ಹುಣಸೂರು ಗ್ರಾಮಾಂತರ ಠಾಣೆಗೆ ದೂರು ನೀಡಿದ್ದಾರೆ.



Crystal City
MUDA & RERA Aprd.
30x40
30x50
40 Acre Premium Layout
Fully Developed
5 Mins from Kuvempu Nagar
90714 01234

FOR RENT
INDUSTRIAL LAND AVAILABLE FOR GROUND RENT AT BANNIMANTAP
CONTACT :
9886950010





INDUSTRIAL SHED FOR RENT
@ Prime Location in hebbal
around 80,000 Sqft & @
Naganahalli, Mysore
Around 85000 SQft
CONTACT : 9448285757

ದಸರಾ ಹಬ್ಬದ ಪ್ರಯುಕ್ತ ಕುವೆಂಪುನಗರದ
ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಮಾತ್ರ ಮಾರಾಟ
4 ದಿನಗಳು ಮಾತ್ರ. ಸೆಪ್ಟೆಂಬರ್ 23, 24, 25 & 26
30% OFF
ಬ್ರಾಂಡೆಡ್ ಗಾರ್ಮೆಂಟ್ಸ್ & ಫುಟ್‌ವೇರ್ ಸೇಲ್
Upto 80% OFF
adidas NIKE PUMA FILA SPORTS UNDER ARMOUR dressberry NUMERO UNO SISLEY all about you The Roadster Life Co. Reebok Sprandi HRX anouk HERE&NOW KOOK N KEECH VERO MODA CONVERSE lotto CATERPILLAR U.S. POLO ASSN. aurelia ether FLYING MACHINE MANGO
ಪುರುಷರ, ಮಹಿಳೆಯರ ಹಾಗೂ ಮಕ್ಕಳ ಬ್ರಾಂಡೆಡ್ ಶೂಸ್
ಸ್ಪೋರ್ಟ್ಸ್ ಶೂಸ್, ಪಾರ್ಮಲ್ ಶೂಸ್, ಜಾಗಿಂಗ್ ಶೂಸ್, ಫ್ಲಿಪ್ ಪ್ಲಾಪ್ ಸ್ಯಾಂಡಲ್ಸ್
ಸ್ಲಿಪರ್ಸ್, ಕ್ಯಾನ್‌ವಾಸ್ ಶೂಸ್, ಲೋಪೇರ್ ಶೂಸ್ ಇನ್ನೂ ಅನೇಕ ಬಗೆಯ ಉತ್ಪನ್ನಗಳು
ರೂ. 200/– ರಿಂದ 2000/– ವರೆಗೆ
ವಿಶೇಷ ಕೌಂಟರ್‌ಗಳಲ್ಲಿ ಮಾತ್ರ
ಪುರುಷರ ಜೀನ್ಸ್ ಪ್ಯಾಂಟ್ ಅಥವಾ ಕಾಟನ್ ಪ್ಯಾಂಟ್ ಅಥವಾ ಪಾರ್ಮಲ್ ಪ್ಯಾಂಟ್ಸ್
3 ಕ್ಕೆ ರೂ. 1000/–, 1200/– 1500/– ಮಾತ್ರ
ಟೀ–ಶರ್ಟ್ಸ್ ಅಥವಾ ಪಾರ್ಮಲ್ ಶರ್ಟ್ಸ್ ಅಥವಾ ಕ್ಯಾಶುಯಲ್ ಶರ್ಟ್ಸ್
3 ಕ್ಕೆ ರೂ. 900/–, 1200/– 1500/– ಮಾತ್ರ
ಪುರುಷರ ಜಾಗಿಂಗ್ ಟ್ರ್ಯಾಕ್ ಪ್ಯಾಂಟ್ಸ್ 3ಕ್ಕೆ ರೂ. 900/– ರಿಂದ 1200/–
ಸ್ವೆಟ್ ಶರ್ಟ್ಸ್ ಅಥವಾ ಸ್ವೆಟರ್ಸ್ 3ಕ್ಕೆ ರೂ. 1500/– ಮಾತ್ರ
ಮಹಿಳೆಯರ ಕುರ್ತೀಸ್ 3ಕ್ಕೆ ರೂ. 600/–, 900/–, 1200/– ಮಾತ್ರ ಲೇಡಿಸ್ ಟಾಪ್ 3ಕ್ಕೆ ರೂ.600/– ಮಾತ್ರ
ಎಳೆಯ ಕಂದಮ್ಮಗಳ ಬಟ್ಟೆಗಳು 3ಕ್ಕೆ ರೂ. 200/– ಮಾತ್ರ ಹಾಗೂ ಮಹಿಳೆಯರ ಬ್ರಾ, ಪ್ಯಾಂಟಿ 3ಕ್ಕೆ ರೂ.100/– ಮಾತ್ರ
ಮಹಿಳೆಯರ ಜೀನ್ಸ್ ಪ್ಯಾಂಟ್ಸ್ ಅಥವಾ ಟ್ರ್ಯಾಕ್ ಪ್ಯಾಂಟ್ಸ್ 3ಕ್ಕೆ ರೂ.900/– ಮಾತ್ರ
ಸ್ಥಳ : ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ ಉದಯರವಿ ರಸ್ತೆ, ಕುವೆಂಪುನಗರ ಮೈಸೂರು
Timings : 10 am to 9 pm
PARKING FREE | CREDIT CARDS ACCEPTED

